ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 3 ಸಂಚಿಕೆ 49

ಡಿಸೆಂಬರ್ 06, 2009

ರೂ. 5/-

ಎಡಪಕ್ಷಗಳ ಬೃಹತ್ ರ್‍ಯಾಲಿ



ಕೊಡದೆ ಬಿಡೆವು ರೇಷನ್
ಜನತೆಯ ಒಕ್ಕೊರಲ ಘೋಷಣೆ



ಬಾಬ್ರಿ ಮಸೀದಿ ಧ್ವಂಸ : ಅಪರಾಧಿಗಳಿಗೆ ಏನು ಶಿಕ್ಷೆ ?



ಕಾಫಿ ಬೆಳೆಗಾರರಿಗೆ ಪ್ಯಾಕೇಜ್ ವಂಚಿಸುತ್ತಿರುವ ಸರ್ಕಾರ

ವಿದ್ಯುತ್ ದರ ಹೆಚ್ಚಳ : ಸಂಕಷ್ಟದಲ್ಲಿರುವ ಜನರಿಗೆ ಶಾಕ್ !

ಬಿಜೆಪಿ : ಆರ್‌ಎಸ್‌ಎಸ್‌ನ ರಾಜಕೀಯ ಮುಖವಾಡ

ಕಾರ್ಖಾನೆ ಪುನರಾರಂಭಕ್ಕೆ ಒತ್ತಾಯ

ಕಾಲ್ನಡಿಗೆ ಜಾಥಾ

ಹೊಸಕೋಟೆ ಎಲ್.ಎಂ.ಗ್ಲಾಸ್ ಫೈಬರ್ ಕಾರ್ಖಾನೆಯ ಪುನರಾರಂಭಕ್ಕೆ ಸರ್ಕಾರದ ವತಿಯಿಂದ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿ, ದಿನಾಂಕ 02-11-2009 ರಿಂದ 04-11-2009 ರವರೆಗೆ ಎಲ್.ಎಂ ಗ್ಲಾಸ್‌ಫೈಬರ್ ಹೊಸಕೋಟೆ ಕಾರ್ಖಾನೆಯಿಂದ ದಾಬಸ್‌ಪೇಟೆ ಕಾರ್ಖಾನೆಯುವರೆಗೆ ಕಾಲ್ನಡಿಗೆ ಜಾಥಾ ನಡೆಯಿತು.

ಪವನ (ಗಾಳಿ) ವಿದ್ಯುತ್‌ಚ್ಚಕ್ತಿ ಯಂತ್ರದ ರೆಕ್ಕೆ ತಯಾರಿಸುವ, ಹೊಸಕೋಟೆ ಕೈಗಾರಿಕೆ ಪ್ರದೇಶದಲ್ಲಿರುವ ಎಲ್.ಎಂ. ಗ್ಲಾಸ್‌ಫೈಬರ್ ಕಾರ್ಖಾನೆಯು, 1995 ರಲ್ಲಿ ಪ್ರಾರಂಭವಾಗಿ ಅಂದಿನಿಂದ ನಿರಂತರವಾಗಿ ದುಡಿದ ಕಾರ್ಮಿಕರ ಕೌಶಲ್ಯ, ಪರಿಶ್ರಮಗಳಿಂದಾಗಿ ವರ್ಷದಿಂದ ವರ್ಷಕ್ಕೆ ಲಾಭ ಮಾಡುತ್ತ ಬಂದಿದೆ. 2008 ರಲ್ಲಿ 600 ಕೋಟಿಯಷ್ಟು ವಾರ್ಷಿಕ ವಹಿವಾಟು ನಡೆಸಿದ ತಾಲ್ಲೂಕಿನ ಅತ್ಯಂತ ಬಲಿಷ್ಟ ಕಂಪನಿ ಇದಾಗಿದೆ. ಹೊಸಕೋಟೆಯ ಕಾರ್ಖಾನೆಯಲ್ಲಿ ಬಂದ ಲಾಭಾಂಶದಿಂದ 2007 ರಲ್ಲಿ ಹೊಸಕೋಟೆಯಲ್ಲಿನ ಕಾರ್ಖಾನೆಗಿಂತ 4 ಪಟ್ಟು ದೊಡ್ಡದಾದ, ಸುಮಾರು 60 ಎಕರೆ ಜಾಗದಲ್ಲಿ ದಾಬಸ್‌ಪೇಟೆ ಕೈಗಾರಿಕಾ ಪ್ರದೇಶದಲ್ಲಿ ಹೊಸ ಕಾರ್ಖಾನೆ ಕಟ್ಟಿ ಅಲ್ಲಿಯೂ ಇದೇ ಉತ್ಪಾದನೆ ಆರಂಭಿಸಿದ್ದಾರೆ.

ಕಾರ್ಮಿಕರು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ 2005 ರಲ್ಲಿ ಸಂಘಟಿತರಾಗಿ ತಮ್ಮ ಸಮಸ್ಯೆ/ಬೇಡಿಕೆಗಳನ್ನು ಸಂಘದ ಮೂಲಕ ಮನವಿ ಮಾಡಿದಾಗ, ಸಂಘ ವಿರೋಧಿಯಾದ ಈ ಕಾರ್ಖಾನೆ ಮಾಲೀಕವರ್ಗವು ಸಂಘಟನೆಯನ್ನು ಮುರಿಯಲು, ಸಂಘದಲ್ಲಿ ಮುಖಂಡತ್ವವಹಿಸಿದ್ದ ಮತ್ತು ಸಕ್ರಿಯವಾಗಿ ಸಂಘಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಕಾರ್ಮಿಕರುಗಳಿಗೆಲ್ಲ ನಿರಂತರ ಕಿರುಕುಳ ನೀಡಲು ಪ್ರಾರಂಭಿಸಿತು: ಕಾರಣವೇ ಇಲ್ಲದೆ ವೇತನ ಕಡಿತಗೊಳಿಸುವುದು/ ಎಚ್ಚರಿಕೆ ನೋಟೀಸ್/ಕೆಲಸದ ಜಾಗದಲ್ಲಿ ಕಿರುಕುಳ ಶುರುಮಾಡಿದ್ದಲ್ಲದೆ ಸುಮಾರು 22 ಜನ ಕಾರ್ಮಿಕರನ್ನು ವಿನಾಕಾರಣ ಅಮಾನತ್ತು ಮಾಡಿ ನಂತರ ವಿಚಾರಣೆಯ ನಾಟಕ ನಡೆಸಿ ಈಗಾಗಲೆ 8 ಜನ ಕಾರ್ಮಿಕರುಗಳನ್ನು ಕೆಲಸದಿಂದ ವಜಾಗೊಳಿಸಿದ್ದಾರೆ.

ಕಾರ್ಖಾನೆ ಮುಚ್ಚಲು...

2009 ನೆ ಜನವರಿಯಿಂದೀಚೆಗೆ ಉದ್ಭವಿಸಿದ ವಿಶ್ವ ಆರ್ಥಿಕ ಹಿಂಜರಿತದ ಪರಿಣಾಮದ, ತಾತ್ಕಾಲಿಕ ಉತ್ಪಾದ'ನಾ ಬೇಡಿಕೆ ಕೊರತೆಯನ್ನು ದೊಡ್ಡದುಮಾಡಿ, ಹೊಸಕೋಟೆ ಕಾರ್ಖಾನೆಯಲ್ಲಿನ ಖಾಯಂ ಕೆಲಸಗಾರರನ್ನು ಮನೆಗೆ ಕಳುಹಿಸಲು ಪ್ರಯತ್ನಿಸುತ್ತಿದ್ದಾರೆ. ಗುತ್ತಿಗೆ/ಅರೆಗುತ್ತಿಗೆ/ತಾತ್ಕಾಲಿಕ ಕಾರ್ಮಿಕರಿಂದ ಕಡಿಮೆ ವೇತನದಲ್ಲಿ, ಯಾವುದೇ ಮೂಲ ಸೌಲಭ್ಯಗಳನ್ನು ನೀಡದೆ ಕೆಲಸ ಮಾಡಿಸಿಕ್ಕೊಳ್ಳುವ ಉದ್ದೇಶದಿಂದ, ಹೊಸಕೋಟೆ ಕಾರ್ಖಾನೆಯಲ್ಲಿ ನಡೆಯಬೇಕಿದ್ದ ಉತ್ಪಾದನೆ, ಕಚ್ಚಾಸಾಮಾಗ್ರಿ, ಯಂತ್ರೋಪಕರಣ ಮತ್ತು ಆಡಳಿತ ವರ್ಗದ ನೌಕರರನ್ನೆಲ್ಲಾ ದಾಬಸ್‌ಪೇಟೆಗೆ ಸಾಗಿಸಿಕೊಂಡು ಇಲ್ಲಿನ ಉತ್ಪಾದನೆಯನ್ನು ದಾಬಸ್ ಪೇಟೆಯಲ್ಲಿ ನಡೆಸುತ್ತಾ ಜೂನ್ 1 ನೆ 2009 ರಂದು ಕಾರ್ಖಾನೆ ಮುಚ್ಚಲು ಅನುಮತಿ ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದರು. ಸರ್ಕಾರದಿಂದ ಅನುಮತಿ ಕೋರಿಕೆ ತಿರಸ್ಕೃತಗೊಂಡಿತ್ತು. ಆಗ ಹೊಸಕೋಟೆ ಕಾರ್ಖಾನೆಯಲ್ಲಿ ನಡೆಯಬೇಕಿದ್ದ ಉತ್ಪಾದನೆ ಪುನರಾರಂಭಿಸಬೇಕಿದ್ದ ಕಾರ್ಖಾನೆ ಆಡಳಿತ ಮಂಡಳಿ ಹಾಗೆ ಮಾಡಿಲ್ಲ. ಬದಲಾಗಿ ಹೊಸ ಕಂಪನಿಯನ್ನು ಪ್ರಾರಂಭಿಸಿದರು. ಎಲ್.ಎಂ ಗ್ಲಾಸ್‌ಫೈಬರ್ ಆರ್‌ಡಿ ಎಂಬ (ಸಂಶೋದನೆ ಮತ್ತು ಅಭಿವೃದ್ದಿ) ಈ ಸಂಸ್ಥೆಗೆ ಕಾರ್ಮಿಕರಿಗೆ ಸಹಿಸಲಾರದಷ್ಟು ಅಕ್ರಮ ನಿಬಂಧನೆಗಳನ್ನು ಹೇರಿ ಸುಮಾರು 44 ಜನ ಕಾರ್ಮಿಕರನ್ನು ವರ್ಗಾವಣೆ ಮಾಡಿದರು. ಕಾರ್ಮಿಕರು ನಿಬಂಧನೆಗಳನ್ನು ಒಪ್ಪದಿದ್ದಕ್ಕೆ ಕೆಲಸ ನಿರಾಕರಣೆ ಮಾಡಿ ವೇತನ ನೀಡಲು ನಿರಾಕರಿಸುತ್ತಿದ್ದಾರೆ. ಈಗ ಕಾರ್ಮಿಕರಿಗೆ ಲೇಆಫ್ ಮಾಡಲು ಅನುಮತಿ ಕೇಳಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಸರ್ಕಾರದಿಂದ 6 ತಿಂಗಳ ಲೇಆಫ್‌ಗೆ ಅನುಮತಿ ಪಡೆದಿರುತ್ತಾರೆ. ಸರ್ಕಾರವು ಮಾಲೀಕರಿಗೆ ಲೇಆಫ್ ಮಾಡಲು ಅನುಮತಿ ನೀಡುವಾಗ, ಹೊಸಕೋಟೆ ಕಾರ್ಮಿಕರು ದಾಬಸ್ ಪೇಟೆ ಕಾರ್ಖಾನೆಗೆ ವರ್ಗಾವಣೆ ಮಾಡಿದಾಗ ಅಲ್ಲಿಗೆ ಕೆಲಸಕ್ಕೆ ಹೋಗಲು ನಿರಾಕರಿಸಿದ್ದಾರೆಂಬ ತಪ್ಪು ಕಾರಣ ನೀಡಿ ಲೇಆಫ್‌ಗೆ ಅನುಮತಿ ನೀಡಿದ್ದಾರೆ. ಕಾರ್ಖಾನೆಯ ಮಾಲೀಕರು ಗುತ್ತಿಗೆ ಕಾರ್ಮಿಕರನ್ನು ನೇಮಕ ಮಾಡಿಕೊಂಡು, ಕಾರ್ಮಿಕರಿಗೆ ಯಾವುದೇ ಸೌಲಭ್ಯ ನೀಡದೆ ಶೋಷಣೆ ಮಾಡಲು ನಡೆಸುವ ಪ್ರಯತ್ನವನ್ನು ಕಾರ್ಮಿಕ ಇಲಾಖೆಯು ಗಮನಕ್ಕೆ ತೆಗೆದುಕೊಂಡಿಲ್ಲ. ಮಾಲೀಕರೂ ಹಾಗು ಸರ್ಕಾರದ ಈ ಕ್ರಮಗಳು ಈ ಕೆಲಸವನ್ನೇ ಅವಲಂಬಿಸಿರುವ ನೂರಾರು ಕಾರ್ಮಿಕರು ಬೀದಿಪಾಲಾಗಲು ಕಾರಣವಾಗಿದೆ.

ಮತ್ತೂ ಮುಂದುವರೆದು ಹೊಸಕೋಟೆ ಕಾರ್ಮಿಕರಿಗೆ ನಿವೃತ್ತಿ ಯೋಜನೆ ಪ್ರಕಟಿಸಿ ಅಕ್ಟೋಬರ್ 24 ರೊಳಗೆ ಅರ್ಜಿ ಸಲ್ಲಿಸಿದರೆ 1ಲಕ್ಷ ರೂ. ಹೆಚ್ಚಿಗೆ ನೀಡುವುದಾಗಿ ಆಮಿಷ ಒಡ್ಡಿ ಕಾರ್ಮಿಕರುಗಳನ್ನು ಸಂಪರ್ಕಿಸಿ ಒತ್ತಡ ಹೇರಿತು.

ನವೀಕರಿಸಬಹುದಾದ ವಿದ್ಯುತ್ ತಯಾರಿಕ ವಿಭಾಗಕ್ಕೆ ಸೇರಿದ ಈ ಕಾರ್ಖಾನೆಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಕಚ್ಚಾ ಸಾಮಗ್ರಿಗಳ ಆಮದಿನ ಮೇಲೆ ಶೇ. 80 ತೆರಿಗೆ ವಿನಾಯತಿಯ ಜೊತೆಗೆ ಹಲವು ತೆರಿಗೆ ರಿಯಾಯತಿಯನ್ನು ಪಡೆಯುತ್ತಿದೆ. ಇಂದು ದೇಶದಲ್ಲಿ ಪವನ(ಗಾಳಿ) ವಿದ್ಯುತ್ ಯೋಜನೆಗಳ ಅನುಷ್ಠಾನಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವು ಯೋಜನೆಗಳನ್ನು ಹಮ್ಮಿಕ್ಕೊಂಡು ಭಾರಿ ಉತ್ತೇಜನ ನೀಡುತ್ತಿದ್ದಾಗ್ಯೂ, ಕಾರ್ಖಾನೆ ಆಡಳಿತ ವರ್ಗ ಈಗ ಇರುವ ತಾತ್ಕಾಲಿಕ ಬಂಡವಾಳ ಸ್ಥಗಿತತೆಯನ್ನೆ ಮುಂದು ಮಾಡಿ ಇನ್ನೆಂದು ಉತ್ಪಾದನಾ ಬೇಡಿಕೆ ಕುದುರುವುದೇ ಇಲ್ಲವೆಂಬತೆ ಹೇಳಿಕೊಳ್ಳುತ್ತಾ ಅರೆಖಾಯಂ ಕಾರ್ಮಿಕರನ್ನು ಈಗಾಗಲೆ ಮನೆಗೆ ಕಳುಹಿಸಿದ್ದು, ಖಾಯಂ ಕಾರ್ಮಿಕರನ್ನು ಬೀದಿಪಾಲು ಮಾಡಲು ಹವಣಿಸುತ್ತಿದೆ.

ಪ್ರತಿಭಟನಾ ಚಳುವಳಿ

ಕಾರ್ಖಾನೆ ಮಾಲೀಕ ವರ್ಗದ ಈ ಸ್ವರೂಪದ ಅಕ್ರಮ ಕಾರ್ಮಿಕ ನಡವಳಿಕೆಗಳನ್ನು ಖಂಡಿಸಿ ಮತ್ತು ಕಾರ್ಮಿಕ ಸಚಿವರು ತಮ್ಮ ಸ್ವ ಕ್ಷೇತ್ರದ ಕಾರ್ಮಿಕರುಗಳು ಬೀದಿಪಾಲಾಗದಂತೆ ತಡೆಯಲು ಹೊಸಕೋಟೆ ಎಲ್.ಎಂ ಗ್ಲಾಸ್‌ಫೈಬರ್ ಕಾರ್ಖಾನೆಯ ಪುನರಾರಂಭಕ್ಕೆ ಇಲಾಖೆವತಿಯಿಂದ ಅಗತ್ಯ ಕ್ರಮಕೈಗೊಳ್ಳಬೇಕೆಂದು ಒತ್ತಾಯಿಸಿ, ಬೆಂಗಳೂರು ಸಿಐಟಿಯು ಜಿಲ್ಲಾ ಸಮಿತಿ ಮುಖಂಡರುಗಳಾದ ಕಾಂ.ಮೀನಾಕ್ಷಿ ಸುಂದರಂ, ಕಾಂ. ಎನ್.ಪ್ರತಾಪ್ ಸಿಂಹ ಅವರುಗಳ ನೇತೃತ್ವದಲ್ಲಿ ಕಾರ್ಮಿಕರ ಈ ಕಾಲ್ನಡಿಗೆ ಜಾಥಾವನ್ನು ಹಮ್ಮಿಕ್ಕೊಳ್ಳಲಾಗಿತ್ತು. ಜಾಥಾದ ಉದ್ಘಾಟನೆಯನ್ನು ಸಿಐಟಿಯು ಜಿಲ್ಲಾಧ್ಯಕ್ಷರಾದ ಕಾಂ. ಹೆಚ್.ಎನ್.ಗೋಪಾಲ ಗೌಡರು ಮಾಡಿದರು. ಈ ಜಾಥಾವು 02.11.2009 ರಂದು ಹೊಸಕೋಟೆ ಕಾರ್ಖಾನೆಯಿಂದ ಪ್ರಾರಂಭವಾಗಿ ಹೊಸಕೋಟೆ, ಕೆ.ಆರ್.ಪುರಂ, ಟಿನ್ ಫ್ಯಾಕ್ಟರಿ, ಅಲಸೂರು ಲೇಕ್, ಮೇಕ್ರಿ ಸರ್ಕಲ್, ಹೆಬ್ಬಾಳ ಮತ್ತು ಬಿ.ಇ.ಎಲ್ ಸರ್ಕಲ್ ಮೂಲಕ ಹಾದು, 03-11-2009 ರಂದು ಬೆಳಿಗ್ಗೆ ಬಿ.ಇ.ಎಲ್ ಸರ್ಕಲ್‌ನಿಂದ ಮತ್ತೆ ಹೊರಟು ಯಶವಂತಪುರ, ಪೀಣ್ಯಾ ದಾಸರಹಳ್ಳಿ ಮಾರ್ಗವಾಗಿ ನೆಲಮಂಗಲದವರೆಗೆ ಹೋಗಿ ನೆಲಮಂಗಲದಿಂದ ಮತ್ತೆ 04-11-2009 ರಂದು ಬೆಳಿಗ್ಗೆ ಅಲ್ಲಿಂದ ಹೊರಟು ಮದ್ಯಾಹ್ನ ದಾಬಸ್ ಪೇಟೆ ಕಾರ್ಖಾನೆ ತಲುಪಿತು. ಅಂದು ಸಂಜೆಯವರೆಗೆ ಅಲ್ಲಿ ಧರಣಿ ನಡೆಸಲಾಯಿತು.

ಸಿಐಟಿಯು ಜಿಲ್ಲಾ ಅಧ್ಯಕ್ಷ ಹೆಚ್.ಎನ್.ಗೋಪಾಲಗೌಡ, ಮೀನಾಕ್ಷಿ ಸುಂದರಂ, ಪ್ರಾಂತ ರೈತ ಸಂಘದ ಚಂದ್ರತೇಜಸ್ವಿ, ತುಮಕೂರಿನ ಸಿಐಟಿಯು ಮುಖಂಡರಾದ ಮುಜೀಬ್ ಮುಂತಾದವರು ಪಾಲ್ಗೊಂಡಿದ್ದರು.

ಏನಾದವು ಹೇಳಿ?

ಅಗಾಧ ಖನಿಜ ಸಂಪತ್ತುಂಟು ಕೊನೆಗೆ
ಸಮೃದ್ಧ ಫಲವತ್ತಾದ ಭೂಮಿ ನಮಗೆ
ಇಷ್ಟಿದ್ದೂ ನೂರಕ್ಕೆ ಐವತ್ತು ಕೇಳಿ
ಕಡು ಬಡವರಿಹರೇಕೆ ವಂಚಕರೇ ಹೇಳಿ?

- ವಿಡಂಬಾರಿ

ನಾಳಿನ ಕಾರ್ಯಕ್ರಮ

- **ಡಿಸೆಂಬರ್ 16, 2009** ಕೇಂದ್ರ ಕಾರ್ಮಿಕ ಸಂಘಟನೆಗಳಿಂದ ಸಾರ್ವಜನಿಕ ಸಂಸ್ಥೆಗಳ ಖಾಸಗೀಕರಣ ವಿರೋಧಿಸಿ ಪಾರ್ಲಿಮೆಂಟ್ ಎದುರು ಪ್ರತಿಭಟನೆ. ದೆಹಲಿ
- **ಡಿಸೆಂಬರ್ 23, 2009.** ಭೋಪಾಲ್ ದುರಂತ : ಪರಿಹಾರ ನೀಡದ ಯೂನಿಯನ್ ಕಾರ್ಬೈಡ್ ಕಂಪನಿಯ ಧೋರಣೆ ಖಂಡಿಸಿ ಪ್ರತಿಭಟನೆ.
- **ಡಿಸೆಂಬರ್ 27, 28, 2009** ಎಲ್‌ಐಸಿ ಏಜೆಂಟರ 2ನೇ ರಾಜ್ಯ ಸಮ್ಮೇಳನ, ಮಂಗಳೂರು

ಸಂಪಾದಕೀಯ

ವಿದ್ಯುತ್ ದರ ಹೆಚ್ಚಳ ಜನ ವಿರೋಧಿ

ವಿದ್ಯುತ್ ಬಳಕೆಯ ಧರಗಳನ್ನು ಸರಾಸರಿ ಯೂನಿಟ್‌ಗೆ 34.16 ರಷ್ಟು ಹೆಚ್ಚಳ ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ ಹೊರಡಿಸಿರುವ ಆದೇಶವೂ ಜನವಿರೋಧಿಯಾಗಿದೆ. ಈಗಾಗಲೇ ಎಲ್ಲಾ ವಸ್ತುಗಳ ಬೆಲೆ ಏರಿಕೆ, ಜೀವನ ನಿರ್ವಹಣಾ ವೆಚ್ಚಗಳ ಭಾರದಿಂದ ತತ್ತರಿಸುತ್ತಿರುವ ಸಾಮಾನ್ಯ ಜನರಿಗೆ ಈ ಹೆಚ್ಚಳವು ಇನ್ನಷ್ಟು ಸಹಿಸಲಸದಳವಾದ ಹೊರೆಯಾಗಿದೆ. ಸಂಕಷ್ಟದಲ್ಲಿರುವ ನಾಗರೀಕರಿಗೆ ಸಾಂತ್ವನ, ಪರಿಹಾರ ನೀಡಬೇಕಾದ ಹೊತ್ತಿನಲ್ಲಿ ಈ ಏರಿಕೆಯು ಬಂದಿದೆ. ರಾಜ್ಯ ಸರ್ಕಾರವೂ ಸಹ ಯೂನಿಟ್‌ಗೆ 51 ಪೈಸೆ ಹೆಚ್ಚಳಕ್ಕೆ ಆಯೋಗವನ್ನು ಕೋರಿದ್ದು ಅದರ ಜನದ್ರೋಹಿತನವನ್ನೇ ತೋರಿಸುತ್ತದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಿಸಲು ಉತ್ಸುಕತೆಯಿಂದ ತೊಡಗಿದೆ. ಇಂತಹ ಖಾಸಗೀಕರಣವು ನಿರಂತರ ಬೆಲೆ ಏರಿಕೆಗೆ ಕಾರಣವಾಗಿ ಗ್ರಾಹಕರೇ ಇದಕ್ಕೆ ಬಲಿಪಶುಗಳು ಎಂಬ ಅಂಶವು ಮತ್ತೊಮ್ಮೆ ಸಾಬೀತಾಗಿದೆ.


ಐದು ಕಂಪನಿಗಳಿಗೂ ಪ್ರತ್ಯೇಕವಾದ ದರ ನಿಗದಿ ಮಾಡಿರುವುದು ಅತ್ಯಂತ ಅವೈಜ್ಞಾನಿಕ. ಗುಲಬರ್ಗಾ ಒಳಗೊಂಡ ಹೈದ್ರಾಬಾದ್ ಕರ್ನಾಟಕದಂತಹ ಅತ್ಯಂತ ಹಿಂದುಳಿದ (ಗೆಸ್ಕಾಂ) ಪ್ರದೇಶದ ಕಂಪನಿಗೆ ಇಂತಹ ದರಗಳು ಇನ್ನಷ್ಟು ಬರೆ ನೀಡುವಂತಹದ್ದು. ಭಾಗ್ಯಜ್ಯೋತಿ ಕುಟೀರಜ್ಯೋತಿ 10 ಹೆಚ್.ಪಿ. ಪಂಪ್‌ಸೆಟ್‌ಗಳಿಗೆ ಹೊಸ ಹೆಚ್ಚಳವಿಲ್ಲ ಎಂದರೂ ಜನರಿಗೆ ಅಗತ್ಯವಿದ್ದ ಹೆಚ್ಚಿನ ಪರಿಹಾರವಿಲ್ಲ. ಹಾಗೇ ಈಗಿನ ದರ ಏರಿಕೆಯಿಂದ ಸರ್ಕಾರವಾದರೂ ಅದನ್ನು ಭರಿಸಬೇಕು. ಸರ್ಕಾರವೂ ಈ ದಿಶೆಯಲ್ಲಿ ಹೆಚ್ಚಿನ ಸಬ್ಸಿಡಿ ನೀಡಲು ಸತತ ನಿರಾಕರಿಸುತ್ತಾ ಬಂದಿದೆ. ಆಯೋಗವು ಪಂಪ್‌ಸೆಟ್‌ಗಳಿಗೆ, ಭಾಗ್ಯಜ್ಯೋತಿ ಮುಂತಾದೆಡೆ ಮೀಟರೀಕರಣಕ್ಕೆ ಒತ್ತು ನೀಡಿರುವುದು ವಿಶ್ವಬ್ಯಾಂಕ್‌ನ ನಿರ್ದೇಶನದ ಜಾರಿಯೇ ಆಗಿದೆ. ಈಗಲೂ ನಗರ ಮುಖ್ಯವಾಗಿ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಪೂರೈಕೆಯ ಕಡಿತದಿಂದಾಗಿ ಕೃಷಿ, ಕೈಗಾರಿಕೆ ಚಟುವಟಿಕೆಗಳು, ಉತ್ಪಾದನೆಯು ಹಾನಿಗೀಡಾಗಿದೆ. ಉದ್ಯೋಗಕ್ಕೆ ಹೊಡೆತ ಬಿದ್ದಿದೆ. ಬಿಜೆಪಿ ಸರ್ಕಾರ ವಿದ್ಯುತ್ ಉತ್ಪಾದನೆಯ ಹೆಚ್ಚಳಕ್ಕೆ ಎಲ್ಲಾ ಕ್ರಮ ವಹಿಸುವುದಾಗಿ ಸಾರಿದ್ದರೂ ವಾಸ್ತವದಿಂದ ಇನ್ನೂ ಅಂತಹ ಯಾವುದೇ ಮೂಲಭೂತ ನಿರ್ಮಾಣದ ಕೆಲಸಗಳು ನಡೆದಿಲ್ಲ. ಹಣ ಹೂಡಿಕೆಯಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆಯನ್ನು ನಿರಾಕರಿಸುತ್ತಾ ಖಾಸಗೀಕರಣವನ್ನೇ ಸರ್ಕಾರ ನೆಚ್ಚಿರುವುದು ಜಲವಿದ್ಯುತ್‌ಗೆ ಸಾಧ್ಯತೆಗಳನ್ನೆಲ್ಲಾ ಬಳಸುವುದು, ಅಲ್ಲದೇ ಇತರ ಅಸಂಪ್ರದಾಯಿಕವಾದ ಲಭ್ಯವಿರುವ ಸಂಪನ್ಮೂಲಗಳನ್ನೇ ಬಳಸಿ ವಿದ್ಯುತ್ ಉತ್ಪಾದನೆಗೆ ಗಮನ ಕೊಡದಿರುವುದು ಕೊರತೆಯ ಸಮಸ್ಯೆಯನ್ನು ಗಂಭೀರಗೊಳಿಸಿದೆ. ರಾಜ್ಯ ಆರ್ಥಿಕ ಹಿಂಜರಿತವನ್ನು ಹೆಚ್ಚಿಸಿದೆ.

ವಿದ್ಯುತ್ ಮಂತ್ರಿಮಂಡಳಿ ಕಂಪನಿಗಳಲ್ಲಿ ಒಟ್ಟು ವ್ಯವಹಾರಗಳನ್ನು ಶಿಸ್ತು, ಸಮರ್ಥವಾಗಿ ಕಾರ್ಯ ನಿರ್ವಹಿಸುವ ವಿಧಾನವೂ ಇಲ್ಲವಾಗಿದೆ. ಈಗಲೂ ದುರುಪಯೋಗ, ಅರಾಜಕತೆ ಇದ್ದು ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಿದೆ. ವಿದ್ಯುತ್ ಕಳ್ಳತನ ತಡೆಯಲಾಗಿಲ್ಲ. ವಿಶೇಷವಾಗಿ ಇದು ಹೈಟೆನ್‌ಷನ್ ಲೈನಿಲ್ಲಿಯೇ ಇದ್ದು ಭಾರೀ ಕೈಗಾರಿಕೆ ಕಂಪನಿಗಳು ಇದರಲ್ಲಿರುವುದು ಸ್ಪಷ್ಟವಿದೆ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರದಲ್ಲಿ ವಿದ್ಯುತ್ ಕ್ಷೇತ್ರ ಇನ್ನಷ್ಟು ಹದಗೆಡುತ್ತಿದೆ. ಖಾಸಗೀಕರಣದಿಂದಲೇ ವಿದ್ಯುತ್ ಕೊರತೆ ನೀಗಿಸುವುದಾಗಿ ಸಾವಿರಾರು ಕೋಟಿ ರೂಪಾಯಿಗಳು ಹೂಡಿಕೆ ಮಾತನಾಡುವುದು ಬೊಗಳೆಯಾಗಿದೆ. ಕನಿಷ್ಟ ಗುಣಮಟ್ಟದ ಸತತ ವಿದ್ಯುತ್ ದೊರೆಯುವಂತೆ ಏನೊಂದೂ ಪ್ರಯತ್ನಗಳೂ ಇಲ್ಲವಾಗಿದೆ. ಭ್ರಷ್ಟತೆ ತಾಂಡವವಾಡುತ್ತಿದೆ. ವಿದ್ಯುತ್ ದರಗಳ ಹೆಚ್ಚಳವೂ ಗ್ರಾಹಕರ ಮೇಲೆ ಇನ್ನಷ್ಟು ಹೊರೆ ಹೆಚ್ಚಿಸಿ ಪಾವತಿಸುವ ಸಾಮರ್ಥ್ಯವನ್ನೇ ಕಳೆಯುತ್ತಿದೆ. ಹೀಗಾಗಿ ಅಕ್ರಮಗಳಿಗೂ ಹಾದಿ ಮಾಡುವಂತಹದ್ದಾಗಿದೆ.

ಇಂದಿನ ಸನ್ನಿವೇಶವನ್ನು ಗಮನದಲ್ಲಿರಿಸಿ ದರ ಹೆಚ್ಚಳದ ಆದೇಶವನ್ನು ರದ್ದುಗೊಳಿಸಬೇಕು. ಇಲ್ಲವಾದಲ್ಲಿ ಬರ, ನೆರೆ ಹಾವಳಿ, ಬೆಲೆ ಏರಿಕೆ ಬಾಧೆ, ಜಾಗತಿಕ ಆರ್ಥಿಕ ಹಿಂಜರಿತದಿಂದಾದ ನಿರುದ್ಯೋಗ, ಆದಾಯ ಹಾನಿಯಂತಹ ಕಾರ್ಷಿಕ ಬಿಕ್ಕಟ್ಟಿನಿಂದ ಕೃಷಿಕರು ಆತ್ಮಹತ್ಯೆಗೀಡಾಗುತ್ತಿರುವ ಸ್ಥಿತಿಯಲ್ಲಿ ಜನತೆಯು ಇದಕ್ಕಾಗಿ ಆಕ್ರೋಶವನ್ನು ಸರ್ಕಾರ ಎದುರಿಸಬೇಕಾಗುತ್ತದೆ.

ಭಾಗವತರು ಬಿಚ್ಚಿದ ಪುರಾಣವೂ ವೈವಿಧ್ಯತೆಯ ಒಡೆವ ಹುನ್ನಾರವೂ

'ಭಾರತ ಹಿಂದು ರಾಷ್ಟ್ರ. ಇಲ್ಲಿ ವಾಸವಿರುವ ಮುಸ್ಲಿಂ, ಕ್ರೈಸ್ತರ ಪೂರ್ವ ವಂಶಸ್ಥರು ಸಹ ಹಿಂದುಗಳೇ. ಅವರ ಮೂಲ ಸಂಸ್ಕೃತಿ ಕೂಡ ಹಿಂದು ಧರ್ಮದ್ದೇ. ಎಲ್ಲರೂ ಈ ದೇಶದ ಮಕ್ಕಳೇ. ಆದರೆ ಧಾರ್ಮಿಕ ಆಚರಣೆಗಳು ಮಾತ್ರವೇ ಭಿನ್ನ.' ಎಂದು ಆರ್‌ಎಸ್‌ಎಸ್‌ನ ಪರಮೋಚ್ಛ ನಾಯಕ ಮೋಹನ್‌ರಾವ್ ಭಾಗವತ್ ಬೆಂಗಳೂರಿನಲ್ಲಿ ಹೇಳಿದ್ದು ಕೆಲವರಲ್ಲಾದರೂ ಗೊಂದಲ ಹುಟ್ಟಿಸಿರಬಹುದು. ಅವರು ಅರಮನೆ ಮೈದಾನದಲ್ಲಿನ ಸಾರ್ವಜನಿಕ ಸಮಾರಂಭದಲ್ಲಿ ಚಿಡ್ಡಿಗಳ ಬಡಿಗೆ ಬೆದರಿಕೆಯ ಕಸರತ್ತು ಬಳಿಕ 'ಹಿಂದುತ್ವ'ದ 'ಅರ್ಥ' ಮನನ ಮಾಡಿಸಲು ಯತ್ನಿಸುತ್ತಿದ್ದರು!



ಇಂತಹ ಅವರ ಹಳಸಲಾದ ಹೇಳಿಕೆಗಳು ಉದಾರತೆಯನ್ನು ಪ್ರದರ್ಶಿಸುವಂತೆ ಇದ್ದರೂ ಫ್ಯಾಸಿಸ್ಟ್ ಮನೋಭಾವದಿಂದ ಹೊರತಲ್ಲ. ಭಾರತ ಜಾತ್ಯಾತೀತ ರಾಷ್ಟ್ರ. ಇದನ್ನು ಹಿಂದುರಾಷ್ಟ್ರ ಎನ್ನುವುದರ ಮೂಲಕ ಸೆಕ್ಯುಲರಿಸಂನ್ನು ಧಿಕ್ಕರಿಸಿದ್ದಾರೆ. 'ವಾಸ'ವಿರುವ ಎನ್ನುವುದು ಕೂಡ ಅನ್ಯ ಧರ್ಮೀಯರು 'ಹೊರಗಿ'ನಿಂದ ಬಂದವರೇ ಎಂದೇ ಹೇಳುತ್ತದೆ. "ಇಲ್ಲಿ ವಲಸಿಗರು ವಾಸಿಸಬಹುದಷ್ಟೇ. ಆದರೆ ನಾಗರೀಕರಲ್ಲ. ಭಾರತದ ಮೂಲ ಸಂಸ್ಕೃತಿ ವೈವಿದ್ಯತೆಯಲ್ಲ, ಬಹುಸಂಸ್ಕೃತಿಯಲ್ಲ. ಅದು ಒಂದೇ 'ಹಿಂದು ಸಂಸ್ಕೃತಿ'. ಉಳಿದ ಮುಸ್ಲಿಂ, ಕ್ರೈಸ್ತ ಇತ್ಯಾದಿ ಧರ್ಮಗಳು ಮೂಲ ಸಂಸ್ಕೃತಿಯಿಂದ ಹೊರಗೆ...." ಇಂತಹುದೇ ಮಾತುಗಳನ್ನು ಇನ್ನೊಂದು ರೀತಿಯಲ್ಲಿ ಹೇಳಿದ್ದಾರೆ. ಆರ್.ಎಸ್.ಎಸ್.ನ ಗೋಲ್ವಾಲ್ಕರ್ ಅವರ 'ಚಿಂತನ ಗಂಗಾ'ದಲ್ಲಿ ಮುಸ್ಲಿಂ, ಕ್ರೈಸ್ತ, ಕಮ್ಯೂನಿಸ್ಟರು ಶತ್ರುಗಳು, ಅವರು ಎಂದೂ ಹಿಂದುತ್ವದಲ್ಲಿ ಬೆರೆಯಲಾರರು, ಎಂದು ಅವರನ್ನು ಎರಡನೇ ದರ್ಜೆ ನಾಗರೀಕರಾಗಿಯೇ ನೋಡಬೇಕೆಂದು ಹೇಳಿದ್ದಾರೆ. ಆದ್ದರಿಂದ ಭಾರತದ ವೈವಿಧ್ಯಮಯ ಸಂಸ್ಕೃತಿಯ ವಿರುದ್ಧ ಭಾಗವತ್ ಮಾತನಾಡಿದ್ದು ಮಾತ್ರವಲ್ಲ ಅದರ ವಿರುದ್ಧವೂ ಧಾಳಿ ಮಾಡಿದ್ದಾರೆ.



ರಾಜಕೀಯ ಕಾರುಬಾರು

'ಭಾಗವತ್' (ಯಕ್ಷಗಾನದಲ್ಲಿ ಕಥೆ ಹೇಳುವಾತ) ಬಂದದ್ದು ಸಮಾರಂಭವೊಂದಕ್ಕೇ ಅಲ್ಲ. ಸತತವಾಗಿ ಜನತೆಯಿಂದ ತಿರಸ್ಕಾರಕ್ಕೆ ಒಳಗಾಗುತ್ತಿರುವ, ಆಂತರಿಕ ಕಚ್ಚಾಟ ಗಣಿ, ಭೂಮಾಫಿಯಾಗಳನ್ನು ಪೋಷಣೆ .ಮಾಡುವಂತಹ ರಾಷ್ಟ್ರಘಾತುಕ ಕೃತ್ಯಗಳಿಂದ ಬಿಜೆಪಿ ಮಾತ್ರವಲ್ಲ ಆರ್‌ಎಸ್‌ಎಸ್‌ನ ಪ್ರಭಾವ, ಪ್ರತಿಷ್ಠೆ ನೆಲಕ್ಕೆ ಇಳಿಯುತ್ತಿದೆ. ಇಂತಹದ್ದರಿಂದ ಪಾರಾಗಲು, ಭಾರತದಲ್ಲಿ ಜನಸಾಮಾನ್ಯರ ಸಂಕಷ್ಟಗಳಿಗಿಂತ ಹಿಂದುತ್ವದ ಫ್ಯಾಸಿಸ್ಟ್ ಅಜೆಂಡಾವೇ ಪರಮ ಗುರಿಯನ್ನಾಗಿಸಿಕೊಂಡಿರುವ 'ಸಂಘ'ವು ತನ್ನ ಈ ಪ್ರದರ್ಶನದ ಮೂಲಕ ಕಾರ್ಯಕರ್ತರಲ್ಲಿ ಹುರುಪಿನ ಗಾಳಿ ತುಂಬಿಸಲು ಮತ್ತು ತಾನೇ ಎಲ್ಲವುಗಳ ನಿಯಂತ್ರಕ ಶಕ್ತಿ ಎಂದು ತನ್ನ ಪಾತ್ರ ಬಿಂಬಿಸಲು ಈ ಸಂದರ್ಭಧ ಸೃಷ್ಟಿಯಾಗಿತ್ತು. ಇದೂ ಅಲ್ಲದೇ ಕೇವಲ ಸಾಂಸ್ಕೃತಿಕ ಸಂಘಟನೆಯೆಂದು ಈಗಲೂ ಹೇಳಿಕೊಳ್ಳುತ್ತಾ ನಾಚಿಕೆಯಿಲ್ಲದೇ ಕೀಳು ರಾಜಕಾರಣದಲ್ಲಿ ತೊಡಗಿರುವ ಸಂಘದ ಪ್ರಮುಖನಿಗೆ ಬಿಜೆಪಿಯನ್ನು ಸಂಘಟಿಸುವ, ಶಿಸ್ತು ಹೇಳುವ ಉಸಾಬರಿಯ ಕಾರುಬಾರು ಮಾಡಿದ್ದು ಆಯ್ತು.

ಹೆಡೆ ಎತ್ತುವ ಅಪಾಯ

ಒಟ್ಟಾರೆ ಬಿಜೆಪಿ ಪಕ್ಷದಲ್ಲಿ ಹಾಗೂ ಸರ್ಕಾರವನ್ನು ಬಾಹ್ಯ ಶಕ್ತಿಯೊಂದು ನಿಯಂತ್ರಿಸುವ ರಾಜಕಾರಣದಲ್ಲಿ ಆರ್‌ಎಸ್‌ಎಸ್ ತೊಡಗಿರುವುದು, ಭವಿಷ್ಯ ಇರುವುದು ಹಿಂದುತ್ವಕ್ಕೆ ಎಂದು ಹಿಂದುತ್ವಕ್ಕೆ ಪುನರ್ ಬದ್ಧತೆಯನ್ನು ಸಾರುತ್ತಿರುವುದು ಮುಂದಿನ ದಿನಗಳಲ್ಲಿ ಕೋಮುವಾದವು ಭೀಕರ ಸ್ವರೂಪದಲ್ಲಿ ಹೆಡೆ ಎತ್ತುವ ಅಪಾಯದ ಸೂಚನೆಯನ್ನು ನೀಡುತ್ತಿದೆ. ಅದಕ್ಕೆ ಎಲ್ಲಾ ಸಿದ್ಧತೆಗಳನ್ನು ಮಾಡುತ್ತಿದೆ. ವಿಶೇಷವಾಗಿ ಗುಜರಾತ್‌ನ ಬಳಿಕ ಕರ್ನಾಟಕವನ್ನು ಇನ್ನೊಂದು ನರಹತ್ಯೆಯ ಗುಜರಾತ್ ಮಾಡಲು ಕಾರ್ಯಯೋಜನೆ ಜಾರಿಗೊಳಿಸಲು ಉತ್ಸುಕವಾಗಿದೆ. ಇಲ್ಲಿ ಸಂಪತ್ತಿನ ಲೂಟಿಯ 'ಹಂಚಿಕೆಯ', ಅಧಿಕಾರ ಕಿತ್ತಾಟ ನಡೆದಿರುವಾಗಲೇ ರಾಜ್ಯದಲ್ಲಿ ಕೋಮು ವಿದ್ವೇಷ, ವಿಭಜನೆಯ ಕೃತ್ಯಗಳಲ್ಲಿ ತೊಡಗಿದೆ.

ರಾಜ್ಯದಲ್ಲಿ ದಾಳಿಗಳು

ಈ ವಾರವೇ ಬೀದರ್‌ನ ಹುಮ್ನಾಬಾದ್‌ನ ಬೀರ್‌ಶಿವಾ ಚರ್ಚ್‌ನ ಮೇಲೆ ಮಂಗಳವಾರ (17 ನವೆಂಬರ್) ಹಠಾತ್ ಧಾಳಿ ನಡೆಸಿ ಏಸುವಿನ ಸಿಲುಬೆ ವಿರೂಪಗೊಳಿಸಿ, ಪೀಠೋಪಕರಣಗಳನ್ನು ಚಿಡ್ಡಿಪಡೆ ಧ್ವಂಸ ಮಾಡಿದೆ. ಚರ್ಚ್‌ನ ಸುತ್ತಲಿನ ಗೋಡೆಯನ್ನು ದುಷ್ಕರ್ಮಿಗಳು ಒಡೆಯಲೆತ್ನಿಸಿದ್ದಾರೆ. ಈಗಾಗಲೇ ನಗರದಲ್ಲಿ ಕಾನೂನು, ಸುವ್ಯವಸ್ಥೆ ಹದಗೆಟ್ಟಿದೆ ಎಂದು ಜನತೆ ದೂಷಿಸುತ್ತಿದ್ದಾರೆ. ಅಲ್ಪಸಂಖ್ಯಾತರ ಮೇಲಿನ ದಾಳಿಯ ಈ ಘಟನೆಗಳನ್ನು ಆಡಳಿತ ಹೇಗೆ ನಿರ್ವಹಿಸಲಿದೆ. ಆರೋಪಿಗಳನ್ನು ಶಿಕ್ಷಿಸಲು ಕ್ರಮ ವಹಿಸಲಿದೆ ಎಂಬುದು ಅನುಮಾನವೇ. ಈ ಘಟನೆ ಕ್ರೈಸ್ತರು ಹಾಗೂ ಇತರೆ ಅಲ್ಪಸಂಖ್ಯಾತರಲ್ಲಿ ಆತಂಕ ಸೃಷ್ಟಿಸಿದೆ. ಉಭಯ ಸಮುದಾಯಗಳಲ್ಲಿ ದ್ವೇಷದ ಸೃಷ್ಟಿಯೇ ಚಿಡ್ಡಿಪಡೆಗಳ ಗುರಿ.

ಹಾಗೆಯೇ ಬೆಳಗಾಂನ ಮಸೀದಿಯೊಂದರ ಮೇಲೆಯೂ ಧಾಳಿ ನಡೆಸಲಾಗಿದೆ. ಹಾನಿ ಮಾಡಲಾಗಿದೆ. ಬೆಳಗಾಂನ್ನು ಪುನಃ ಕೋಮು ಗಲಭೆಯ ಬೆಂಕಿಯಿಂದ ಉರಿಯುವಂತೆ ಮಾಡಲು ಪೂರ್ವಸಿದ್ಧತೆ, ಪ್ರಯತ್ನಗಳ ಭಾಗವಿದು.

ಇನ್ನು ಕರಾವಳಿಯಲ್ಲಿ ನಿತ್ಯವೂ ಅಲ್ಪಸಂಖ್ಯಾತರ ಮೇಲೆ

ಪುಟ 4ಕ್ಕೆ

ಕೂಲಿ ಹಣ ದೋಚುವ ಗುತ್ತಿಗೆದಾರರಿಂದ ಕಾಂ. ಯಶವಂತ ಮೇಲೆ ಹಲ್ಲೆ

ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಗ್ರಾಮೀಣ ಪ್ರದೇಶದ ಬಡವರಲ್ಲಿ ಹೊಸ ವಿಶ್ವಾಸವನ್ನು ಮೂಡಿಸುತ್ತಿರುವ, ವರ್ಗ ಸಂಘರ್ಷವನ್ನು ತೀವ್ರಗೊಳಿಸುತ್ತಿರುವ ಯೋಜನೆ. ಮಂಡ್ಯ ಜಿಲ್ಲೆಯಂತಹ ಅರೆ ಪಾಳೇಗಾರಿ, ಪಾಳೇಗಾರಿ ಮೌಲ್ಯಗಳು, ಸಂಬಂಧಗಳು ತೀವ್ರವಾಗಿರುವ ಕಡೆ ಈ ಯೋಜನೆಯನ್ನು ಜಾರಿ ಮಾಡುವುದು ಅಷ್ಟು ಸುಲಭವಲ್ಲ. 'ಮೂರು ಕಾಸಿಗೆ' ಆಳು ಸಿಗದಂತೆ ಮಾಡುವ ಈ ಯೋಜನೆಯನ್ನು ವಿಫಲಗೊಳಿಸಲು ಅನೇಕ ಶಕ್ತಿಗಳು ಷಡ್ಯಂತ್ರ ಮಾಡುತ್ತಿದ್ದರೆ ಯೋಜನೆಯನ್ನು ದುರುಪಯೋಗ ಪಡಿಸಿಕೊಂಡು ಭ್ರಷ್ಟಾಚಾರ ಮಾಡಿ ಕೂಲಿಕಾರರಿಗೆ ಸಿಗಬೇಕಾದ ಕೂಲಿಯನ್ನು ಲಪಟಾಯಿಸುವ ಶಕ್ತಿಗಳು ಮತ್ತೊಂದು ಕಡೆ.

ಇದಕ್ಕೆ ತಾಜಾ ನಿದರ್ಶನ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು ಮರಳಿಗ ಗ್ರಾಮ ಪಂಚಾಯತಿ. ಆ ಪಂಚಾಯತಿ ವ್ಯಾಪ್ತಿಯಲ್ಲಿ ಹತ್ತಾರು ಲಕ್ಷ ರೂಪಾಯಿಯ ಕಾಮಗಾರಿಗಳು ಎಂ.ಜಿ.ಆರ್.ಇ.ಜಿ.ಎ. ಅಡಿಯಲ್ಲಿ ನಡೆದಿವೆ. ಸಾವಿರಾರು ಕೂಲಿಕಾರರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ಕೂಲಿ ಹಣ ಪಾವತಿಸಲಾಗಿದೆ. ಆದರೆ ಆ ಪಂಚಾಯತಿ ವ್ಯಾಪ್ತಿಯ ಒಬ್ಬ ಕೂಲಿಕಾರನಿಗೂ ಕೆಲಸ ನೀಡಿಲ್ಲ. ಅಲ್ಲಿ ಎರಡು ರೀತಿಯಲ್ಲಿ ಈ ಯೋಜನೆಯನ್ನು ದುರುಪಯೋಗ ಪಡಿಸಿಕೊಳ್ಳಲಾಗಿದೆ. ಮೊದಲನೆಯದಾಗಿ

ಪಂಚಾಯತಿ ವ್ಯಾಪ್ತಿಯಲ್ಲಿ ಹತ್ತಾರು ಲಕ್ಷ ರೂಪಾಯಿಯ ಕಾಮಗಾರಿಗಳು ಎಂ.ಜಿ.ಆರ್.ಇ.ಜಿ.ಎ. ಅಡಿಯಲ್ಲಿ ನಡೆದಿವೆ. ಸಾವಿರಾರು ಕೂಲಿಕಾರರ ಹೆಸರಿನಲ್ಲಿ ಬ್ಯಾಂಕ್ ಖಾತೆಗಳನ್ನು ತೆರೆದು ಕೂಲಿ ಹಣ ಪಾವತಿಸಲಾಗಿದೆ. ಆದರೆ ಆ ಪಂಚಾಯತಿ ವ್ಯಾಪ್ತಿಯ ಒಬ್ಬ ಕೂಲಿಕಾರನಿಗೂ ಕೆಲಸ ನೀಡಿಲ್ಲ. ಈ ಬಗ್ಗೆ ಕೇಳಿದರೆ ಪ್ರಶ್ನಿಸಿದವರ ಮೇಲೆ ಹಲ್ಲೆ ನಡೆದಿದೆ.

ಯಂತ್ರಗಳನ್ನು ಬಳಸಿ ಕೆಲಸ ಮಾಡಿ ಬೇನಾಮಿ ಹೆಸರುಗಳಲ್ಲಿ ಕೂಲಿ ಪಾವತಿಸಲಾಗಿದೆ. ಮತ್ತೊಂದು ಕಡೆ ಗುತ್ತಿಗೆದಾರರು ಆಳುಗಳನ್ನು ಹೊರಗಡೆಯಿಂದ ಗುತ್ತಿಗೆಗೆ ಕರೆತಂದು ಅವರಿಂದ ವಿಪರೀತ ಪ್ರಮಾಣದ ಕೆಲಸ ಮಾಡಿಸಿ ದಿನಗೂಲಿ ಲೆಕ್ಕದಲ್ಲಿ ಹಣ ಪಾವತಿಸಿ ಹೆಚ್ಚಿನ ಹಣವನ್ನು ಬೇನಾಮಿ ಹೆಸರಿಗೆ ಜಮಾ ಮಾಡಿಸಿಕೊಂಡಿದ್ದಾರೆ. ಈ ಅಕ್ರಮದಲ್ಲಿ ಗ್ರಾಮ ಪಂಚಾಯತಿ ಕಾರ್ಯದರ್ಶಿಯಿಂದ ಸ್ಥಳೀಯ ಕಾಂಗ್ರೆಸ್‌ನ ಶಾಸಕನವರೆಗೆ ಪಾಲುದಾರಿಕೆಯಿದೆ.

ಆ ಪಂಚಾಯತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್) ಎಂ.ಜಿ.ಆರ್.ಇ.ಜಿ.ಎ. ಬಗ್ಗೆ ರೈತರಿಗೆ, ಕೂಲಿಕಾರರಿಗೆ ತಿಳುವಳಿಕೆ ಮೂಡಿಸಲು ಯತ್ನಿಸಿದಾಗ ಈ ಅಕ್ರಮಗಳು ಬಯಲಾಗಲಾರಂಭಿಸಿದವು. ಈ ಯೋಜನೆಯ ವಿಷಯವನ್ನು ಕೆಪಿಆರ್‌ಎಸ್



ಮುಖಂಡ ಕಾಂ.ಯಶವಂತ್ ಜನರಿಗೆ ಹೇಳುತ್ತಿದ್ದಂತೆ ಜನರು ಉದ್ಯೋಗ ಕೇಳಲು ಆರಂಭಿಸಿ, ಪಂಚಾಯತಿ ಕಛೇರಿಗೆ ದಿನಾಂಕ 6.11.2009 ರಂದು ಮುತ್ತಿಗೆ ಕೂಡ ಹಾಕಿದರು. ಜನರ ಮುತ್ತಿಗೆಗೆ ಹೆದರಿದ ಪಂಚಾಯತಿ ಕಾರ್ಯದರ್ಶಿ ಅಂದು ಕಛೇರಿಗೆ ಬೀಗ ಜಡಿದು ನಾಪತ್ತೆ. ಆದರೂ ಪಟ್ಟು ಬಿಡದ ಜನರ ಪ್ರತಿಭಟನೆಗೆ ಮಣಿದ ತಾಲ್ಲೂಕು ಪಂಚಾಯತಿ ಸಂಜೆ 5 ಗಂಟೆಗೆ ಜನರಿಂದ ಉದ್ಯೋಗಕ್ಕೆ ಅರ್ಜಿ ಸ್ವೀಕರಿಸಿತು.

ಜನರು ಕೆಲಸಕ್ಕೆ ಬಂದರೆ ತಮಗೆ ಅವ... ತಪ್ಪಿಹೋಗುತ್ತದೆ ಎಂದು ಕುಪಿತಗೊ... ಗುತ್ತಿಗೆದಾರರು, ಜನರಲ್ಲಿ ಜಾಗೃತಿ ಮೂಡಿಸು... ರೈತ ಸಂಘದ ಮುಖಂಡ ಯಶವಂತ್ ಮೇಲೆ... ಹಲ್ಲೆ ನಡೆಸಿ ಬಾಯಿ ಮುಚ್ಚಿಸಲು ಸ... ರೂಪಿಸಿದರು. 8.11.2009 ರಂದು ಸ್ನೇಹಿ... ಮದುವೆಗೆಂದು ಮರಳಿಗ ಗ್ರಾಮಕ್ಕೆ ಹೋ... ಯಶವಂತರನ್ನು ಹಿಂಬಾಲಿಸಿ ಅವರ ಮೇಲೆ... ನಡೆಸಿ ದಮಕಿ ಹಾಕಿದರು. ಕೆಲಸ ಮಾಡದ... ಕೂಲಿಕಾರರನ್ನು ತಡೆದರು.

ಪ್ರತಿಭಟನೆ

ಅಕ್ರಮಕ್ಕೆ ಅವಕಾಶ ನೀಡಿದ ಪಂಚಾ... ಕಾರ್ಯದರ್ಶಿಯನ್ನು ಅಮಾನತ್ತು ಮಾಡಬೇ... ಕೂಲಿಕಾರರಿಗೆ ಕೆಲಸ ಹಾಗೂ ರಕ್ಷಣೆ ನೀಡಬೇ... ಹಲ್ಲೆಕೋರರ ಮೇಲೆ ಕ್ರಮ ಕೈಗೊಳ್ಳಬೇಕು ಎ... ಆಗ್ರಹಿಸಿ 12.11.2009 ರಂದು ಮದ್ದೂರು ತಾಲ... ಪಂಚಾಯತ್‌ಗೆ ಮುತ್ತಿಗೆ ಹಾಕ... ತೀರ್ಮಾನಿಸಲಾಯಿತು. ಪ್ರತಿಭಟನೆಗೆ ... ಹೋಗಬಾರದು. ಹೋದರೆ ಹಲ್ಲೆ ನಡೆಸುವ ... ಕೂಡ ಹಾಕಿ ಅದೇ ಗುತ್ತಿಗೆದಾರರು ಜನ... ತಡೆಯಲು ಯತ್ನಿಸಿದರು. ಅವರು ಬರುವ ರಸ್ತೆ... ಕಾದು ವಾಹನ ತಡೆಯಲು ಯತ್ನಿಸಿದರು. ಆದ... ಜಗ್ಗದ ಜನರು ಬೇರೆ ಮಾರ್ಗಗಳ ಮೂ... ಪ್ರತಿಭಟನೆಗೆ ಸೇರಿದರು, 300 ರಿಂದ 400 ಜ... ಸೇರಿದ ಪ್ರತಿಭಟನೆ ನಡೆಯಿತು.

ತನಿಖೆ ನಡೆಸುವ, ತಪ್ಪಿತಸ್ಥರನ್ನು ಶಿಕ್ಷಿ... ಭರವಸೆ ಮೇಲೆ ಪ್ರತಿಭಟನೆ ಅಂತ್ಯವಾಯಿ... ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ಹೋ... ಮುಂದುವರೆದಿದೆ.

ಭಾಗವತ ಬಿಚ್ಚಿದ ಪುರಾಣವ್ರಾ

ಪುಟ 3 ರಿಂದ

ಭಜರಂಗದಳ ಇತ್ಯಾದಿ ಸಂಘ ಪರಿವಾರದ ಕ್ರಿಮಿನಲ್ ಧಾಳಿ ನಡೆದೇ ಇವೆ. ಧರಿಸುವ ಉಡುಪು, ವಿವಿಧ ಧರ್ಮಗಳ ಯುವಕ- ಯುವತಿಯರ ನಡುವಿನ ಸಂಭಾಷಣೆ, ವಿನೂತನ ಶೋಧನೆಯಾದ 'ಲವ್ ಜಿಹಾದ್', ಗೋಮಾಂಸ ಹೀಗೆ ಯಾವುದೋ ಹೆಸರು ಅಲ್ಪಸಂಖ್ಯಾತರ ಮೇಲೆ ನಡೆಸುವ ದೌರ್ಜನ್ಯಗಳಿಗೆ ಕಾರಣವೆಂದು ಹೇಳಲಾಗುತ್ತಿದೆ.

ಇನ್ನು ಒಂದು ಮಹತ್ವದ ವಿಷಯವೆಂದರೆ : ಬಾಬ್ರಿ ಮಸೀದಿ ಧ್ವಂಸದ ಪ್ರಕರಣದಲ್ಲಿ ಸಂಘ ಪರಿವಾರದ ಸ್ಪಷ್ಟ ಪಾತ್ರ, ಪಿತೂರಿಗಳನ್ನು ಲಿಬರ್ಹಾನ್ ಆಯೋಗದ ವರದಿ ಹೊರತಂದ ಬೆನ್ನಲ್ಲಿ ವ್ಯಾಪ್ಕವಾದ, ಚರ್ಚೆ ನಡೆದಿವೆ. ಸಂಘ ಪರಿವಾರ ನಾಚಿಕೆ ಬಿಟ್ಟು ತನ್ನದನ್ನು ಸಮರ್ಥಿಸಿಕೊಳ್ಳುವ ಹಲವು ತಂತ್ರ ಅನುಸರಿಸುತ್ತಿದೆ. ಇದೇ ಹೊತ್ತಿನಲ್ಲಿ ಸೌಹಾರ್ದತೆಯ ತಾಣವಾಗಿರುವ ಬಾಬಾಬುಡನ್‌ಗಿರಿಯಲ್ಲಿ ಈ ವರುಷವೂ ದತ್ತ ಜಯಂತಿ ಆಚರಿಸಲು ಸಂಘ ಪರಿವಾರದ ಸಿದ್ಧತೆಗಳು ನಡೆದಿವೆ. ಈಗಾಗಲೇ ದತ್ತ ಯಜ್ಞ, ದತ್ತ ವಿಗ್ರಹ ಪೂಜೆಯನ್ನು ಗುಹೆಯ ಆವರಣದಲ್ಲಿ ನಡೆಸಿತ್ತು. ಈಗ ದತ್ತಮಾಲೆ, ದತ್ತ ಜಯಂತಿ ನಡೆಸಲು ಮುಂದಾಗಿದ್ದು ಈ ಆಚರಣೆಗಳು ಹಿಂದೆಂದೂ ಇಲ್ಲದವಾಗಿದ್ದು, 1975 ರ ಹಿಂದಿನ ಆಚರಣೆಗಳಿಗೆ ಮಾತ್ರ ಅವಕಾಶ ಎಂಬ ಸುಪ್ರಿಂ ಕೋರ್ಟ್‌ನ ನಿರ್ದೇಶಕನದ ನಗ್ನ ಉಲ್ಲಂಘನೆಯನ್ನು ಸಂಘ ಪರಿವಾರ ನಡೆಸುತ್ತಿದೆ. ಇದಕ್ಕೆ ಬಿಜೆಪಿ ಪಕ್ಷ ಹಾಗೂ ಸರ್ಕಾರ ಆಡಳಿತದ ಮೂಲಕವೂ ಸರ್ವರೀತಿಯಲ್ಲಿ ಅವಕಾಶ ಕಲ್ಪಿಸಿ ಸಂವಿಧಾನವನ್ನು ಧಿಕ್ಕರಿಸುತ್ತಿದೆ. ಕುಸಿದಿರುವ ಗುಹೆಯ ದುರಸ್ತಿ ಕಾರ್ಯಗಳು ಪಾರದರ್ಶಕವಾಗಿ, ಸಮರ್ಪಕವಾಗಿ ಆಗುತ್ತಿಲ್ಲ. ತಲೆತಲಾಂತರಗಳಿಂದ ಬರುವ ವಿವಿಧ ಧರ್ಮ, ಜಾತಿಗಳ ಭಕ್ತರಿಗೆ ಗುಹೆಯ ಪ್ರವೇಶಾವಕಾಶವೂ ನಿರಾಕರಣೆಗೊಂಡು ಪರೋಕ್ಷವಾಗಿ ವಿಳಂಬಿಸಲಾಗುತ್ತಿದೆ.

ಬಾಬಾಬುಡನ್ ಗಿರಿ

ಈಗಾಗಲೇ ದಕ್ಷಿಣದ ಆಯೋಧ್ಯೆಯನ್ನಾಗಿಸಲುವ ಗುರಿ ಹೊಂದಿರುವ ಚಿಡ್ಡಿ ಪಡೆ ಬಾಬಾಬುಡನ್ ಸ್ವಾಮಿ ದರ್ಗ - ಪೀಠವನ್ನು ಬಾಬ್ರಿ ಮಸೀದಿಯಂತೆ ಧ್ವಂಸಗೊಳಿಸುವ ಬೆದರಿಕೆಯನ್ನು ಜಾರಿಗೊಳಿಸದೇ ಸಂಘ ಪರಿವಾರ ಬಿಡುವುದೆಂದು ಹೇಳಲು ಆಸಾಧ್ಯ. ಆರ್‌ಎಸ್‌ಎಸ್ ಎಲ್ಲಾ ಕಡೆಗಳಲ್ಲಿ ಹಿಂದುತ್ವವನ್ನೇ ಜಾರಿಗೊಳಿಸುವ ಕಾರ್ಯಸೂಚಿ ತೀವ್ರಗೊಳಿಸುತ್ತಿರುವಾಗ ಧ್ವಂಸದ ಬೆದರಿಕೆಗೆ, ಕೋಮು ಗಲಭೆಗಳ ಹೆಚ್ಚಳಕ್ಕೆ ಹುನ್ನಾರ ಇದ್ದೇ ಇದೆ. ಆದ್ದರಿಂದ ಸರ್ಕಾರ ಗಿರಿಯಲ್ಲಿ ಇಲ್ಲಿನ ಸೂಫಿ-ಸಂತ ಪರಂಪರೆಗೆ, ನ್ಯಾಯಾಲಯದ ತೀರ್ಪಿಗೆ ವಿರುದ್ಧವಾಗಿ ಯಾವುದೇ ಆಚರಣೆಗಳಿಗೆ ಅವಕಾಶ ನೀಡಬಾರದು. ಅಂತಹ ಎಲ್ಲಾ ಆಚರಣೆಗಳನ್ನು ನಿಷೇಧಿಸಿ, ನಿರ್ಬಂಧಿಸಬೇಕಲ್ಲದೇ, ಕಟ್ಟುನಿಟ್ಟಿನ ಕ್ರಮ ಜರುಗಿಸಬೇಕು.

ಲವ್ ಜಿಹಾದ್

ಚಡ್ಡಿಗಳಿಗೆ ಕೋರ್ಟ್ ಕಪಾಳಮೋಕ್ಷ

ಹಿಂದೂ ಯುವತಿಯರನ್ನು ಮುಸ್ಲಿಂ ಧರ್ಮಕ್ಕೆ ಮತಾಂತರಿಸಲೆಂದೇ 'ಲವ್ ಜಿಹಾದ್' ಎಂಬ 'ಅಂತರಾಷ್ಟ್ರೀಯ ಪಿತೂರಿ' ಇದೆಯೆಂದು ಬೊಬ್ಬೆ ಇಟ್ಟ ವಿಶ್ವ ಹಿಂದೂ ಪರಿಷತ್, ಬಜರಂಗದಳ ಮುಂತಾದ ಸಂಘ ಪರಿವಾರದ ಕಪಾಳಕ್ಕೆ ಏಟು ಕೊಟ್ಟಂತಹ ತೀರ್ಪನ್ನು ರಾಜ್ಯ ಹೈಕೋರ್ಟ್ ನೀಡಿದೆ. ಚಾಮರಾಜನಗರದ ಯುವತಿ ಶೈಲಾ ಕೇರಳದ ಮುಸ್ಲಿಂ ಯುವಕನನ್ನು ಪ್ರೀತಿಸಿ ಮದುವೆಯಾದದ್ದನ್ನೇ ಬಳಸಿ 'ಲವ್‌ಜಿಹಾದ್' ನಡೆಯುತ್ತಿದೆಯೆಂದು ರಾಜ್ಯದಾದ್ಯಂತ ಹುಯಿಲೆಬ್ಬಿಸಲಾಗಿತ್ತು. ಅಂತರ್‌ಧರ್ಮೀಯ ವಿವಾಹಕ್ಕೆ ವಿರೋಧವಾಗಿದ್ದ ಹುಡುಗಿಯ ಹೆತ್ತವರನ್ನು ಇದಕ್ಕೆ ಸಂಘ ಪರಿವಾರ ಬಳಸಿತ್ತು. ಅಲ್ಲದೇ ದಕ್ಷಿಣ ಕನ್ನಡ, ಕರಾವಳಿಯ... 'ಕಾಣೆ'ಯಾಗಿದ್ದ ಯುವತಿಯರ ಪ್ರಕರಣವೂ ... ಜಿಹಾದ್ ಭಾಗವೆಂದು ಹುಯಿಲೆಬ್ಬಿಸಿದ್ದು, ... ಮೋಹನ್‌ನನ್ನು ಬಂಧಿಸಿ ವಿಚಾರಿಸಿದ... ಹೊರಬಂದ ಸರಣಿ ಹತ್ಯೆಗಳಿಂದ 'ಲವ್ ಜಿಹಾ... ಇದು ಅಲ್ಲವೆಂಬ ಸತ್ಯ ಹೊರಬಂದಿತ್ತು.

ಅದೇ ರೀತಿ ಚಾಮರಾಜನಗರದ ಯುವ... ಪ್ರಕರಣದಲ್ಲಿ ರಾಜ್ಯದ ಉನ್ನತ ಪೊಲಿ... ಅಧಿಕಾರಿಗಳು ಕರ್ನಾಟಕ, ಕೇರಳಗಳಲ್ಲಿ ವಿವರ ತ... ನಡೆಸಿ ಲವ್ ಜಿಹಾದ್‌ನ ಯಾವುದೇ ಸು... ಇಲ್ಲವಾಗಿದ್ದು ಇದು ಮಾಮೂಲಿ ಪ್ರೇಮ ವಿ... ಪ್ರಕರಣವೆಂದು ನ್ಯಾಯಾಲಯಕ್ಕೆ ತನಿಖೆ ವ... ಒಪ್ಪಿಸಿತ್ತು.

ಹೀಗೆ ಸಂಘ ಪರಿವಾರದ ಈ ಕುಕೃತ್ಯ... ಅಲ್ಪಸಂಖ್ಯಾತರ ಮೇಲಿನ ಧಾಳಿಗೆ ಅಂತಹ... ತಿರುಚಿ ಬಳಸುವ ಕುತಂತ್ರಗಳು ಬಯಲಾಗು... ಇವೆ. ಆದರೂ ಈ ಫ್ಯಾಸಿಸ್ಟ್ ಪಡೆ ತನ್ನದೇ ಕು... ಮಾಡುತ್ತಲೇ ಇದೆ. ಕೋಮು ಸಾಮರಸ್ಯ ಕೆ... ಸಮಾಜ ಒಡೆಯುವ ಈ ಶಕ್ತಿಗಳ ಮೇಲೆ ಸಕ... ಕಠಿಣ ಕ್ರಮ ಜರುಗಿಸಬಾರದೇ? ಜರುಗಿ... ಸಾಧ್ಯವಾದರೂ ಹೇಗೆ! ಚಿಡ್ಡಿವೀರ ಭಾಗವ... ಮುಂದೆ ಮುಖ್ಯಮಂತ್ರಿ ಯಡಿಯೂರಪ್ಪ ಚಿಡ್ಡಿ ತೊ... ಫ್ಯಾಸಿಸ್ಟರ ಕಾಲು ಮುಟ್ಟಿ ನಮಸ್ಕರಿಸುತ್ತಿರುವ...

ರೆಸ್ಸೆಸ್ ಒಂದು ಸಾಂಸ್ಕೃತಿಕ ಸಂಘಟನೆ. ಅದಕ್ಕೆ ರಾಜಕೀಯದಲ್ಲಿ ಆಸಕ್ತಿ ಇಲ್ಲ" ಎಂದು ೆಸ್ಸೆಸ್ ಮುಖಂಡರು ಎಷ್ಟೇ ಕಿರುಚಿಕೊಂಡರೂ ಜನತೆ ಅದನ್ನು ನಂಬುವುದಿಲ್ಲ. ಬಿಜೆಪಿ ೆಸ್ಸೆಸ್ ಕಪಿ ಮುಷ್ಟಿಯಲ್ಲಿರುವ ಕೋಮುವಾದಿ ರಾಜಕೀಯ ಪಕ್ಷ. ಅದೇ ನಿಜವಾದ ಅಪಾಯ.

ಬಿಜೆಪಿ: ಆರ್‌ಎಸ್‌ಎಸ್‌ನ ರಾಜಕೀಯ ಮುಖವಾಡ

ಜಿ.ವಿ. ಶ್ರೀರಾಮರೆಡ್ಡಿ

ೕದುತ್ವ ಸ್ತೋತ್ರ. ಭಾರತಕ್ಕೆ ಸೂತ್ರ' ಎಂದು 22-11-2009 ರಂದು ಮುಕ್ತಾಯವಾದ ೕಯ ಸ್ವಯಂ ಸೇವಕ ಸಂಘದ ದಕ್ಷಿಣ ಭಾರತದ ಸಮಾವೇಶದಲ್ಲಿ ಸಂಘದ ರಾಷ್ಟ್ರೀಯ ಂಚಾಲಕ ಮೋಹನ್ ಭಾಗವತ್ ಘೋಷಣೆ ಡಿದ್ದಾರೆ. ಅಷ್ಟಕ್ಕೆ ನಿಲ್ಲದೆ 'ಹಿಂದೂ ಧರ್ಮ ಕ್ಕೆ ಅನಿವಾರ್ಯ, ವಿವಿಧತೆ ಇದ್ದಲ್ಲಿ ಕಲಹ ಟಾಗುತ್ತದೆ. ಭಾಷೆ, ಜಾತಿ, ಸಂಸ್ಕೃತಿ ಹೆಸರಿನಲ್ಲಿ ೆ ನಡೆಯುತ್ತದೆ. ಹಿಂದುಗಳ ಮತ್ತು ಹಿಂದುತ್ವದ ಎವ ಕಡಿಮೆಯಾದ ಕಾರಣ ಪಾಕಿಸ್ತಾನ, ಘಾನಿಸ್ತಾನ, ಬಾಂಗ್ಲಾದೇಶ ಮುಂತಾದವುಗಳು ತಾಳಿದವು. ಹಿಂದುತ್ವದ ಮೂಲಕ ಅಖಂಡ ತದ ನಿರ್ಮಾಣಕ್ಕೆ ಮುಂದಾಗಬೇಕು' ಎಂದು ರು ಕರೆ ನೀಡಿದ್ದಾರೆ. ಇದು ಅಪಾಯಕಾರಿ ಫ್ಯಾಸಿಸ್ಟ್ ೕರಣೆ ಎಂಬುದನ್ನು ಯಬೇಕಿದೆ. ಈ ದೇಶದ ವಾದ ಭಯೋತ್ಪಾದಕರು ಎಂಬುದು ಇದರಿಂದಲೇ ವಾಗುತ್ತದೆ. ಜಾತಿ ವ್ಯವಸ್ಥೆಯನ್ನು ಹಾಕಿ ಅಸಹ್ಯಕರವಾದ ತೆಯನ್ನು, ಶೋಷಣೆಯನ್ನು ದ ತುಂಬಾ ತುಂಬಿ ಜಾತಿ ಷಣೆಗೆ ಮೂಲಕಾರಣ ಇವರು ಪಾದಿಸುತ್ತಿರುವುದು ದುತ್ವವಲ್ಲವೆ? ಧಾರ್ಮಿಕ ಹಿಷ್ಣುತೆಯ ಮುಖಾಂತರ ದಲ್ಲಿ ರಕ್ತದ ಓಕುಳಿ ನಡೆಸಿದವರೆ ದೇಶದಲ್ಲಿರುವ ಕ್ರಿಶ್ಚಿಯನ್ನರು, ಸ್ಲಿಂಮರು ಮೂಲತಃ ಹಿಂದುಗಳೇ ಎಂದು ಿದರೆ ಇದಕ್ಕಿಂತ ಕ್ರೂರ ವ್ಯಂಗ್ಯ ಬೇರೆ ವುದಾದರು ಇರಲಿಕ್ಕೆ ಸಾಧ್ಯವೇ? ಪಾಕಿಸ್ತಾನ, ಘಾನಿಸ್ತಾನ ಮತ್ತು ಬಾಂಗ್ಲಾದೇಶಗಳು ದೆಯಾಗಲಿಕ್ಕೆ ಹಿಂದುತ್ವದ ಪ್ರಭಾವ ಮೆಯಾಗಿದ್ದೇ ಕಾರಣ ಎಂದು ಹೇಳಿದರೆ ಈಗ ೕಶಗಳನ್ನು ಆಕ್ರಮಿಸಿಕೊಂಡು ಅಖಂಡ ಭಾರತ ಸುವುದು ಎಂದು ಅರ್ಥವಲ್ಲವೇ? ಇಂತಹ ಯಕಾರಿ ಸಿದ್ಧಾಂತವನ್ನು ಜಾರಿಗೊಳಿಸಲು ದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಮತ್ತು ೆ.ಪಿ.ಗಳನ್ನು ಮತ್ತು ಅದರ ಸಾಮಾಜಿಕ ... ನಿಗದಿಸಬೇಕೆಂದು ಕರೆ ನೀಡುವ ಮುಖಾಂತರ ಮುಂಬರುವ ದಿನಗಳಲ್ಲಿ ದೇಶಕ್ಕೆ ಎಂತಹ ಗಂಡಾಂತರ ಕಾದಿದೆಯೆಂಬ ಮುನ್ಸೂಚನೆಯನ್ನು ಭಾಗವತ್ ನೀಡಿದ್ದಾರೆ. ಜೊತೆಗೆ ಆರ್.ಎಸ್.ಎಸ್. "ತಾನು ಒಂದು ಸಾಂಸ್ಕೃತಿಕ ಸಂಘಟನೆ, ತನಗೆ ಯಾವುದೇ ರಾಜಕೀಯ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲ" ಎಂದು ಹೇಳಿಕೊಳ್ಳುವುದು ಎಷ್ಟು ನಯವಂಚನೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.



ವಿಭಜಕ ಸಿದ್ಧಾಂತ

ಮೋಹನ್ ಬಾಗವತ್‌ರಿಗೆ ಇತಿಹಾಸದ ತಿಳುವಳಿಕೆ ಇಲ್ಲದೆ ಈ ರೀತಿ ಹೇಳಿದ್ದಾರೆಂದು ಭಾವಿಸಬಾರದು. ಇವರ ವಂಚನೆಗೆ ಒಂದು ಉದಾಹರಣೆ ಮಹಮ್ಮದಾಲಿ ಜಿನ್ನಾ ಪ್ರತಿಪಾದಿಸಿದ ದ್ವಿರಾಷ್ಟ್ರ ಸಿದ್ಧಾಂತವನ್ನು ಮೋಹನ್ ಭಾಗವತ್‌ರ ಪೂರ್ವಜ ವಿನಾಯಕ ದಾಮೋದರ ಸಾವರ್ಕರ್ ಅಲ್ಲವೇ ಮೊದಲಿಗೆ ದೇಶದಲ್ಲಿ ಬಿತ್ತಿದ್ದು. ಈ ರಾಷ್ಟ್ರ ವಿಭಜಕ ಸಿದ್ಧಾಂತವನ್ನು ಉಗ್ರವಾಗಿ ಪ್ರತಿಪಾದಿಸುತ್ತಾ ಇಲ್ಲಿ ಹಿಂದುಗಳು ಮಾತ್ರ ಇರಬೇಕೆಂದು ಹೇಳಿ ಅಲ್ಪಸಂಖ್ಯಾತ ಧರ್ಮದವರನ್ನು ಎರಡನೆ ದರ್ಜೆ ಪ್ರಜೆಗಳನ್ನಾಗಿ ಮಾಡ ಹೊರಟಿಲ್ಲವೆ? ಬಹುಮುಖಿ ಸಂಸ್ಕೃತಿಯನ್ನ ಏಕಮುಖಿಗೊಳಿಸುವ ಪ್ರಯತ್ನದ ಮುಖಾಂತರ ಇಡೀ ದೇಶಕ್ಕೆ ಬೆಂಕಿ ಹಾಕಿ ದಿನನಿತ್ಯ ದೇಶದಲ್ಲಿರುವ ಅಲ್ಪ ಸಂಖ್ಯಾತರ ಮೇಲೆ ದಾಳಿ ದಬ್ಬಾಳಿಕೆ ಹಿಂಸೆಗಳನ್ನು ನಡೆಸುತ್ತಿರುವ ಇವರು ದೇಶವನ್ನು ಒಡೆಯುತ್ತಿದ್ದಾರೆ. ಈ ಕಾರಣದಿಂದಾಗಿಯೇ ದೇಶದಲ್ಲಿ ಭಯೋತ್ಪಾದನೆಯೆಂಬ ಪೆಡಂಭೂತವು ಕಾಡುತ್ತಿದೆ. ಸಾವಿರಾರು ಮುಗ್ದರು ಬಲಿಯಾಗುತ್ತಿದ್ದಾರೆ. ಧರ್ಮಾಂಧ ಭಯೋತ್ಪಾದಕ ಸಂಘಟನೆಗಳು 1985 ರ ಮೊದಲು ಭಾರತದಲ್ಲಿ ಯಾಕೆ ವ್ಯಾಪಕವಾಗಿ ಇರಲಿಲ್ಲ, ನಂತರ ಹೇಗೆ ಹುಟ್ಟಿದವು ಎಂಬುದು ಈ ದೇಶದ ಹಲವರಿಗೆ ತಿಳಿದಿರುವ ವಿಚಾರ. ಹಿಂದು ಧರ್ಮ ಶ್ರೇಷ್ಠವಾದದ್ದು, ಇದು ಮನುಷ್ಯನ ಜೀವನವನ್ನು ಮತ್ತು ಸಮಾಜವನ್ನು ಸರಿದಾರಿಗೆ ತರುವುದು ಎಂದು ಹೇಳಿದ್ದಾರೆ ಭಾಗವತ್. ಈ ಧರ್ಮವೇ ತಾನೆ ಜಾತಿ ಮತ್ತು ಅಸ್ಪೃಶ್ಯತೆಯನ್ನು ಬೆಳೆಸಿ ಸಮಾಜದ ಸ್ವಾತಂತ್ರ್ಯವನ್ನು ನಾಶಮಾಡಿದ್ದು, ಮನುಷ್ಯ ಮನುಷ್ಯರ ಮಧ್ಯೆ ಕಂದರವನ್ನು ಉಂಟು ಮಾಡಿದ್ದು. ಇದೇ ಈ ದೇಶಕ್ಕೆ ಕಪ್ಪು ಚುಕ್ಕೆಯಾಗಿ ನಮ್ಮನ್ನು ಮಾನವ ಸಮಾಜದ ಮುಂದೆ ಅಮಾನವೀಯರನ್ನಾಗಿ ಮಾಡಿರುವುದು.

ಚೀನಾ ದ್ವೇಷ

ಮೋಹನ್ ಭಾಗವತ್‌ರವರು ಅಮೇರಿಕಾ ಮತ್ತು ಚೀನಾ ದೇಶಗಳು' ನಮಗೆ ಅಪಾಯಕಾರಿ ಶತ್ರುಗಳೆಂದು ಹೇಳಿದ್ದಾರೆ. ಅದರಲ್ಲಿ ಮುಖ್ಯವಾಗಿ ಅಮೇರಿಕಾ ಜಗತ್ತಿನ ಮೇಲೆ ಸವಾರಿ ಮಾಡಲು ಪ್ರಯತ್ನ ಮಾಡುತ್ತಿದೆ, ನಮ್ಮ ದೇಶವನ್ನು ಹಿಡಿತದಲ್ಲಿ ಇಟ್ಟಿಕೊಳ್ಳಲು ಪ್ರಯತ್ನಮಾಡುತ್ತಿದೆ ಎಂದು ದೇಶಕ್ಕೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಸಂಘಪರಿವಾರದ ಮುಖವಾಡವೆಂದೆ ಕರೆಯಲ್ಪಟ್ಟಿದ್ದ ಅಟಲ್ ಬಿಹಾರಿ ವಾಜಪೇಯಿ ಪ್ರಧಾನ ಮಂತ್ರಿಯಾಗಿದ್ದಾಗ ಅಲ್ಲವೆ ಮೊದಲ ಬಾರಿಗೆ ಭಾರತದ ಅಲಿಪ್ತ ವಿದೇಶಾಂಗ ಧೋರಣೆಯನ್ನು ಸಂಪೂರ್ಣವಾಗಿ ಸಮಾಧಿ ಮಾಡಿ ಅಮೇರಿಕಾದ ಬಾಲಂಗೋಚಿಯಾಗುವ ವಿದೇಶಾಂಗ ಧೋರಣೆಯನ್ನು ರೂಪಿಸಿ ಭಾರತವನ್ನು ಅಮೇರಿಕಾದ ತೆಕ್ಕೆಗೆ ಹಾಕಿದ್ದು. ಚೀನಾ ಅಪಾಯಕಾರಿ ಆಗಿದ್ದರೆ, ಇದೇ ವಾಜಪೇಯಿಯವರೆ ಚೀನಾ ಮತ್ತು ಭಾರತದ ಸಂಬಂಧಗಳು ಉತ್ತಮಗೊಳ್ಳಬೇಕೆಂದು 1977 ರಲ್ಲಿ ಜನತಾ ಸರ್ಕಾರದಲ್ಲಿ ವಿದೇಶಾಂಗ ಮಂತ್ರಿಯಾಗಿ ಚೀನಾ ದೇಶಕ್ಕೆ ಭೇಟಿ ಕೊಟ್ಟಿದ್ದು, ಇದೇ ವಾಜಪೇಯಿಯವರೆ ಪ್ರಧಾನಿಯಾಗಿದ್ದಾಗ ಚೀನಾ ಜೊತೆ ಉತ್ತಮ ಸ್ನೇಹಕ್ಕಾಗಿ ಹಾತೊರೆದು ಚೀನಾಕ್ಕೆ ಭೇಟಿ ಕೊಟ್ಟು ಹಲವಾರು ಪ್ರಮುಖ ಒಪ್ಪಂದಗಳಿಗೆ ಸಹಿ ಹಾಕಿದ್ದು. ಆವಾಗ ಅಪಾಯವೆಂದು ಕಾಣದ ಚೀನಾ ಈಗ ಹೇಗೆ ಅಪಾಯಕಾರಿ ಆಗಿದ್ದು? ಈ ರೀತಿ ದ್ವಿಮುಖ ನೀತಿ ಮತ್ತು ಧೋರಣೆ ಈ ಆರ್.ಎಸ್.ಎಸ್. ನ ಹುಟ್ಟುಗುಣವಲ್ಲವೇ?

ರಹಸ್ಯ ಚರ್ಚೆಗಳು

'ನಾನು ಯಾರಿಗೂ ರಾಜಕೀಯ ಪಾಠ ಹೇಳಲು ಇಲ್ಲಿಗೆ ಬಂದಿಲ್ಲ' ಎಂದು ಹೇಳಿದ ಭಾಗವತ್ ಈ ರಾಜ್ಯದ ಮುಖ್ಯಮಂತ್ರಿಯ ಜೊತೆ ವಿ.ವಿ.ಪುರಂ ಸಂಘದ ಮುಖ್ಯಸ್ಥರೊಬ್ಬರ ಮನೆಯಲ್ಲಿ ಒಂದು ಘಂಟೆಯ ಕಾಲ ಏನು ಚರ್ಚೆ ಮಾಡಿದರು ಮತ್ತು ಇತರೆ ಮಂತ್ರಿಗಳು ನಿಮ್ಮ ಭೇಟಿ ಆದಾಗ ಅವರ ಜೊತೆ ಭಜನೆ ಮಾಡಿದರೇನು? ಚಾಮರಾಜ ಪೇಟೆಯಲ್ಲಿರುವ ಕೇಶವ ಶಿಲ್ಪದಲ್ಲಿ ಮಠಾಧೀಶರನ್ನು ಏಕೆ ಭೇಟಿ ಮಾಡಿದ್ದರು? 21ನೇ ತಾರೀಖು ಜೈನ್ ಕಾಲೇಜಿನಲ್ಲಿ ಬಿ.ಜೆ.ಪಿ. ಮತ್ತು ಇತರೆ ಸಂಘ ಪರಿವಾರದ ಪ್ರಮುಖ ಕಾರ್ಯಕರ್ತರ ಚಿಂತನ್ ಬೈಠಕ್ ಯಾತಕೊಸ್ಕರ ಮಾಡಿದರು. ಅಲ್ಲಿ ಭಾಗವತ್ ಬಿ.ಜೆ.ಪಿ. ಮುಖಂಡರಿಗೆ 'ದಕ್ಷಿಣ ಭಾರತದಲ್ಲಿ ಸ್ವಂತ ಬಲದ ಮೇಲೆ ಅಧಿಕಾರಕ್ಕೆ ಬಂದಿರುವ ಸರ್ಕಾರವನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳಬೇಕು' ಎಂದು ತಾಕೀತು ಮಾಡಲಿಲ್ಲವೆ? ಇಂತಹ ಬೂಟಾಟಿಕೆಯ ಸೋಗಲಾಡಿತನವನ್ನು ಮಾಡಿ ಯಾರನ್ನು ವಂಚಿಸಬೇಕೆಂದು ಇವರು ಪ್ರಯತ್ನಿಸುತ್ತಿದ್ದಾರೆ? 'ನನಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲ. ಬಿ.ಜೆ.ಪಿ.ಯ ಯಾವುದೇ ವಿಚಾರದಲ್ಲಿ ನಾವು ಹಸ್ತಕ್ಷೇಪ ಮಾಡುವುದಿಲ್ಲ" ಎಂದು ಹೇಳುತ್ತಿರುವ ಇವರು ದೆಹಲಿಯ ಪತ್ರಿಕಾಗೋಷ್ಠಿಯಲ್ಲಿ 'ಮುಂದಿನ ಭಾರತೀಯ ಜನತಾ ಪಕ್ಷದ ಅಧ್ಯಕ್ಷರು ದೆಹಲಿಯ ಹೊರಗಿನವರು ಆಗುತ್ತಾರೆ' ಎಂದು, 'ಅದ್ವಾನಿಯವರು ಸದ್ಯದಲ್ಲೇ ವಿರೋಧ ಪಕ್ಷದ ಸ್ಥಾನದಿಂದ ನಿರ್ಗಮಿಸುತ್ತಾರೆ' ಎಂದು ಘೋಷಣೆ ಮಾಡಿದ್ದು ಹೇಗೆ ಮತ್ತು ಯಾಕೆ? ಬಿ.ಜೆ.ಪಿ.ಯ ಬಗ್ಗೆ ಆರ್‌ಎಸ್‌ಎಸ್‌ಗೆ ಯಾವುದೇ ಕಾಳಜಿ ಇಲ್ಲದಿದ್ದರೆ ಅದರ ಆಗುಹೋಗುಗಳಲ್ಲಿ ಹಸ್ತಕ್ಷೇಪ ಮಾಡುವುದು ಏಕೆ? ಆರೆಸ್ಸೆಸ್ ಜೊತೆಗೆ ಬಿ.ಜೆ.ಪಿ.ಗೆ ಇರುವ ಸಂಬಂಧ ಯಾರಿಗೆ ಗೊತ್ತಿಲ್ಲಾ? ಹಾಗಾದರೆ ಈ ರಾಜ್ಯದ ಮುಖ್ಯಮಂತ್ರಿ ಮತ್ತು ಇತರೆ ಮಂತ್ರಿಗಳು ಚಡ್ಡಿಧಾರಿಗಳಾಗಿ ಆರ್‌ಎಸ್‌ಎಸ್ ಕವಾಯಿತ್‌ನಲ್ಲಿ ಯಾಕೆ ಭಾಗವಹಿಸಿದ್ದರು. ನಾನು ಮೊದಲಿಗೆ ಸ್ವಯಂಸೇವಕ ನಂತರ ಮುಖ್ಯಮಂತ್ರಿ ಎಂದು ಯಾಕೆ ಹೇಳಿದರು? ಬಿ.ಜೆ.ಪಿ.ಯನ್ನು ಬೆಳೆಸಲು ಮತ್ತು ಅದನ್ನು ನಿಯಂತ್ರಿಸಲು ಪ್ರಮುಖ ಸ್ಥಾನಗಳಿಗೆ ಸ್ವಯಂಸೇವಕ ಸಂಘದ ಪೂರ್ಣಾವಧಿ ಕಾರ್ಯಕರ್ತರನ್ನು ಯಾಕೆ ಬಿ.ಜೆ.ಪಿ.ಗೆ ರವಾನಿಸಿದ್ದಾರೆ? 1990ರಲ್ಲಿ ಕೇವಲ 12-13 ಜನ ಆರ್.ಎಸ್.ಎಸ್. ಪೂರ್ಣಾವಧಿ ಕಾರ್ಯಕರ್ತರನ್ನು ಬಿ.ಜೆ.ಪಿ.ಯ ಪ್ರಮುಖ ಸ್ಥಾನಗಳಿಗೆ ನೇಮಕ ಮಾಡಲಾಗಿತ್ತು. ಈಗ ಅದರ ಸಂಖ್ಯೆ ಸುಮಾರು 350 ರಿಂದ 400 ಕ್ಕೆ ಏರಿದೆ. ಹಾಗಾಗಿ ಇಡೀ ಬಿ.ಜೆ.ಪಿ.ಯನ್ನು ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಂಡು 'ನಮಗೆ ರಾಜಕೀಯ ಪಕ್ಷಗಳಲ್ಲಿ ಆಸಕ್ತಿ ಇಲ್ಲ. ಬಿ.ಜೆ.ಪಿ. ನಮಗೆ ಅನಿವಾರ್ಯವಲ್ಲ' ಎಂಬ ಹೇಳಿಕೆಗಳನ್ನು ನೀಡುವುದೇಕೆ? ಈ ದೇಶಕ್ಕೆ ನಿಜವಾಗಿಯು ಅಪಾಯ ಇರುವುದು ಆರ್‌ಎಸ್‌ಎಸ್ ಮತ್ತು ಅದರ ರಾಜಕೀಯ ಮುಖವಾಡವಾಗಿರುವ ಬಿ.ಜೆ.ಪಿ.ಯಿಂದ. ಅದರ ದುಷ್ಟ ಕೋಮುವಾದಿ ಸಿದ್ಧಾಂತ ಮತ್ತು ಕೋಮುವಾದಿ ರಾಜಕೀಯ ಚಟುವಟಿಕೆ, ಪಿತೂರಿಗಳಿಂದ ಜನತೆಗೆ ಇದನ್ನು ಎಷ್ಟೆಷ್ಟು ಬೇಗ ಮನವರಿಕೆ ಮಾಡಿಕೊಟ್ಟರೆ ಅಷ್ಟಷ್ಟೂ ದೇಶಕ್ಕೆ ಒಳ್ಳೆಯದು.

ಬೆಳ್ತಂಗಡಿ : ದಲಿತ ವ್ಯಕ್ತಿಯ ಕೊಲೆ ಸಂಚು ಬೇಧಿಸಿದ ಡಿವೈಎಫ್ಐ

ದಲಿತರೊಬ್ಬರಿಗೆ ಸೇರಿದ ಭೂಮಿ ಕಬಳಿಸಲು ಸಂಚು ಹೂಡಿದ ಜಮೀನುದಾರರು ಸಂಚು ಮಾಡಿದ್ದೇನು? ದಲಿತ ವ್ಯಕ್ತಿಯ ಕೊಲೆ ಮತ್ತು ಅದನ್ನು ಮುಚ್ಚಿಹಾಕುವ ಪ್ರಯತ್ನ. ಡಿವೈಎಫ್ಐ ನ ಸತತ ಹೋರಾಟದಿಂದ ಆರೋಪಿಗಳ ಬಂಧನವಾಗಿದೆ.

ಅಕ್ಷರಿ, ಬೆಳ್ತಂಗಡಿ

ದಲಿತನೋರ್ವನ ಜಮೀನು ಲಪಟಾಯಿಸುವ ಯತ್ನ, ಕಂದಾಯ ಪೊಲೀಸ್ ಅಧಿಕಾರಿಗಳಿಗೆ ದೂರು, ಸಮಕ್ಷಮ ವಿಚಾರಣೆಗೆ ದಿನ ನಿಗದಿ, ವಿಚಾರಣೆಗೆ 2 ದಿನ ಮೊದಲು ದಲಿತನ ಅನುಮಾನಾಸ್ಪದ ಸಾವು. ಸಹೋದರನಿಂದ ದೂರು, ತನಿಖೆಗೆ ಡಿವೈಎಫ್ಐ ಒತ್ತಾಯ, ಮೇಲಾಧಿಕಾರಿಗಳಿಗೆ ಒತ್ತಡ, ಪೊಲೀಸ್ ಠಾಣೆಗೆ ಮುತ್ತಿಗೆ, 9 ತಿಂಗಳ ಬಳಿಕ ಮಾಹಿತಿ ಹಕ್ಕು ಕಾಯ್ದೆಯ ಆಧಾರದಲ್ಲಿ ಸಾವಿನ ಅಂಶ ಬಹಿರಂಗ, ಸಾವಿಗೆ ಸಯನೈಡ್ ಕಾರಣ ಎಂಬ ಅಂಶ ಬಯಲು, ಕೊಲೆ ಪ್ರಕರಣ ದಾಖಲಿಸದ ಪೊಲೀಸರ ಮೇಲೆ ಕ್ರಮಕ್ಕೆ ಮತ್ತೆ ಡಿವೈಎಫ್ಐನಿಂದ ಮಾನವ ಹಕ್ಕು ಆಯೋಗ, ಪಶ್ಚಿಮ ವಲಯ ಐ.ಜಿ.ಪಿ. ಸೇರಿದಂತೆ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ, ಕೊನೆಗೆ 10 ತಿಂಗಳ ಬಳಿಕ ಕೊಲೆ ಪ್ರಕರಣ ದಾಖಲು, 20 ದಿನಗಳ ಬಳಿಕ ಆರೋಪಿಗಳ ಬಂಧನ, ಮತ್ತೆ ಪರಿಶಿಷ್ಟ ಜಾತಿ, ಪಂಗಡ ದೌರ್ಜನ್ಯ ತಡೆ ಕಾಯ್ದೆ ಪ್ರಕರಣ ದಾಖಲು, ಡಿವೈಎಫ್ಐ ನ ನಿರಂತರ ಹೋರಾಟಕ್ಕೆ ಕೊನೆಗೂ ಜಯ....

ಹೌದು. ಬೆಳ್ತಂಗಡಿ ತಾಲ್ಲೂಕು ಬೆಳಾಲು ಗ್ರಾಮದ ತೊಲ್ಪಾಡಿ ಬಾಬು ಮುಗೇರ ಎಂಬವರು ತನ್ನ ಪತ್ನಿ (ಸಿಐಟಿಯು ಸಂಗಾತಿ ಗುಂಪಿನ ಅಧ್ಯಕ್ಷೆ) ಗಿರಿಜ ಸೇರಿದಂತೆ ತನ್ನ ಎಳೆಯ ಮಕ್ಕಳೊಂದಿಗೆ ಜೀವಿಸುತ್ತಿದ್ದರು. ಕೂಲಿ ಕೆಲಸವೇ ಆಧಾರವಾಗಿಟ್ಟುಕೊಂಡಿದ್ದ ಬಾಬು ಮುಗೇರರವರು ಅಕ್ರಮ, ಸಕ್ರಮ ಯೋಜನೆಯಡಿಯಲ್ಲಿ ದೊರಕಿದ 1 ಎಕರೆ ಜಮೀನಿನಲ್ಲಿ ರಬ್ಬರ್ ಕೃಷಿ ಮಾಡುತ್ತಿದ್ದರು. ಈ ಜಮೀನನ್ನು ಅತಿಕ್ರಮಿಸುವ ಉದ್ದೇಶದಿಂದ ಕೆಲ ಜಮೀನ್ದಾರರು ಪ್ರಯತ್ನಿಸುತ್ತಿದ್ದರು. ಈ ಬಗ್ಗೆ 24.4.2008 ರಂದು ಪೊಲೀಸ್ ಠಾಣೆಗೆ ಬಾಬು ಮುಗೇರ ದೂರು ನೀಡಿದ್ದರು. ಈ ಬಗ್ಗೆ ಕಂದಾಯ ಇಲಾಖೆಯಲ್ಲಿ ಬಗೆಹರಿಸಲು ಸೂಚಿಸಲಾಗಿತ್ತು. ಈ ಬಗ್ಗೆ 21.08.2008 ರಂದು ತಹಶೀಲ್ದಾರರಿಗೆ ಕೂಡ ದೂರು ನೀಡಲಾಗಿತ್ತು. ಈ ಬಗ್ಗೆ ತೀರಾ ನಿರ್ಲಕ್ಷ್ಯ ವಹಿಸಿದ್ದರು. ಕಂದಾಯ ಅಧಿಕಾರಿಗಳು ಮತ್ತೆ ಕಾಲು ಕೆರೆದು ಬಂದ ಜಮೀನ್ದಾರಿಗಳು 23.11.2008 ರಂದು ತನ್ನ ಘಟಾಲಂನೊಂದಿಗೆ ಜಮೀನಿಗೆ ದೊಡ್ಡ ಅಗಳು ನಿರ್ಮಿಸಿದ್ದರು. ಈ ಬಗ್ಗೆ 21.11.2008 ರಂದು ಮತ್ತೆ ಪೊಲೀಸರಿಗೆ ದೂರು ನೀಡಲಾಯಿತು. 25.11.2008 ರಂದು ತಹಶೀಲ್ದಾರರಿಗೂ ದೂರು ನೀಡಲಾಯಿತು. 29.11.2008 ರಂದು ಎರಡೂ ಕಡೆಯವರನ್ನೂ ವಿಚಾರಣೆಗಾಗಿ ಪೊಲೀಸ್ ಠಾಣೆಗೆ ಕರೆಯಲಾಗಿತ್ತು. ಆದರೆ... ಬಾಬು ಮುಗೇರ ಮಾತ್ರ 27.11.2009 ರಂದು ಅನುಮಾನಾಸ್ಪದ ರೀತಿಯಲ್ಲಿ ಸಾವನ್ನಪ್ಪಿದರು.

ಸೋಪು, ಬಿಸ್ಕತ್‌ಗಳ ಜೊತೆ 'ಆ' ಬಾಟಲಿ

ಅಂದು 27.11.208 ರಂದು ಬಾಬು ಮುಗೇರರು ಸಂಜೆ 5.30 ರ ಸುಮಾರಿಗೆ ಕೂಲಿ ಕೆಲಸ ಮುಗಿಸಿಕೊಂಡು ತನ್ನ ಮನೆಗೆ ಹಿಂತಿರುಗುತ್ತಿದ್ದುದನ್ನು ಹೊಂಚುಹಾಕುತ್ತಿದ್ದ, ಆರೋಪಿಗಳಲ್ಲಿ ಓರ್ವ ಸಯನೈಡ್ ಬೆರೆಸಿದ ಮದ್ಯದ ಬಾಟಲಿ, ಸಂಶಯ ಬಾರದಿರಲೆಂದು ಸೋಪು, ಬಿಸ್ಕಟ್ ಪ್ಯಾಕೇಟನ್ನು ಯಾವುದೋ ವಾಹನದಿಂದ ಬಿದ್ದಂತೆ ದಾರಿಯಲ್ಲಿ ಇಟ್ಟಿದ್ದ. ಆರೋಪಿಗಳ ಸಂಚನ್ನು ತಿಳಿಯದಿದ್ದ ಬಾಬು ಮುಗೇರ ಅದನ್ನು ಹೆಕ್ಕಿಕೊಂಡು ಮನೆಗೆ ತಂದು ಬಿಸ್ಕೆಟನ್ನು ತನ್ನ ಮಕ್ಕಳಿಗೆ ನೀಡಿ, ರಾತ್ರಿ ಊಟದ ಸಮಯ ಸ್ವಲ್ಪ ಮದ್ಯವನ್ನು ಕುಡಿದು, ಆ ಕ್ಷಣದಲ್ಲಿಯೇ ಸಾವನ್ನಪ್ಪಿದರು. ಈ ವಸ್ತುಗಳು ದೊರೆತ ಸ್ಥಳದಲ್ಲಿ ಆರೋಪಿಯನ್ನು ನೋಡಿದವರಿದ್ದು ಮಾತಾಡಿಸಿದ್ದಾರೆ ಕೂಡ, ಇದು ಸಂಶಯಕ್ಕೆ ಮತ್ತಷ್ಟು ಪುಷ್ಠಿ ನೀಡಿತ್ತು.

ಜಮೀನು ವಿವಾದಕ್ಕೆ ಸಂಬಂಧಪಟ್ಟು ಪೊಲೀಸ್ ಠಾಣೆಯಲ್ಲಿ ವಿಚಾರಣೆ ಎದುರಿಸಬೇಕಾಗಿದ್ದ ಬಾಬು ಮುಗೇರ ಎರಡು ದಿನಗಳ ಮೊದಲೇ ಸಾವನ್ನಪ್ಪಿದ್ದು, ಸಂಶಯಕ್ಕೆ ಎಡೆ ಮಾಡಿಕೊಟ್ಟಿತ್ತು. ಈ ಬಗ್ಗೆ 28.11.2008 ರಂದು ಮೃತರ ತಮ್ಮ ಚೀಂಕ್ರ ಮುಗೇರ ಎಂಬವರು ದೂರು ನೀಡಿದಾಗ, ಡಿವೈಎಫ್ಐ ಸಮಗ್ರ ತನಿಖೆಗೆ ಒತ್ತಾಯಿಸಿತು. 1.12.2008 ರಂದು ಡಿವೈಎಫ್ಐ, ಐ.ಜಿ.ಪಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿ ತನಿಖೆಗೆ ಒತ್ತಾಯಿಸಿತು. ಮನವಿಗೆ ಸ್ಪಂದಿಸದಿದ್ದಾಗ 22.12.2008 ರಂದು ಪೊಲೀಸ್ ಠಾಣೆ ಮುತ್ತಿಗೆ ಹಾಕಲು ನಿರ್ಧರಿಸಲಾಯಿತು. ಈ ಮಧ್ಯೆ, ಠಾಣಾಧಿಕಾರಿಯಿಂದ ಡಿವೈಎಫ್ಐ ನಾಯಕರಿಗೆ ಬೆದರಿಕೆ, ಪ್ರತಿಭಟನೆಗೆ ಬೆಂಬಲ ನೀಡಿದ ಸಿಪಿಐ(ಎಂ) ನಾಯಕರಾದ ಬಿ.ಎಂ.ಭಟ್, ಶಿವಕುಮಾರ್‌ರೊಂದಿಗೆ ವಾಗ್ವಾದ, ಲಾಠಿಚಾರ್ಜ್ ಬೆದರಿಕೆಗಳ ನಡುವೆಯೇ ಮುತ್ತಿಗೆ. ಮರಣೋತ್ತರ ಪರೀಕ್ಷೆ ವರದಿ ಬಳಿಕ ಕ್ರಮ ಕೈಗೊಳ್ಳುವ ಭರವಸೆ ನೀಡಲಾಯಿತು. ಶಂಕಿತ ಆರೋಪಿಗಳ ಬಂಧಿಸಿ ವಿಚಾರಿಸಲಾಯಿತಾದರೂ ಫಲಿತಾಂಶ ಮಾತ್ರ ಶೂನ್ಯ.

ಆದರೆ ಪೊಲೀಸ್ ಇಲಾಖೆ ಮಾತ್ರ ಬಂದ ವರದಿಯನ್ನು ಬಂದಿಲ್ಲವೆಂದು ಹೇಳುತ್ತಾ ಸಾಗಿದ[...] ಈ ಮಧ್ಯೆ ಎಸ್.ಐ ಲಂಚಕ್ಕೆ ಕೈಚಾಚಿ ಅಮಾನ[...] ಮನೆ ಸೇರಿದರು. ಹಠ ಬಿಡದ ಡಿವೈಎಫ್ಐ [...] ತಿಂಗಳಲ್ಲಿ ಮಾಹಿತಿ ಹಕ್ಕು ಕಾಯ್ದೆಯನ್ವಯ [...] ಸಲ್ಲಿಸಿ ಮರಣೋತ್ತರ ಪರೀಕ್ಷೆ ವರದಿ ಹಾಗೂ [...] ವಿಜ್ಞಾನ ಕೇಂದ್ರದ ಪ್ರಯೋಗಾಲಯದ ವರದಿಯ[...] ಕೇಳಲಾಯಿತು. ಅದಕ್ಕೂ ಹಿಂದು ಮುಂದು ನೋ[...] ಕೊನೆಗೆ ಉಪಾಯವಿಲ್ಲದೆ ನೀಡಲಾಯಿತು. [...] ಗೊತ್ತಾದದ್ದೆ "ಬಾಬು ಮುಗೇರರ ಸಾವಿಗೆ ಸಯನ[...] ಕಾರಣ"ವೆಂದು. ಪೊಲೀಸ್ ಇಲಾ[...] ಮರಣೋತ್ತರ ಪರೀಕ್ಷೆ ವರದಿ 29.11.2008 ರ[...] ವಿಧಿವಿಜ್ಞಾನ ಕೇಂದ್ರದ ಪ್ರಯೋಗಾಲಯದ ವ[...] 25.2.2009 ರಂದು ಕೈಸೇರಿತು. ಆರೋಪಿ[...] ರಕ್ಷಣೆಗಾಗಿ ಟೊಂಕ ಕಟ್ಟಿ ನಿಂತವರು ಇನ್ನೆ[...] ಮಾಡಿಯಾರು?

ಈ ಎರಡು ವರದಿಗಳು ಡಿವೈಎಫ್ಐ ಕೈ ಸೇರಿ[...] ತಡ, ಮಾನವ ಹಕ್ಕು ಆಯೋಗ, ಐ.ಜಿ.ಪಿ. ಪ[...] ವಲಯ ಮತ್ತು ಇನ್ನಿತರ ಪೊಲೀ[...] ವರಿಷ್ಠಾಧಿಕಾರಿಗಳಿಗೆ ಮನವಿ ಸಲ್ಲಿಸಿ ಬೆಳ್ತಂ[...] ಪೊಲೀಸರ ನಿರ್ಲಕ್ಷತೆ ಬಗ್ಗೆ ತಿಳಿಸಿ, ಕೊಲೆ ಪ್ರಕ[...] ದಾಖಲಿಸಿ ಆರೋಪಿಗಳನ್ನು ಬಂಧಿಸದಿದ್ದರೆ [...] ಠಾಣೆಗೆ ಮುತ್ತಿಗೆ ಹಾಕುವುದೆಂ[...] ತೀರ್ಮಾನಿಸಲಾಯಿತು. ಮೇಲಾಧಿಕಾರಿಗಳ ಒತ್ತ[...] ಬಳಲಿದ ಪೊಲೀಸರು ಕೊನೆಗೆ ಕೊಲೆ ಪ್ರಕ[...] ದಾಖಲಿಸಿದ ಬೆಳ್ತಂಗಡಿ ಪೊಲೀಸರು ಮ[...] ಆರೋಪಿಗಳ ಹೆಸರನ್ನು ಮಾತ್ರ ದಾಖಲಿ[...] ಆರೋಪಿಗಳ ರಕ್ಷಣೆಗೆ ಮುಂದಾದರೂ ಹಠ ಬಿ[...] ಡಿವೈಎಫ್ಐ ಮತ್ತೆ ಒತ್ತಡ ನೀತಿಯ[...] ಮುಂದುವರಿಸಿದಾಗ ಉಪಾಯವಿಲ್ಲದ ಪೊಲೀ[...] ಆರೋಪಿಗಳನ್ನು ಹಾಗೂ ಆರೋಪಿಗಳಿಗೆ ಸಯನ[...] ಪೂರೈಸಿದವರನ್ನು ಆಗಸ್ಟ್ 23 ರಂದು ಬಂಧಿಸಿದ[...] ಕೊಲೆ ಪ್ರಕರಣದೊಂದಿಗೆ ಪರಿಶಿಷ್ಟ ಜಾತಿ ಪಂ[...] ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರ[...] ದಾಖಲಿಸಿದರು.

ಅಂತು ಇಂತೂ ಡಿವೈಎಫ್ಐನ ನಿರ[...] ಹೋರಾಟದ ಫಲವಾಗಿ 11 ತಿಂಗಳ ಬಳಿಕ ಕೊ[...] ಪ್ರಕರಣದ ಆರೋಪಿಗಳನ್ನು ಜೈಲು ಕಂಬಿ[...] ಎಣಿಸುವಂತೆ ಮಾಡುವಲ್ಲಿ ಸಫಲವಾಯಿತು.







ನವೆಂಬರ್ 25 ರಂದು ಆಹಾರದ ಹಕ್ಕಿಗಾಗಿ ನಡೆದ ರ್‍ಯಾಲಿಗೆ ಹರಿದುಬಂದ ವಿವಿಧ ವಿಭಾಗಗಳ ಜನ

ಬಾಬ್ರಿ ಮಸೀದಿಯ ಧ್ವಂಸ ಕೇವಲ ಒಂದು ಧಾರ್ಮಿಕ ಸ್ಥಳವನ್ನು ಧ್ವಂಸ ಮಾಡಿದ ಅಸಹ್ಯಕರ ಘಟನೆಯಷ್ಟೇ ಅಲ್ಲ. ಅದು ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯ ಮೇಲೆ ಹಾಕಿರುವ ಅತ್ಯಂತ ಗಂಭೀರ ಏಟು. ಅಲ್ಲಿ ಧ್ವಂಸವಾದದ್ದು ಒಂದು ಕಲ್ಲುಮಣ್ಣಿನ ಕಟ್ಟಡವಾಗಿರಬಹುದು. ಆದರೆ ವಾಸ್ತವವಾಗಿ ಧ್ವಂಸಮಾಡಬೇಕೆಂದಿದ್ದದ್ದು ಆಧುನಿಕ ಭಾರತದ ಚೈತನ್ಯವನ್ನೇ. ಆದ್ದರಿಂದ ಲಿಬರ್ಹಾನ್ ಆಯೋಗದ ಶಿಫಾರಸುಗಳು ಕೂಡಾ ಬಾಬ್ರಿ ಮಸೀದಿಯ ಧ್ವಂಸದ ನಂತರ ನಡೆದ ಮುಂಬೈ ಹಿಂಸಾಚಾರ ಕುರಿತ ಶ್ರೀಕೃಷ್ಣ ಆಯೋಗದ ಶಿಫಾರಸುಗಳಂತೆ ಯಾವುದೇ ಕ್ರಮಗಳಿಲ್ಲದೆ ಹೋಗುವಂತಾಗಬಾರದು.



ಲಿಬರ್ಹಾನ್ ವರದಿ ಹೆಸರಿಸಿದ ಅಪರಾಧಿಗಳಿಗೆ ಶಿಕ್ಷೆಯಾಗಲಿ !

ಕೊನೆಗೂ ಲಿಬರ್ಹಾನ್ ಆಯೋಗದ ವರದಿ ಸಂಸತ್ತಿನಲ್ಲಿ ಮಂಡಿಸಲ್ಪಟ್ಟಿದೆ. 17 ದೀರ್ಘ ಯಾತನಾಮಯ ವರ್ಷಗಳು, 48 ವಿಸ್ತರಣೆಗಳ ನಂತರ ಬಂದಿರುವ ಈ ವರದಿ ಎಲ್ಲರಿಗೂ ಗೊತ್ತಿದ್ದ ಸಂಗತಿಯನ್ನು ಮತ್ತೊಮ್ಮೆ ದೃಢಪಡಿಸಿದೆಯಷ್ಟೇ. ಡಿಸೆಂಬರ್ 6, 1992ರಂದು ನಡೆದ ಬಾಬ್ರಿ ಮಸೀದಿಯ ಧ್ವಂಸದ ದುಷ್ಟಕಾರ್ಯ ಜನಜಂಗುಳಿ ಭಾವೋದ್ರೇಕದಿಂದ ಮಾಡಿದ ಕೆಲಸ ಎಂದು ನಂಬಿಸಲು ಬಿಜೆಪಿ ಮುಖಂಡರು ಎಷ್ಟೇ ಪ್ರಯತ್ನ ಪಟ್ಟರೂ ಅದು ಸ್ವಯಂಸ್ಫೂರ್ತ ಘಟನೆ ಅಲ್ಲ, ಬದಲಾಗಿ ಒಂದು ಅತ್ಯಂತ ಯೋಜಿತವಾಗಿ ನೆರವೇರಿಸಿದ ದುಷ್ಕೃತ್ಯ ಎಂಬುದರ ಬಗ್ಗೆ ಭಾರತೀಯ ಜನತೆಗೆ ಸಂದೇಹವೇನೂ ಇರಲಿಲ್ಲ.


ಯುಪಿಎ ಸರಕಾರ ಈ ವರದಿಯನ್ನು ಮಂಡಿಸಲು ಮೀನಮೇಷ ಎಣಿಸುತ್ತಿತ್ತು. ಆದರೆ ಮಾಧ್ಯಮಗಳಲ್ಲಿ ಈ ವರದಿಯ ಅಂಶಗಳು ಪ್ರಕಟವಾದಾಗ ಅದು ಈ ವರದಿಯನ್ನು, ಅದರೊಡನೆ ಇರಬೇಕಾದ 'ಕೈಗೊಂಡ ಕ್ರಮಗಳ ವರದಿ'(ಎಟಿಆರ್)ಯನ್ನು ಸಂಸತ್ತಿನಲ್ಲಿ ಮಂಡಿಸಲೇ ಬೇಕಾಗಿ ಬಂತು. ಈ ಎಟಿಆರ್‌ನಲ್ಲಿ ಯಾವುದೇ ಶಿಕ್ಷಾ ಕ್ರಮದ ಬಗ್ಗೆಯಾಗಲೀ, ಕಾನೂನು ಕ್ರಮದ ಬಗ್ಗೆಯಾಗಲೀ ಪ್ರಸ್ತಾಪವಿಲ್ಲ ಎಂಬುದು ಅಚ್ಚರಿಯ ವಿಷಯವೇನೂ ಅಲ್ಲ. ವರದಿ ಮಂಡಿಸುವಾಗ ಎಟಿಆರ್ ಕೂಡಾ ಜತೆಗಿರಬೇಕಾಗಿತ್ತು, ಜತೆಗಿದೆ ಅಷ್ಟೇ.

ಸರಕಾರ ಈ ವಿಫಲತೆಯನ್ನೂ ಸಮರ್ಥಿಸಿಕೊಂಡಿದೆ- ವಿವಿಧ ನ್ಯಾಯಾಲಯಗಳಲ್ಲಿ ವಿವಿಧ ಮೊಕದ್ದಮೆಗಳು ನಡೆಯುತ್ತಿವೆ, ಆದ್ದರಿಂದ ಕಾನೂನು ಪ್ರಕ್ರಿಯೆ ನಡೆಯಲಿ ಎಂದು ಬೇರೇನೂ ಕ್ರಮಗಳನ್ನು ಪಟ್ಟಿ ಮಾಡಿಲ್ಲೆಂದು ಅದು ಹೇಳುತ್ತಿದೆ. ಈ ಎಲ್ಲಾ ಮೊಕದ್ದಮೆಗಳನ್ನು ಒಟ್ಟು ಸೇರಿಸಿ ಸರ್ವೋಚ್ಚ ನ್ಯಾಯಾಲಯಕ್ಕೆ ತ್ವರಿತ ವಿಚಾರಣೆಗೆ ಒಪ್ಪಿಸುವ ನಿರ್ಧಾರ ಮಾಡಲು ಯಾವ ಅಡ್ಡಿಯೂ ಇರಲಿಲ್ಲ. ಆದರೆ ಈ ಬಗ್ಗೆ ಯುಪಿಎ ಸರಕಾರಕ್ಕೆ ಯಾವ ಆಸಕ್ತಿಯೂ ಇದ್ದಂತಿಲ್ಲ.

ಅಸಹ್ಯಕರ ಘಟನೆಯಷ್ಟೇ ಅಲ್ಲ..

ಬಾಬ್ರಿ ಮಸೀದಿಯ ಧ್ವಂಸ ಕೇವಲ ಒಂದು ಧಾರ್ಮಿಕ ಸ್ಥಳವನ್ನು ಧ್ವಂಸ ಮಾಡಿದ ಅಸಹ್ಯಕರ ಘಟನೆಯಷ್ಟೇ ಅಲ್ಲ. ಅದು ಆಧುನಿಕ ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಬುನಾದಿಯ ಮೇಲೆ ಹಾಕಿರುವ ಅತ್ಯಂತ ಗಂಭೀರ ಏಟು. ಅಲ್ಲಿ ಧ್ವಂಸವಾದದ್ದು ಒಂದು ಕಲ್ಲುಮಣ್ಣಿನ ಕಟ್ಟಡವಾಗಿರಬಹುದು. ಆದರೆ ವಾಸ್ತವವಾಗಿ ಧ್ವಂಸ ಮಾಡಬೇಕೆಂದಿದ್ದದ್ದು ಆಧುನಿಕ ಭಾರತದ ಚೈತನ್ಯವನ್ನೇ, ಸ್ವರೂಪವನ್ನೇ. ಆದ್ದರಿಂದ ಈ ಕೃತ್ಯವನ್ನು ಎಸಗಿದವರನ್ನು ಅದಕ್ಕೆ ಜವಾಬುದಾರರಾಗುವಂತೆ ಮಾಡದಿರುವುದು ಆಧುನಿಕ ಭಾರತೀಯ ಗಣರಾಜ್ಯದ ಕ್ರೋಡೀಕರಣಕ್ಕೆ ಬಂದಿದ್ದ ಈ ಸವಾಲನ್ನು ಎದುರಿಸದೇ ಇರುವುದು ಎಂದೇ ಅರ್ಥವಾಗುತ್ತದೆ. ನ್ಯಾಯ ವಿಳಂಬವಾದರೆ ನ್ಯಾಯ ನಿರಾಕರಿಸಿದಂತೆಯೇ. 17ವರ್ಷಗಳ ದೀರ್ಘಕಾಲದ ನಂತರವಾದರೂ ನ್ಯಾಯ ಒದಗಿಸಬೇಕಾಗಿದೆ.

ಬಾಬ್ರಿಮಸೀದಿಯ ಧ್ವಂಸ ಒಂದು ಸಲ ನಡೆದು



ಹೋಗಿರುವ ಘಟನೆಯಲ್ಲ. ಅದರ ಮೊದಲು ಮತ್ತು ನಂತರ ಕೋಮು ಭಾವೋದ್ರೇಕಗಳನ್ನು ಬಡಿದೆಬ್ಬಿಸಲಾಯಿತು. ರಕ್ತದ ಹೊಳೆಯಲ್ಲಿ ಸಾವಿರಾರು ಮುಗ್ಧ ಜೀವಗಳು ಮುಳುಗಿ ಹೋದವು; ಅದಕ್ಕೂ ಹೆಚ್ಚಾಗಿ ಕೋಮು ಸೌಹಾರ್ದಕ್ಕೆ, ಒಂದಾಗಿ ಬದುಕಿದ್ದ ಭಾರತದ ವೈವಿಧ್ಯಮಯ ಬಹುಮುಖೀ ಸಾಮೂಹಿಕ ಪ್ರಜ್ಞೆಗೆ ಧಕ್ಕೆ ಬಂತು. ಇಂತಹ ಸಂದರ್ಭದಲ್ಲಿ ನ್ಯಾಯ ಎಂದರೆ ಇಂತಹ ಧಕ್ಕೆ ಉಂಟು ಮಾಡಿರುವ, ಭಾರತದ ಜಾತ್ಯಾತೀತ ಪ್ರಜಾಸತ್ತಾತ್ಮಕ ಹಂದರವನ್ನು ಹಾಳುಗೆಡವಲು ಹೊರಟ ಅಪರಾಧಿಗಳನ್ನು ಶಿಕ್ಷಿಸುವುದಕ್ಕಷ್ಟೇ ಅಲ್ಲ, ನಮ್ಮ ಸಮಾಜದಲ್ಲಿ, ದೇಶದಲ್ಲಿ ಅವರು ಉಂಟುಮಾಡಲು ಪ್ರಯತ್ನಿಸಿದ ವಿಭಜನೆಯನ್ನು ಹೋಗಲಾಡಿಸಿ ಅದನ್ನು ಪರಿಣಾಮಕಾರಿಯಾಗಿ ಸರಿಪಡಿಸಲು, ಮತ್ತೆ ಬೆಸೆಯಲು ಕೂಡಾ ಇದು ಆಗಬೇಕಾಗಿದೆ. ಆಧುನಿಕ ಭಾರತವನ್ನು ಕ್ರೋಡೀಕರಿಸಬೇಕಾದರೆ ಲಿಬರ್ಹಾನ್ ಆಯೋಗದ ಶಿಫಾರಸುಗಳು ಕೂಡಾ ಬಾಬ್ರಿ ಮಸೀದಿಯ ಧ್ವಂಸದ ನಂತರ ನಡೆದ ಮುಂಬೈ ಹಿಂಸಾಚಾರ ಕುರಿತ ಶ್ರೀಕೃಷ್ಣ ಆಯೋಗದ ಶಿಫಾರಸುಗಳಂತೆ ಯಾವುದೇ ಕ್ರಮಗಳಿಲ್ಲದೆ ಹೋಗುವಂತಾಗಬಾರದು.

ಕಾಂಗ್ರೆಸ್ ಸರಕಾರದ ಪಾತ್ರ

ಲಿಬರ್ಹಾನ್ ಆಯೋಗ ಆಗಿನ ಪಿ.ವಿ.ನರಸಿಂಹರಾವ್ ನೇತೃತ್ವದ ಸರಕಾರದ ಪಾತ್ರವನ್ನು ಮನ್ನಿಸಿದಂತೆ ಕಾಣುತ್ತದೆ. ಇದು ಆಗ ಗೊತ್ತಾಗಿದ್ದ ಸಂಗತಿಗಳಿಗೆ ತದ್ವಿರುದ್ಧವಾಗಿದೆ. ದೇಶದ ಸಮಸ್ತ ಜಾತ್ಯಾತೀತ ರಾಜಕೀಯ ಮಂದಿ ಕೇಂದ್ರ ಸರಕಾರದ ಬೆಂಬಲಕ್ಕೆ ನಿಂತಿದ್ದರು, ಜಾತ್ಯಾತಿತತೆಯ ರಕ್ಷಣೆಗೆ ಕೇಂದ್ರ ಸರಕಾರ ದೃಢ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದರು. ಈ ಧ್ವಂಸಕಾರ್ಯದ ಕೆಲವೇ ದಿನಗಳ ಮೊದಲು ನಡೆದ ರಾಷ್ಟ್ರೀಯ ಸಮಗ್ರತಾ ಮಂಡಳಿಯ ಸಭೆ ಬಾಬ್ರಿ ಮಸೀದಿಯನ್ನು ರಕ್ಷಿಸಲು ನರಸಿಂಹರಾವ್ ಸರಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಳುವ ಕಾಂ.ಸುರ್ಜಿತ್ ಮಂಡಿಸಿದ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿತ್ತು. ಬಿಜೆಪಿ ಮತ್ತು ಆಗ ಅದರ ಮಿತ್ರಪಕ್ಷವಾಗಿದ್ದ ಎಐಡಿಎಂಕೆ ಮಾತ್ರ ಈ ಸಭೆಯನ್ನು ಬಹಿಷ್ಕರಿಸಿದ್ದವು. ಇಷ್ಟೆಲ್ಲಾ ಬೆಂಬಲ ಇದ್ದರೂ ಸರಕಾರ ಪರಿಣಾಮಕಾರಿ ಕ್ರಮ ಕೈಗೊಳ್ಳಲಿಲ್ಲ.

ಖಂಡಿತವಾಗಿಯೂ ಕೊಲೆ ಮಾಡುವ ಒಬ್ಬ ವ್ಯಕ್ತಿ ಮತ್ತು ಕೊಲೆಯನ್ನು ತಡೆಯುವಲ್ಲಿ ವಿಫಲನಾಗುವ ಒಬ್ಬ ಪೋಲೀಸ್ ನಡುವೆ ವ್ಯತ್ಯಾಸವಿದೆ. ಆದರೂ ಕೊಲೆಗಾರನನ್ನು ಶಿಕ್ಷಿಸುವಂತೆ, ಕೊಲೆಯನ್ನು ತಡೆಯಲು ವಿಫಲನಾದ ಪೋಲೀಸನೂ ತನ್ನ ವಿಫಲತೆಗೆ ಜವಾಬು ಕೊಡುವಂತಾಗಬೇಕು. ಇದಕ್ಕಾಗಿಯೇ 1993ರಲ್ಲಿ ಸಿಪಿಐ(ಎಂ) ಈ ವಿಷಯದ ಮೇಲೆ ನರಸಿಂಹರಾವ್ ಸರಕಾರದ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿತ್ತು. ಆಗ ಸರಕಾರ ಮುಂದೆ ಕುಖ್ಯಾತವಾದ ಝಾರ್ಖಂಡ ಲಂಚ ಪ್ರಕರಣದಿಂದಾಗಿ ಬದುಕುಳಿಯಿತು.

ಅತ್ಯಂತ ತೀವ್ರ ಪ್ರಹಾರ

ನಮ್ಮ ಗಣರಾಜ್ಯದ ಈ ಆರು ದಶಕಗಳಲ್ಲಿ ಆಧುನಿಕ ಭಾರತದ ಕ್ರೋಢೀಕರಣ ಪ್ರಕ್ರಿಯೆಯಲ್ಲಿ ಇಂತಹ ಇನ್ನೊಂದು ಪ್ರಹಾರವನ್ನು ಕಂಡದ್ದು 1975ರಲ್ಲಿ; ಆಂತರಿಕ ತುರ್ತು ಪರಿಸ್ಥಿತಿಯ ರೂಪದಲ್ಲಿ ಅದು ಬಂದಿತ್ತು. ಆಗ ಜನ ತಿರುಗಿ ಬಿದ್ದರು, ಪ್ರಜಾಪ್ರಭುತ್ವವನ್ನು ರಕ್ಷಿಸಲು ಹೋರಾಡಿದರು, ಶ್ರೀಮತಿ ಇಂದಿರಾ ಗಾಂಧಿಯವರನ್ನು ಸೋಲಿಸಿದರು, ಅತ್ಯಾಚಾರಗಳನ್ನು ನಡೆಸಿದ, ಪ್ರಜಾಪ್ರಭುತ್ವದ ಕತ್ತು ಹಿಸುಕಲು ಪ್ರಯತ್ನಿಸಿದ ಕೆಲವರನ್ನಾದರೂ ತಮ್ಮ ದುಷ್ಕೃತ್ಯಗಳಿಗೆ ಜವಾಬುದಾರರನ್ನಾಗಿ ಮಾಡಿದರು. ಭಾರತ ಈಗ ಅಲ್ಲಿಂದ ಎಷ್ಟೋ ಮುಂದೆ ಸಾಗಿದೆ. ಪ್ರಜಾಪ್ರಭುತ್ವ ದೇಶದ ಹಲವೆಡೆಗಳಲ್ಲಿ, ಹಲವು ಮಟ್ಟಗಳಲ್ಲಿ ಆಳಗೊಳ್ಳುತ್ತಿರುವುದನ್ನು ಕಾಣುತ್ತಿದೆ.

ಬಾಬ್ರಿ ಮಸೀದಿಯ ಧ್ವಂಸ ನಮ್ಮ ಜಾತ್ಯಾತೀತ ಪ್ರಜಾಪ್ರಭುತ್ವ ಸ್ವರೂಪದ ಮೇಲೆ ಇದುವರೆಗಿನ ಇಂತಹ ಪ್ರಹಾರಗಳಲ್ಲಿ ಅತ್ಯಂತ ತೀವ್ರ ರೀತಿಯದ್ದು. ಇಲ್ಲಿ ನ್ಯಾಯ ದೊರಕಿಸಿ ಕೊಡುವುದು ನಮ್ಮ ಆಧುನಿಕ ಗಣತಂತ್ರದಲ್ಲಿ ಜನತೆಯ ನಂಬಿಕೆಯನ್ನು ಮತ್ತೆ ನೆಲೆಗೊಳ್ಳುವಂತೆ ಮಾಡಲು ಅತ್ಯಗತ್ಯ. ಅದ್ದರಿಂದ ಸಂಸತ್ತು ಲಿಬರ್ಹಾನ್ ಆಯೋಗದ ಶಿಫಾರಸುಗಳನ್ನು ಮತ್ತು ಸರಕಾರದ ಎಟಿಆರ್‌ನ್ನು ಚರ್ಚಿಸುವಾಗ ಈ ದಿಕ್ಕಿನಲ್ಲಿ ತನ್ನ ಅಧಿಕಾರವನ್ನು ತೋರಬೇಕು. ಆಧುನಿಕ ಭಾರತೀಯ ಗಣತಂತ್ರದ ಜಾತ್ಯಾತೀತ ಪ್ರಜಾಸತ್ತಾತ್ಮಕ ಸ್ವರೂಪವನ್ನು ಕ್ರೋಡೀಕರಿಸುವ ಪ್ರಕ್ರಿಯೆಯನ್ನು ಇನ್ನಷ್ಟು ಬಲಪಡಿಸಬೇಕು.

ಆಹಾರದ ಹಕ್ಕಿಗಾಗಿ ಆಂದೋಲನ

'ಎಲ್ಲಿದೆ ಅನ್ನ? ಎಲ್ಲವೂ ಚಿನ್ನ! ತಿನ್ನುವುದೇನನ್ನ?' ವರಕವಿ ಬೇಂದ್ರೆಯವರು ಕೇಳಿದ ಪ್ರಶ್ನೆ ಮತ್ತೆ ಮತ್ತೆ ಪ್ರಸ್ತುತವಾಗುತ್ತಾ ನಮ್ಮ ಮುಂದೆ ಮೂಡಿಬರುತ್ತಿದೆ. ಹೊಸ ಹೊಸ ಕಾರಣಗಳು. ಆದರೆ ಪರಿಣಾಮ ಒಂದೇ. ಬೆಲೆ ಏರಿಕೆ. ಆಹಾರ ವಸ್ತುಗಳ ಬೆಲೆ ಏರಿಕೆ. ಸುಡು ಸುಡು ಬೆಲೆ ಏರಿಕೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇದು ಒಂದು ನಿರಂತರ ಸಮಸ್ಯೆ. ದುಡಿಯುವ ವರ್ಗ, ಕಾರ್ಮಿಕ ವರ್ಗ ಸತತ ಸಂಘರ್ಷ - ಹೋರಾಟದ ಮೂಲಕ ಅಷ್ಟಿಷ್ಟು ಕೂಲಿ, ವೇತನ ಹೆಚ್ಚಿಸಿಕೊಳ್ಳುವುದು. ಅದರ ಬೆನ್ನ ಹಿಂದೆಯೇ ಹೋರಾಟದ ಫಲವು ದುಡಿಯುವ ಜನರ ಕೈಗೆ ದಕ್ಕಲಾರದಂತೆ ಮಾಡಿ ಆಳುವ ವರ್ಗಗಳು ಬೆಲೆ ಏರಿಕೆಯ ಮೂಲಕ ಶ್ರಮಿಕ ವರ್ಗದ ಗಳಿಕೆಯನ್ನು ಗೋರಿಕೊಳ್ಳುವುದು. ಈ ಹಾವು ಏಣಿಯಾಟದಲ್ಲಿ ದುಡಿಯುವ ವರ್ಗವು ಬಂಡವಾಳಶಾಹಿ ವ್ಯವಸ್ಥೆಯನ್ನೇ ಬದಲಿಸಬೇಕೆಂಬ ವರ್ಗ-ಜಾಗೃತಿ ಪಡೆಯುತ್ತಾ ಹೋದರೆ ಅದು ಹೋರಾಟದ ಯಶಸ್ಸಿನ ಹೆಜ್ಜೆ. ಈ ನಿಟ್ಟಿನಲ್ಲಿ ಎಡಪಕ್ಷಗಳ ನೇತೃತ್ವದಲ್ಲಿ ನಡೆಯುತ್ತಿದೆ ರಾಷ್ಟ್ರವ್ಯಾಪಿ ಆಂದೋಲನ. ಆಹಾರದ ಹಕ್ಕಿಗಾಗಿ, ಬೆಲೆ ಏರಿಕೆ ವಿರುದ್ಧ ಈ ಹೋರಾಟದ ಭಾಗವಾಗಿ ನವೆಂಬರ್ 25 ರಂದು ಬೃಹತ್ ರ‍್ಯಾಲಿ ಕರ್ನಾಟಕದಲ್ಲಿ ರಾಜಧಾನಿ ಬೆಂಗಳೂರಿನಲ್ಲಿ.



ಅಲ್ಲಿ ಉತ್ಸಾಹ ಉಕ್ಕುತ್ತಿತ್ತು. ಕೆಂಬಾವುಟಗಳ ಕಲರವ. ಬೆಂಗಳೂರಿನಲ್ಲಿ ಮೊದಲಿಗೆ ಕೇಂದ್ರ ಕಾರಾಗೃಹವಾಗಿದ್ದ ಜಾಗ. ಈಗ ಸ್ವಾತಂತ್ರ್ಯ ಉದ್ಯಾನವಾಗಿದೆ. ಆ ಉದ್ಯಾನದ ಒಂದು ಬದಿಯಲ್ಲಿ ಪ್ರತಿಭಟನೆಗಳಿಗೆ ಜಾಗ. ಕರ್ನಾಟಕದ ಮೂಲೆ ಮೂಲೆಗಳಿಂದ ಜನ ಬಂದೇಬಂದರು. ರೈಲು, ಬಸ್ಸು ಇತ್ಯಾದಿಗಳ ಹತ್ತಿ ಬಂದರು. ಇದೊಂಥರ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುವ ಪ್ರತಿಭಟನಾ ಸಭೆಗಳ ಉದ್ಘಾಟನೆಯಂತೆ.

ಬೆಳಿಗ್ಗೆ 9.30 ರಿಂದ 10 ಗಂಟೆಯಿಂದಲೇ ಜನರು ಮೈದಾನಕ್ಕೆ ಬರತೊಡಗಿದರು. ತಂಡೋಪತಂಡವಾಗಿ ಜನರು ಒಳಗೆ ಬಂದು ಸೇರುತ್ತಲೇ ಹೋದರು. ಏಕೆಂದರೆ ಎಂದಿನಂತೆ ಈ ಬಾರಿ ಒಂದೆಡೆ ಸೇರಿ ಮೆರವಣಿಗೆ ಹೊರಡುವ ಕಾರ್ಯಕ್ರಮ ಇರಲಿಲ್ಲ. ಇಷ್ಟಾದರೂ ಬಹಿರಂಗ ಸಭೆ ಆರಂಭ ಹತ್ತಿರವಾಗುತ್ತಾ ಬಂದಂತೆ ಮೈದಾನಕ್ಕೆ ಒಳಬರುವ ಜನರ ಹರಿವು ಏರುತ್ತಲೇ ಹೋಯ್ತು. ಮೈದಾನದ ದೊಡ್ಡ ಪ್ರವೇಶದ್ವಾರ ಏನೇನೂ ಸಾಲದೆ ಹೋದ ಅನುಭವ ಜನರಿಗೆ. ಮೈದಾನದ ಒಳಗೆ ಇದ್ದಂತೆ ದೊಡ್ಡ ಸಂಖ್ಯೆಯ ಜನ ಮೈದಾನದ ಹೊರಗೂ ಮರಳ ನೆರಳಲ್ಲಿ ಕುಂತು ಭಾಷಣ ಆಲಿಸಿದರು.

ಅಲ್ಲಿ ವೇದಿಕೆಯಲ್ಲಿ ಸಿಪಿಐ(ಎಂ), ಸಿಪಿಐ, ಫಾರ್ವರ್ಡ್ ಬ್ಲಾಕ್ ಮೂರು ಪಕ್ಷಗಳು ಅಖಿಲ ಭಾರತ ಮುಖಂಡರು, ರಾಜ್ಯ ಮುಖಂಡರು. ಹೋರಾಟ ಹಾಡುಗಳು ಮೊಳಗಿದವು.



'ಕೊಡದೆ ಬಿಡೆವು ರೇಷನ್'
ಜನತೆಯ ಒಕ್ಕೊರಲ ಘೋಷಣೆ

ಮೊದಲ ಮಾತುಗಳು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಅವರದ್ದು. ದೇಶದಲ್ಲಿ ಬಡತನದ ರೇಖೆಯ ಕೆಳಗೆ ಬದುಕುವ ಜನರ ಪ್ರಮಾಣದಲ್ಲಿ ಕರ್ನಾಟಕಕ್ಕೆ 11ನೇ ಸ್ಥಾನ ಎಂಬುದನ್ನು ನೆನಪಿಸಿದ ವಿ.ಜೆ.ಕೆ ನಾಯರ್ ಬಿಜೆಪಿ ಆಳ್ವಿಕೆಯ ಮಧ್ಯ ಪ್ರದೇಶ ಈ ಪ್ರಶ್ನೆಯಲ್ಲಿ ಮುಂಚೂಣಿಯಲ್ಲಿದೆ ಎಂಬುದನ್ನು ತಿಳಿಸಿದರು.

ತುರ್ತುಪರಿಸ್ಥಿತಿಯ ಕಾಲಘಟ್ಟದಲ್ಲಿ ಈಗ ಸ್ವಾತಂತ್ರ್ಯ ಉದ್ಯಾನವಾಗಿರುವ ಸೆಂಟ್ರಲ್‌ನಲ್ಲಿ ಬಂಧಿಯಾಗಿದ್ದ ತಮ್ಮ ತುರ್ತು ಪರಿಸ್ಥಿತಿ ವಿರುದ್ಧದ ಹೋರಾಟದ ದಿನಗಳನ್ನು ನೆನಪಿಸಿಕೊಂಡ ವಿ.ಜೆ.ಕೆ.ಯವರು ಅಂದು ಕಾಂಗ್ರೆಸ್‌ನ ಇಂದಿರಾಗಾಂಧಿ ನೀಡಿದ್ದ 'ಗರೀಬಿ ಹಟಾವೋ' ಘೋಷಣೆ ಎಷ್ಟು ಪೊಳ್ಳು ಎಂಬುದಕ್ಕೆ ಜನತೆ ಇಂದಿಗೂ ಬಡತನದಲ್ಲಿ ಬಾಳಬೇಕಾಗಿರುವುದೇ ಸಾಕ್ಷಿ ಎಂದರು.

ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ್ ಕಾರಟ್ ಅವರು ಮಾತನಾಡುತ್ತಾ ಜನರ ಬದುಕಿನ ತುರ್ತು ಸಮಸ್ಯೆಗಳಾಗಿ ಗುರುತಿಸಿದ್ದು 3 ಅಂಶಗಳು. ಒಂದು ಬೆಲೆ ಏರಿಕೆ, ಎರಡು ಬ[illegible] ಮತ್ತು ಪ್ರವಾಹ, ಮೂರು ಆಹಾರದ ಅಭದ್ರತೆ[illegible] ಬೆಲೆ ಏರಿಕೆ ಮತ್ತು ಆಹಾರದ ತೊಂದರೆಗ[illegible] ಕಾರಣವಾದ ಅಂಶಗಳನ್ನು ಅವರು ಬಿಡಿಸಿಟ್ಟರು.

"ಅಗತ್ಯ ವಸ್ತುಗಳ ಬೆಲೆ ಏರಿಕೆಯನ್ನು ತಡೆಯಲು[illegible] ಯುಪಿಎ ಸರ್ಕಾರ ಕ್ರಮ ವಹಿಸಲಿಲ್ಲ. 2009 ರ[illegible] ಮೇ ನಂತರ ರಚನೆಯಾದ ಯುಪಿಎ ಸರ್ಕಾರ ಕೂಡ[illegible] ಈ ನಿಟ್ಟಿನಲ್ಲಿ ಕ್ರಮ ವಹಿಸುವಲ್ಲಿ ವಿಫಲವಾಯಿತು[illegible] ದೈನಂದಿನ ಅಗತ್ಯವಾದ ಆಹಾರಧಾನ್ಯ ಖರೀದಿಗ[illegible] ಮಾರುಕಟ್ಟೆಗೆ ಹೋದರೆ ಅಕ್ಕಿ, ಗೋಧಿ, ತರಕಾರಿ[illegible]



ವೇದಿಕೆಯಲ್ಲಿ ಮುಖಂಡರು



...ರೆ, ಹೀಗೆ ಎಲ್ಲ ವಸ್ತುಗಳ ಬೆಲೆಗಳು ತೀವ್ರವಾಗಿ ...ವೆ. ಜನರ ಜೀವನ ನಿರ್ವಹಣೆ ಕಷ್ಟವಾಗುತ್ತಿದೆ.

...ೆ ಏರಿಕೆ ಆಹಾರದ ಕೊರತೆಯಿಂದಲ್ಲ

ಆಹಾರದ ಕೊರತೆಯಿಂದಾಗಿ ಬೆಲೆ ಏರಿಕೆ ...ಗುವುದಲ್ಲ. ಆಹಾರ ಕ್ಷೇತ್ರದಲ್ಲಿನ ...ಜುಕೋರತನದಿಂದಾಗಿ, ಭವಿಷ್ಯತ್ ...ರದಿಂದಾಗಿ ಇಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಸಮಸ್ಯೆ ಪರಿಹಾರಕ್ಕೆ ತುರ್ತುಕ್ರಮ ಎಂದರೆ ...ತರ ವ್ಯವಸ್ಥೆ ಬಲಪಡಿಸುವುದು. ಕೇಂದ್ರ ಸರ್ಕಾರ ...ಾರ ಭದ್ರತೆಗಾಗಿ ಶಾಸನ ತರಲು ಹೊರಟಿದೆ. ...ು ಅಗತ್ಯ. ಆದರೆ ಕೇಂದ್ರ ಸರ್ಕಾರದ ಮಸೂದೆ, ...ಟುಂಬಕ್ಕೆ 25 ಕೆ.ಜಿ. ಅಥವಾ ...ೀಧಿಯನ್ನು ತಲಾ 3 ರೂ.ಗೆ ...ಡಲು ಸೂಚಿಸುತ್ತಿದೆ. ದೇಶದಲ್ಲಿ ...ಾಜ್ಯಗಳಲ್ಲಿ ಈಗಾಗಲೇ ಕೆ.ಜಿ.ಗೆ ...ರೂ. ಬೆಲೆಯಲ್ಲಿ ಆಹಾರಧಾನ್ಯ ...ಡಲಾಗುತ್ತಿದೆ. ತಮಿಳುನಾಡಿನಲ್ಲಿ ...ರೂ.ಗೆ ನೀಡಲಾಗುತ್ತಿದೆ. ...ತ್ಯೋದಯ ಯೋಜನೆಯಲ್ಲಿ ...ಟುಂಬಕ್ಕೆ 35 ಕೆ.ಜಿ ಅಕ್ಕಿಯನ್ನು ...ಡಲಾಗುತ್ತಿದೆ. ಇಂತಹ ...ದಲ್ಲಿ ಕೇಂದ್ರ ಸರ್ಕಾರ ತರುತ್ತಿರುವ ಶಾಸನವು ...ಟುಂಬಕ್ಕೆ 10 ಕೆ.ಜಿ. ಅಕ್ಕಿಯನ್ನು ಕಡಿತ ಮಾಡಲಿದೆ. ...ೆಯನ್ನು ಏರಿಸಲಿದೆ.

...ರ್ನಾಟಕ ರಾಜ್ಯದಲ್ಲಿ ಬಿಜೆಪಿ ಸರ್ಕಾರ ...ಪಿ.ಎಲ್ ಕಾರ್ಡುದಾರರಿಗೆ 3 ರೂಪಾಯಿಗೆ ಅಕ್ಕಿ ...ಡುತ್ತಿದೆ. ಒಂದು ರೂಪಾಯಿ ಸಹಾಯಧನ ...ಡಲು ಅದು ತಯಾರಿಲ್ಲ. ನಗರ ಮತ್ತು ಗ್ರಾಮೀಣ ...ತೆ ವಂಚಿತರಾಗಿದ್ದಾರೆ. ಮೊದಲು ಸರ್ಕಾರ 2 ...ಗೆ ಅಕ್ಕಿ ನೀಡಬೇಕು..... ಪ್ರಕಾಶ್ ಕಾರಟ್





ಆಗ್ರಹಿಸಿದರು.

"ಜಗತ್ತಿನಲ್ಲೇ ಅತಿ ಹೆಚ್ಚಿನ ಪ್ರಮಾಣದ ಹಸಿವು ಭಾರತದಲ್ಲಿದೆ. ದೇಶದ ಶೇ.45 ರಷ್ಟು ಮಕ್ಕಳು ಅಪೌಷ್ಟಿಕತೆಯಲ್ಲಿ ನರಳುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಪ್ರತಿಯೊಬ್ಬರಿಗೂ ಆಹಾರ ಸಿಗುವಂತೆ ಕ್ರಮ ವಹಿಸುವುದು ಸರ್ಕಾರದ ಕರ್ತವ್ಯ.

ಜನರನ್ನು ಬಿಪಿಎಲ್, ಎಪಿಎಲ್ ಎಂದು ವಿಭಾಗಿಸುವ ವಿಭಜನೆ ಕೈಬಿಡಬೇಕು. ಸರ್ಕಾರದ ಮಾನದಂಡಗಳ ಆಧಾರದಲ್ಲಿ ಬಹಳಷ್ಟು ಜನ ಬಿಪಿಎಲ್ ವ್ಯಾಪ್ತಿಯಲ್ಲಿ ಬರುವುದಿಲ್ಲ. ಸರ್ಕಾರ ಹಿಂದಿನಂತೆ ಎಲ್ಲರಿಗೂ ಆಹಾರಧಾನ್ಯ ನೀಡುವ ಸಾರ್ವಜನಿಕ ಪಡಿತರ ವ್ಯವಸ್ಥೆ (ಪಿಡಿಎಸ್)ಗೆ ಹಿಂತಿರುಗಬೇಕು. ಕಾಂಗ್ರೆಸ್ ಬಿಜೆಪಿಗಳು ಈ ಬಗೆಗೆ ಚಿಂತಿತರಾಗಿಲ್ಲ..."ಕಾರಟ್ ಸರ್ಕಾರದ ಹಾಗೂ ಮುಖ್ಯ ವಿರೋಧ ಪಕ್ಷ ಎನಿಸಿಕೊಂಡ ಬಿಜೆಪಿ ಧೋರಣೆಯನ್ನು ಖಂಡಿಸಿದರು.



ಗಣಿ ಲೂಟಿ

"ಗಣಿ ಸಂಪತ್ತನ್ನು, ದೇಶದ ಅಮೂಲ್ಯ ಖನಿಜ ಸಂಪತ್ತನ್ನು ಲೂಟಿ ಮಾಡಲಾಗುತ್ತಿದೆ. ಅಕ್ರಮ ಗಣಿಗಾರಿಕೆಯಿಂದ ಬಾರಿ ಲಾಭ ಮಾಡಿಕೊಳ್ಳಲಾಗುತ್ತಿದೆ. ಅಮೇರಿಕ ಪ್ರವಾಸದಲ್ಲಿರುವ ಮನಮೋಹನ್ ಸಿಂಗ್ ಮತ್ತಷ್ಟು ಅಮೇರಿಕನ್ ಕಂಪನಿಗಳನ್ನು ನಮ್ಮ ಸಂಪತ್ತಿನ ಲೂಟಿ ನಡೆಸಲು ಆಹ್ವಾನಿಸುತ್ತಿದ್ದಾರೆ. ಚಿಲ್ಲರೆ ವ್ಯಾಪಾರದಲ್ಲಿ ಕೂಡ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಆಹ್ವಾನಿಸಲಾಗುತ್ತಿದೆ. ಲಾಭದಾಯಕವಾದ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಿಸಲಾಗುತ್ತಿದೆ......

. ಕಳೆದ 13 ವರ್ಷಗಳಲ್ಲಿ ದೇಶದಲ್ಲಿ 2 ಲಕ್ಷಕ್ಕಿಂತ ಹೆಚ್ಚು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ದೇಶದ ಕೃಷಿಯನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತವಾಗಿ ತೆರೆಯಲಾಗುತ್ತಿದೆ. ಆಸಿಯಾನ್ ಒಪ್ಪಂದದಿಂದ ಆಗ್ನೇಯ ಏಷ್ಯಾದ ದೇಶಗಳ ಕೃಷಿ ಉತ್ಪನ್ನಗಳು ಭಾರತದೊಳಕ್ಕೆ ನುಗ್ಗಿ ಬರಲಿವೆ. ದೇಶದ ಆಹಾರ ಭದ್ರತೆಗೆ ಇದರಿಂದ ಧಕ್ಕೆಯಾಗಲಿದೆ.



ನವೆಂಬರ್ ತಿಂಗಳಲ್ಲಿ ಎಡಪಕ್ಷಗಳು ರಾಷ್ಟ್ರಾದ್ಯಂತ ಆಂದೋಲನ ನಡೆಸುತ್ತಿವೆ. ಈ ಆಂದೋಲನ ಮತ್ತಷ್ಟು ತೀವ್ರಗೊಳ್ಳಲಿದೆ. ಬಲಿಷ್ಟವಾದ ರಾಷ್ಟ್ರ ವ್ಯಾಪಿಯಾದ ಆಂದೋಲನವಿಲ್ಲದೆ ಸರ್ಕಾರದ ನೀತಿಗಳನ್ನು ಹಿಮ್ಮೆಟ್ಟಿಸುವುದು ಸಾಧ್ಯವಿಲ್ಲ. ರಾಜ್ಯದಲ್ಲಿ ನೆರೆ ಮತ್ತು ಬರಪೀಡಿತ ಜನರ ಬಗೆಗೆ ಸರ್ಕಾರಕ್ಕೆ ಕಾಳಜಿಯಿಲ್ಲ. ಅಧಿಕಾರ ಉಳಿಸಿಕೊಳ್ಳುವ ಆಟಗಳು, ಕಿತ್ತಾಟಗಳು ನಡೆಯುತ್ತಿವೆ. ಇಂತಹ ನೀತಿಗಳ ವಿರುದ್ಧ ಬೃಹತ್ ಆಂದೋಲನ ಮೂಡಿಬರಲಿ...." ಕಾರಟ್ ಜನ ಚಳುವಳಿಯನ್ನು ಬಲಗೊಳಿಸಿ ಎಂದು ಕರೆ ನೀಡಿ ಮಾತು ಮುಗಿಸಿದರು.

ಕಾರಟ್ ಕನ್ನಡದಲ್ಲಿ ಮಾತನಾಡಲಾಗದ್ದಕ್ಕೆ ಕ್ಷಮೆ ಕೋರಿ ನಡು,ನಡುವೆ ಹಿಂದಿ ಹಾಗೂ ಇಂಗ್ಲೀಷ್‌ನಲ್ಲಿ ಮಾತನಾಡಿದರು. ನಂತರ ಸಿಪಿಐ ನ ಅಖಿಲ ಭಾರತ ಉಪ ಪ್ರಧಾನ ಕಾರ್ಯದರ್ಶಿ ಕಾಂ.ಸುಧಾಕರ ರೆಡ್ಡಿಯವರು ತೆಲುಗುವಿನಲ್ಲಿ ಮಾತನಾಡಿದರು.

"ಇಂದು ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆ ಕೆ.ಜಿ.ಗೆ 35 ರಿಂದ 45 ರೂ. ಇದೆ. ಜೋಳ 17 ರೂ. ಇದೆ. ಸಕ್ಕರೆ 30 ರೂ ಮೀರಿ ಹೋಗಿದೆ. ಕರ್ನಾಟಕದಲ್ಲಿ "ಬಡತನ ರೇಖೆಗಿಂತ ಕೆಳಗಿನವರು 65 ಲಕ್ಷ ಕುಟುಂಬಗಳೋ 45 ಲಕ್ಷ ಕುಟುಂಬಗಳೋ ಎಂಬ ಬಗೆಗೆ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಕಿತ್ತಾಡುತ್ತಿವೆ. ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷ ಮಾಂಟೆಕ್ ಸಿಂಗ್ ಅಹ್ಲುವಾಲಿಯಾ ಬೆಲೆ ಏರಿಕೆ ಎಂಬುದು ಬರೀ ಮಾಧ್ಯಮಗಳ ಸೃಷ್ಟಿ ಎನ್ನುತ್ತಾರೆ. ಅಮೇರಿಕ ದವರು, ಭಾರತೀಯರು ಹೆಚ್ಚು ಊಟ ಮಾಡುತ್ತಿರುವುದರಿಂದ ಬೆಲೆ ಏರಿಕೆ ಆಗುತ್ತಿದೆ ಎನ್ನುತ್ತಾರೆ. ಆದರೆ ಅದೇ ಅಮೇರಿಕ ಕಾರು ಓಡಿಸಲು ಬೇಕಾದ ಬಯೋ ಡಿಸೆಲ್ ತಯಾರಿಸಲು ತಾನು ಆಹಾರ ಧಾನ್ಯ ಬಳಸುತ್ತಿರುವುದರ ಬಗೆಗೆ ಮಾತನಾಡುವುದಿಲ್ಲ. ದೇಶದ ಶೇ.78 ಜನ ಕೇವಲ 20 ರೂ.ಗಳ ಗಳಿಕೆಯಲ್ಲಿ ದಿನ ದೂಡಬೇಕಾಗಿದೆ.

ಟನ್‌ಗೆ ಕೇವಲ 100 ರೂಪಾಯಿ ಖರ್ಚು ಮಾಡಿ ತೆಗೆದ ಗಣಿ ಅದಿರನ್ನು 4,500 ರೂಪಾಯಿಗೆ ಮಾರಿಕೊಂಡು ಗಣಿ ಗುತ್ತಿಗೆದಾರರು ಲೂಟಿ ಹೊಡೆಯುತ್ತಿದ್ದಾರೆ. ದೇಶದಲ್ಲಿ 72 ಲಕ್ಷ ಕೋಟಿ ಕಪ್ಪು ಹಣ ಇದೆ. ಲಕ್ಷಾಂತರ ಕೋಟಿ ರೂಪಾಯಿ ಭಾರತೀಯ ಶ್ರೀಮಂತರ ಕಪ್ಪು ಹಣ ಸ್ವಿಸ್ ಬ್ಯಾಂಕ್‌ನಲ್ಲಿ ಕೊಳೆಯುತ್ತಿದೆ. ಸುಧಾಕರ ರೆಡ್ಡಿ, ಬಿಜೆಪಿ ಯುಪಿಎ ಸರ್ಕಾರದ ಧೋರಣೆಯ ಹೂರಣ ಬಿಡಿಸಿಡುತ್ತಾ ಹೋದರು.

ಅಖಿಲ ಭಾರತ ಫಾರ್ವರ್ಡ್ ಬ್ಲಾಕ್‌ನ ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.

ಇನ್ನು ನಿಲ್ಲದು ಚಳುವಳಿ : ಮುಂದಿನ ಹೆಜ್ಜೆ

ರಾಜ್ಯಮಟ್ಟದ ರ್‍ಯಾಲಿ ಒಂದು ರೀತಿಯಲ್ಲಿ ಹೋರಾಟದ ಒಂದು ಹಂತ. ಇಂತಹ ರ್‍ಯಾಲಿಗಳಿಂದ ಆಳುವ ಸರ್ಕಾರಗಳ ಮನಸ್ಸು ಕರಗಿ ನೀತಿ ಬದಲಾಗಿ ಹೋಗುತ್ತದೆಂಬ ಭ್ರಮೆ ಎಡಪಕ್ಷಗಳಿಗೂ ಇಲ್ಲ. ಜನರಿಗೂ ಇಲ್ಲ. ಸಂಘರ್ಷ, ಹೋರಾಟದ ಮೂಲಕವೇ ಬೇಡಿಕೆಗಳ ಈಡೇರಿಕೆ ಸಾಧ್ಯ.

ಈ ನಿಟ್ಟಿನಲ್ಲಿ ಚಳುವಳಿಯು ಬೇಡಿಕೆಗಳಿಗಾಗಿ ಒತ್ತಾಯಿಸಿ ಮುಂದಿನ ಹಂತವಾಗಿ **ಜನವರಿ 11, 12, 13 ರಂದು** ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ತಾಲ್ಲೂಕು ಕಛೇರಿಯ ಮುಂದೆ ಪ್ರತಿಭಟನಾ ಧರಣಿ ನಡೆಸಲು ಕರೆ ನೀಡಲಾಗಿದೆ. ಇದರ ನಂತರದ ಹಂತ **ಜನವರಿ 21, 22, 23** ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯನ್ನು ಮುತ್ತಿಗೆ ಹಾಕಲು ಕರೆ ನೀಡಲಾಗಿದೆ.







ದೇವರಾಜನ್ ಮಾತನಾಡಿ ಆಹಾರದ ಪ್ರಶ್ನೆಗಳನ್ನು ಕೇಂದ್ರ-ರಾಜ್ಯ ಸರ್ಕಾರಗಳು ಗಂಭೀರವಾಗಿ ಪರಿಗಣಿಸದೇ ಶ್ರೀಮಂತರ, ಬಂಡವಾಳಿಗರ ಹಿತ ಕಾಯುತ್ತಿವೆ. ಈ ನೀತಿ ಮುಂದುವರೆದಿದರೆ ಎಡ ಪಕ್ಷಗಳು ಹೋರಾಟವನ್ನು ತೀವ್ರ ಗೊಳಿಸಲಿವೆ ಎಂದರು.

ಬಡವರಿಗೆ ಕೆಂಬಾವುಟ ಬಿಟ್ಟರೆ ಬೇರೆ ಇಲ್ಲ.

ಜನರ ನಿಜವಾದ ಸಮಸ್ಯೆಗಳ ಬಗೆಗೆ ಎಡಪಕ್ಷಗಳನ್ನು ಬಿಟ್ಟು ಬೇರೆ ಯಾರೂ ಮಾತನಾಡುತ್ತಿಲ್ಲ. ಬಡವರಿಗೆ ಕೆಂಬಾವುಟ ಬಿಟ್ಟರೆ ಬೇರೆ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಉದ್ಯೋಗ ಖಾತ್ರಿ ಯೋಜನೆಗಾಗಿ ದನಿ ಎತ್ತಿದ್ದು ಕೆಂಬಾವುಟ. ರಾಜ್ಯದ ಬಿಜೆಪಿ ಸರ್ಕಾರ ಜನಾರ್ಧನ ರೆಡ್ಡಿ ಮುಂತಾದ ಗಣಿಗಳ್ಳರ ಹಣಬಲದ ಮೇಲೆ ನಿಂತಿದೆ. ರಾಜ್ಯದಲ್ಲಿ ಬರ, ಪ್ರವಾಹ ಹಾನಿಗಳಿಗೆ ಪರಿಹಾರ ನೀಡದ ಮುಖ್ಯಮಂತ್ರಿ ಯಡಿಯೂರಪ್ಪ ಖಾಕಿ ನಿಕ್ಕರ್

ಪುಟ 14ಕ್ಕೆ

ನವೆಂಬರ್ 16 ರಂದು ಕೊಡಗು ಬಂದ್ ನಡೆಸಿ ಪ್ರತಿಭಟಿಸಲಾಗಿದೆ. ಕಾಫಿ ಬೆಳೆಗಾರರ ಸಮಸ್ಯೆಗಳು, ವಿದ್ಯುತ್ ಸಮಸ್ಯೆ, ಕೆಟ್ಟ ರಸ್ತೆ ಇತ್ಯಾದಿ ಸಮಸ್ಯೆಗಳು... ಈ ನಡುವೆ ಹಲವರು ಬಂದ್ ನಡೆಯದಂತೆ ತಡೆಯಲು ಯತ್ನಿಸಿದರು. ಯಾರು? ಯಾಕೆ?

ಬಗೆಹರಿಯದ ಕಾಫಿ ಬೆಳೆಗಾರರ ಸಮಸ್ಯೆಗಳು

ಕೊಡಗು ಬಂದ್

ಡಾ. ದುರ್ಗಾಪ್ರಸಾದ್

ಕೊಡಗಿನ ಪ್ರಮುಖ ಬೆಳೆ ಕಾಫಿ. ಪ್ರಕೃತಿ ವೈಪರೀತ್ಯ, ತಮ್ಮ ಉತ್ಪನ್ನಗಳಿಗೆ ಬೆಲೆಯ ಅನಿಶ್ಚಿತತೆ, ತಾವು ಕೊಳ್ಳುವ, ಉಪಯೋಗಿಸುವ ಪ್ರತಿಯೊಂದು ಸರಕಿನ ಬೆಲೆಯ ನಿರಂತರ ಏರಿಕೆ, ಕಾಡಾನೆ ಹಾವಳಿ ಮೊದಲಾದವುಗಳಿಂದ ಕೊಡಗಿನ ಬೆಳೆಗಾರರು ಕಂಗೆಟ್ಟಿದ್ದಾರೆ. ಬೆಳೆಗಾರರಲ್ಲಿ ಶೇ.96 ರಷ್ಟು ಬೆಳೆಗಾರರು ಸಣ್ಣ ಬೆಳೆಗಾರರಾಗಿದ್ದಾರೆ. ಶೇ.92 ರಷ್ಟು ಬೆಳೆಗಾರರು 2 ಹೆಕ್ಟೇರ್ ಅಥವಾ ಅದಕ್ಕಿಂತಲೂ ಕಡಿಮೆ ಹಿಡುವಳಿ ಹೊಂದಿದ್ದು ಅವರನ್ನು ಇಂದಿನ ಬಹುಮುಖೀ ಸಮಸ್ಯೆಗಳು ಅಪಾರವಾಗಿ ಕಾಡುತ್ತಿದೆ. ದೇಶದ ಆರ್ಥಿಕತೆಗೆ ದೊಡ್ಡ ಕೊಡುಗೆ ಕೊಡುತ್ತಿರುವ ಕಾಫಿ ಬೆಳೆಗಾರರಿಗೆ ಕೇಂದ್ರ, ರಾಜ್ಯ ಸರಕಾರಗಳು ಯಾವುದೇ ಸಹಾಯ ಕ್ರಮ ಕೈಗೊಳ್ಳದೆ ವಂಚಿಸುತ್ತಲೇ ಬಂದಿವೆ.

ಅತಿಯಾದ ಮಳೆಯಿಂದಾಗಿ ತುಂಬಾ ಹಾನಿಗೊಳಗಾದ ಈ ಬೆಳೆಗಾರರಿಗೆ ಸರಕಾರಗಳಿಂದ ದೊರೆತದ್ದು ಕೇವಲ ಭರವಸೆಗಳು ಮಾತ್ರ. 2007 ರಲ್ಲೇ ಆದ ಮಳೆಹಾನಿಗೆ ಸಂಬಂಧಿಸಿದಂತೆ ಬೆಳೆಗಾರರಿಗೆ ಒಂದು ಎಕ್ರೆಗೆ 6000 ರೂ. ಪರಿಹಾರ ಕೊಡುವುದೆಂದು ನಿಶ್ಚಯವಾಗಿದ್ದರೂ ಇಂದಿಗೂ ಪರಿಹಾರ ಧನ ಅವರ ಕೈಗೆ ದೊರೆತಿಲ್ಲ. ಬಹುವಾರ್ಷಿಕ ಬೆಳೆಯಾದ ಕಾಫಿಗೆ ಯಾವ ರೀತಿ, ಎಷ್ಟು ಪರಿಹಾರ ಕೊಡಬಹುದು ಎಂದು ರಾಜ್ಯ ಸರಕಾರ ಕೇಂದ್ರ ಸರಕಾರದೊಂದಿಗೆ ಸಂಶಯ ನಿವಾರಣೆಗೆ ಕೇಳಿದೆಯಂತೆ! ಕೇಂದ್ರದಿಂದ ಇನ್ನೂ ಉತ್ತರ ಬಂದಿಲ್ಲವಂತೆ!

ಕಾಡಾನೆ ಕಾಟ, ನಾಡಾನೆಗಳ ಚೆಲ್ಲಾಟ

ಕಾಡಾನೆಗಳು ತೋಟ, ಗದ್ದೆಗಳನ್ನು ನುಗ್ಗಿ ನಾಶ ಮಾಡಿ ರೈತರಿಗೆ ನಷ್ಟ ಸಂಭವಿಸುವುದು ಕೊಡಗಿನಲ್ಲಿ ನಿತ್ಯ ಸಂಭವ. ಈ ದಾಳಿಯಿಂದ ರೈತರನ್ನು ರಕ್ಷಿಸಲೆಂದು ಕೊಡಗಿನ ಇಬ್ಬರು ಭಾ.ಜ.ಪ. ಶಾಸಕರ ಮುಖಂಡತ್ವದಲ್ಲಿಯೇ ಅರಣ್ಯಾಧಿಕಾರಿಗಳ ಸಭೆ ನಡೆದು 350 ಕೋಟಿ ರೂ.ವಿನ ಯೋಜನೆಯೊಂದು ರೂಪಿಸಲ್ಪಟ್ಟು 2007 ರಲ್ಲಿಯೇ ರಾಜ್ಯ ಸರಕಾರಕ್ಕೆ ಕಳುಹಿಸಲಾಗಿದೆಯಾದರೂ ಇಂದಿನವರೆಗೂ ಈ ಬಗ್ಗೆ ಯಾವ ಕ್ರಮವನ್ನೂ ಸರಕಾರ ಕೈಗೊಂಡಿಲ್ಲ. ಒಂದು ಕೋಟಿ ರೂ. ಬಂದಿದೆ ಎಂದು ಇತ್ತೀಚೆಗೆ ಅಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುತ್ 'ಕಡಿತ'ದಿಂದಾದ ಗಾಯ

ರಾಜ್ಯದಲ್ಲೇ ಅತ್ಯಂತ ಕಡಿಮೆ ವಿದ್ಯುತ್ ಬಳಸುವ ಜಿಲ್ಲೆ, ಬಿಲ್ ಸಮರ್ಪಕವಾಗಿ ಪಾವತಿಸುವ ಜಿಲ್ಲೆ, ವಿದ್ಯುತ್ ಕದಿಯುವಿಕೆ ಅತ್ಯಂತ ಕಡಿಮೆ ಸಂಭವಿಸುವ ಜಿಲ್ಲೆ ಎಂಬ ಹೆಗ್ಗಳಿಕೆ ಕೊಡಗಿಗೆ ಇರುವುದಾದರೂ ಅತ್ಯಂತ ಕಡಿಮೆ ವಿದ್ಯುತ್ ಸರಬರಾಜಾಗುವುದು ಕೊಡಗಿಗೆ. ಯಾವಾಗಲೂ ವಿದ್ಯುತ್ ಕಡಿತ. ಕೇಂದ್ರ ಸರಕಾರ ರಾಜ್ಯಕ್ಕೆ ವಿದ್ಯುತ್ ಸರಬರಾಜು ಕಡಿತಗೊಳಿಸಿದರೆ ರಾಜ್ಯ ಸರಕಾರ ಅದನ್ನು ಕೊಡಗಿನ ಮೇಲೆ ಹೇರುತ್ತಿದೆ.

ಈ ರೀತಿ ಹತ್ತು ಹಲವು ಸಮಸ್ಯೆಗಳಿಂದ ನಲುಗುತ್ತಿರುವ ಬೆಳೆಗಾರರ ಸಹಾಯಕ್ಕಾಗಿ ಒಂದು ಪ್ಯಾಕೇಜ್ ಹೊರಡಿಸುವುದಾಗಿ ಕೇಂದ್ರ ಸರಕಾರ ಘೋಷಿಸಿ ತಿಂಗಳುಗಳೇ ಕಳೆದವು. ತೆನಾಲಿ ರಾಮ ಕುದುರೆಗೆ ಹುಲ್ಲು ತೋರಿಸಿದಂತೆ ಬೆಳೆಗಾರರಿಗೆ ಪ್ಯಾಕೇಜ್ ನ ಭರವಸೆ ತೋರಿಸುತ್ತಲೇ ಕೇಂದ್ರ ಕಾಂಗ್ರೆಸ್ ಸರಕಾರ ಅವರನ್ನು ವಂಚಿಸುತ್ತಲೇ ಬಂದಿದೆ.





ಬೆಳೆಗಾರರ ಸಹನೆಯ ಕಟ್ಟೆ ಒಡೆಯಿತು. ಹೋರಾಟವಲ್ಲದೆ ತಮಗೆ ಅನ್ಯ ಮಾರ್ಗವಿಲ್ಲವೆಂದು ಬೆಳೆಗಾರರು ಮನಗಂಡರು. ಕೊಡಗು ಬೆಳೆಗಾರರ ಒಕ್ಕೂಟದ ಆಶ್ರಯದಲ್ಲಿ ಬೆಳೆಗಾರರು ಅಕ್ಟೋಬರ್ 12 ರಂದು ಗೋಣಿಕೊಪ್ಪಲಿನಲ್ಲಿ ಸಭೆ ಸೇರಿ ನವೆಂಬರ್ 15 ರೊಳಗೆ ಪ್ಯಾಕೇಜ್ ಘೋಷಿಸದಿದ್ದರೆ ಕೊಡಗು ಬಂದ್‌ಗೆ ಕರೆ ಕೊಡುವುದಾಗಿ ಘೋಷಿಸಿದರು.

ಪ್ಯಾಕೇಜಿನ ಶೀಘ್ರ ಘೋಷಣೆಯ ಬೇಡಿಕೆಯೊಂದಿಗೆ ಕೊಡಗಿನ ರಸ್ತೆಗಳ ದುರಸ್ತಿ, ವಿದ್ಯುಚ್ಛಕ್ತಿಯ ಸರಬರಾಜಿನಲ್ಲಾಗುತ್ತಿರುವ ಕಡಿತ, ಈ ಬೇಡಿಕೆಗಳನ್ನೂ ಮುಂದಿಟ್ಟುಕೊಂಡರು. ಇವುಗಳೊಂದಿಗೇ ತೋಟ ಕಾರ್ಮಿಕರನ್ನು ಬಿ.ಪಿ.ಎಲ್. ಪಟ್ಟಿಯಿಂದ ಹೊರಗಿಡುವ ರಾಜ್ಯ ಸರಕಾರದ ನಿರ್ಣಯವನ್ನು ಕೈಬಿಟ್ಟು ಅವರನ್ನು ಬಿ.ಪಿ.ಎಲ್. ಪಟ್ಟಿಯಲ್ಲೇ ಮುಂದುವರಿಸಬೇಕೆಂಬ ಮಹತ್ವದ ಬೇಡಿಕೆಯೂ ಅವರದ್ದಾಗಿತ್ತು.

ಕರ್ನಾಟಕ ಬೆಳೆಗಾರರ ಫೆಡರೇಶನ್‌ನ ಪದಾಧಿಕಾರಿಗಳು ಬಂದವರು ಸಭೆಯಲ್ಲಿ ತಮ್ಮ ಬೆಂಬಲ ವ್ಯಕ್ತಪಡಿಸಿದರಾದರೂ ಅವರಿಗೆ ಬಂದ್ ಬೇಕಿರಲಿಲ್ಲ.

ಪ್ಯಾಕೇಜ್ ನೀಡಲು ಅಡ್ಡಿ ಏನು?

ಚಿಕ್ಕಮಗಳೂರಿನ ಕೆಲವು ದೊಡ್ಡ ಬೆಳೆಗಾರರು ಬ್ಯಾಂಕ್ ಸಾಲ ಮಾಡಿ ತೋಟ ತೆಗೆದುಕೊಂಡಿದ್ದು ತಾವು ತೋಟ ಖರೀದಿಗಾಗಿ ಮಾಡಿದ ಸಾಲವನ್ನೂ ಮನ್ನಾ ಮಾಡಬೇಕೆಂದು ಹಠ ಹಿಡಿದದ್ದು ಮತ್ತು ಅದಕ್ಕೆ ಕೊಡಗು ಮೈಸೂರು ಕ್ಷೇತ್ರದ ಸಂಸದ ವಿಶ್ವನಾಥ್ ಬೆಂಬಲ ಕೊಡುತ್ತಾ ಬಂದಿರುವುದೇ ಪ್ಯಾಕೇಜ್ ಘೋಷಣೆಯಾಗದಿರಲು ಕಾರಣ ಎನ್ನುವುದು ಇಂದು ಗುಟ್ಟಾಗಿ ಉಳಿದಿಲ್ಲ.

ದೊಡ್ಡ ಬೆಳೆಗಾರರಾದ ಕೆ.ಜಿ.ಎಫ್.ನ ಮುಖಂಡರುಗಳಿಗೆ ಬಂದ್ ಬೇಡವಾಗಿತ್ತು. ವಿಶ್ವನಾಥ್‌ರವರಿಗೂ ಈ ಬಂದ್ ಬೇಡವಾಗಿತ್ತು. ಆದ್ದರಿಂದಲೇ ಬಂದ್ ಘೋಷಣೆಯಾಗುತ್ತಲೇ ವಿಶ್ವನಾಥ್‌ರವರು ಹಸಿ ಹಸಿ ಸುಳ್ಳನ್ನು ಉದುರಿಸಲು ಹಿಂಜರಿಯಲಿಲ್ಲ. "ಇನ್ನೇನು ಪ್ಯಾಕೇಜ್ ಘೋಷಣೆಯಾಗಿಯೇಬಿಡುತ್ತದೆ. ಬ
ಅಗತ್ಯವಿಲ್ಲ" ಎನ್ನಲಾರಂಭಿಸಿದರು ಮಾನ್ಯರು

ಬಂದ್ ನಡೆದೇ ನಡೆಯುತ್ತದೆ ಎನ್ನುವಾಗ
12 ರಂದು ಮಡಿಕೇರಿಯಲ್ಲಿ "ಇದೇ ತಾ.19 ದ
ನವದೆಹಲಿಯ ಕರ್ನಾಟಕ ಭವನದಲ್ಲಿ
ಬೆಳೆಗಾರರ ಸಮಸ್ಯೆ ಕುರಿತಾಗಿ ಚರ್ಚಿಸಲು ವಿ
ಸಭೆ ಕರೆಯಲಾಗಿದೆ. ಕಾಫಿ ಬೆಳೆಯುವ
ಸಂಸದರಿಗೆ ಈ ಸಭೆಗೆ ಆಗಮಿಸಲು ಫ್ಯಾಕ್ಸ್ ಸಂ
ಕಳಿಹಿಸಲಾಗಿದೆ. ಈ ಸಭೆಯಲ್ಲಿ ಪಾಲ್ಗೊಳ್ಳಲು ಕೇ
ವಾಣಿಜ್ಯ ಸಚಿವರು ಹಾಗೂ ಪ್ರಧಾನಿಯವರ
ಆಮಂತ್ರಣ ನೀಡಲಾಗಿದೆ. ತಾ. 14 ರಂದು ಕೇ
ಕಾನೂನು ಸಚಿವ ವೀರಪ್ಪ ಮೊಯಿಲಿಯ
ಬೆಂಗಳೂರಿಗೆ ಆಗಮಿಸಲಿದ್ದಾರೆ. ಆ ಸಂದ
ಕೊಡಗಿನಿಂದಲೂ ಬೆಳೆಗಾರ ಪ್ರತಿನಿಧಿಗಳು ಹಾ
ಕೊಡಗಿನ ಜನ ಪ್ರತಿನಿಧಿಗಳು ಆಗ
ಮೊಯಿಲಿಯವರೊಂದಿಗೆ ಕಾಫಿ ಬೆಳೆಗಾ
ಸಮಸ್ಯೆಗಳ ಕುರಿತು ಚರ್ಚಿಸಬಹುದಾಗಿದೆ
ಘೋಷಿಸಿದರು.

ನವೆಂಬರ್ 15 ರಂದು ಕೇಂದ್ರ ಮಂತ್ರಿ ವೀ
ಮೊಯಿಲಿಯವರು ಕಾಫಿ ಬೆಳೆಗಾರರ ಸಂಘಟ
51ನೇ ವಾರ್ಷಿಕ ಸಮ್ಮೇಳನದಲ್ಲಿ ಮಾತನಾಡ
"for the development of the cof
industry the govt. is coming wit
spicial package of around rupees
crore and it will be presented in
next budget session" ಎಂದು ತಿಳಿಸಿದ

ಈ ಪ್ರದೇಶದ ಸಂಸದ ಅಡಗೂರು ಹೆ
ವಿಶ್ವನಾಥ್‌ರವರು ಚುನಾವಣೆಯ ಸಮಯದ
ಪ್ಯಾಕೇಜ್ ಬಗ್ಗೆ ಭರವಸೆ ಕೊಡುತ್ತಲೇ ಬಂದಿದ
ಅನಂತರ ಸಂಸದರಾದ ಬಳಿಕ ಜಿಲ್ಲೆಗೆ ಪ್ರಥಮ
ಭೇಟಿ ನೀಡಿದ ಮೇ 17 ರಂದು ಮಡಿಕೇರಿಯ
ಮಾಧ್ಯಮದವರೊಂದಿಗೆ ಮಾತನಾಡ
"ಕೊಡಗಿನ ಬೆಳೆಗಾರರ ಸಮಸ್ಯೆಗೆ ಕೇಂದ್ರ ಸರಕಾ
ಮೂಲಕ ಪರಿಹಾರ ಸಿಗಬೇಕಾಗಿದ್ದು ಈ ಬಗ್ಗೆ ನಾ
ಲೋಕಸಭೆಯಲ್ಲಿ ಪ್ರಯತ್ನ ಮಾಡುತ್ತೇನೆ.
ಪ್ಯಾಕೇಜ್ ಯೋಜನೆಯನ್ನು ಮತ್ತೆ ಕ್ಯಾಬಿನೆ
ಮುಂದೆ ತರಿಸಿ ಬೆಳೆಗಾರರ ಸಮಸ್ಯೆಗೆ ಪರಿಹಾ
ಕಂಡುಕೊಳ್ಳಲು ಯತ್ನಿಸುತ್ತೇನೆ" ಎಂದಿದ್ದರು.
ಭರವಸೆಯನ್ನಿತ್ತು 6 ತಿಂಗಳಾಯಿತು. ಪ್ರತಿಯೊ

ಪುಟ 1

ಕನಿಷ್ಠ ವೇತನ ಸಿಗಲೇಬೇಕು

ಎಚ್ಚರಿಕೆ ನೀಡಿದ ಅಸಂಘಟಿತ ಕಾರ್ಮಿಕರು

ಸಿಐಟಿಯು ನೇತೃತ್ವದಲ್ಲಿ ಅಸಂಘಟಿತ ಕಾರ್ಮಿಕರಿಗೆ ನಿಷ್ಠ ವೇತನ, ರೇಷನ್ ಕಾರ್ಡ್, ಪಿಂಚಣಿ ಸೌಲಭ್ಯ ನ್ನಿತರ ಬೇಡಿಕೆಗಳನ್ನು ಮುಂದಿಟ್ಟು ನವೆಂಬರ್ 26 ಂದು ಬೆಂಗಳೂರಿನಲ್ಲಿ ಫ್ರೀಡಂ ಪಾರ್ಕ್ ಬಳಿ ನಡೆದ ಹತ್ ಪ್ರತಿಭಟನೆಯು ಬಿಜೆಪಿ ಸರ್ಕಾರಕ್ಕೆ ಎಚ್ಚರಿಕೆ ೀಡಿತು.

2008 ರ ನವೆಂಬರ್ ತಿಂಗಳಿನಲ್ಲಿ ಸಹಿ ಸಂಗ್ರಹ ಳುವಳಿಯೊಂದಿಗೆ ಆರಂಭವಾದ ಅಸಂಘಟಿತ ಾರ್ಮಿಕರ ಹೋರಾಟ ಪ್ರಮುಖ 3ನೇ ಹಂತವನ್ನು ಲುಪಿದೆ. ಸೆಪ್ಟಂಬರ್ ತಿಂಗಳಲ್ಲಿ ತಾಲ್ಲೂಕು ಮತ್ತು ಲ್ಲಾ ಮಟ್ಟಗಳಲ್ಲಿ ಸಮರಶೀಲ ಹೋರಾಟ ನಡೆಸಿದ ಲಿಕ ಅಕ್ಟೋಬರ್ 6 ರಂದು ಮಾತುಕತೆ ಡೆಸುವುದಾಗಿ ಭರವಸೆ ನೀಡಿದ ಬಿಜೆಪಿ ಸರ್ಕಾರ ತಿಂಗಳಾದರೂ ಸಮರ್ಪಕ ಉತ್ತರ ನೀಡದಿರುವ ನ್ನೆಲೆಯಲ್ಲಿ 15,000 ಕ್ಕೂ ಹೆಚ್ಚು ನೌಕರರ ತಿಭಟನೆಯು ಮುಖ್ಯಮಂತ್ರಿಗಳೂ ಸೇರಿದಂತೆ ರ್ಕಾರದ ಮಂತ್ರಿಗಳನ್ನು ಎಚ್ಚರಗೊಳ್ಳುವಂತೆ ಾಡಿತು.

ಆದ್ದರಿಂದಲೇ ಸಚಿವ ಗೋವಿಂದ ರಜೋಳರವರು ಡಿಸೆಂಬರ್ 3 ರಂದು ಮಧ್ಯಾಹ್ನ 2.30ಕ್ಕೆ ವಿಧಾನಸೌಧ ದಲ್ಲಿ ಮಾತುಕತೆ ಡೆಸುವುದಾಗಿ ಸಿಐಟಿಯು ಪ್ರಧಾನ ಕಾರ್ಯದರ್ಶಿ ಜೆಕೆ ನಾಯರ್ ಅವರಿಗೆ ಬರೆದ ಲಿಖಿತ ಪತ್ರವನ್ನು ೀಡಿದ್ದರು. ಇದು ಯಶಸ್ಸಿನ ಇನ್ನೊಂದು ಮೆಟ್ಟಿಲು ನರೆ ತಪ್ಪಾಗಲಾರದು.

ಂದು ವರ್ಷದಿಂದ ನಿರಂತರ ಹೋರಾಟ


ಅಸಂಘಟಿತ ಕಾರ್ಮಿಕರ ಹೋರಾಟ ಿದು ನಿನ್ನೆಯದಲ್ಲ. ಸಿಐಟಿಯು ಕರ್ನಾಟಕ ಜ್ಯ ಸಮಿತಿ ಕರೆಯಂತೆ ಒಂದು ವರ್ಷದಲ್ಲಿ ವಿಧ ಹಂತಗಳ ಹೋರಾಟದಲ್ಲಿ 1ಲಕ್ಷಕ್ಕೂ ಚ್ಚು ಕಾರ್ಮಿಕರು, ನೌಕರರು ಚಳುವಳಿಯಲ್ಲಿ ಾಗವಹಿಸಿದ್ದರು. ಅಂಗನವಾಡಿ, ಂಚಾಯಿತಿ, ಬಿಸಿಯೂಟ, ಹಮಾಲಿ, ಟ್ಟಡ ಕಾರ್ಮಿಕರು, ಬೀಡಿ ಕಾರ್ಮಿಕರು, ಾರಿಕಾ ಕಾರ್ಮಿಕರು ಹೀಗೆ ವಿವಿಧ ಾಗಗಳ ಕಾರ್ಮಿಕರು 'ದುಡಿಯುವ ಜನರು ಂದೇ' ಎಂಬ ಘೋಷಣೆಯಲ್ಲಿ ಬಾವುಟದ ಅಡಿಯಲ್ಲಿ ಅಣಿನೆರೆದಿದ್ದರು. ದರ ಫಲವಾಗಿಯೇ ನವೆಂಬರ್ 26ರ ಬೃಹತ್ ತಿಭಟನೆ.

ಬಿಜೆಪಿ ಸರ್ಕಾರವು ಅಸಂಘಟಿತ ಕಾರ್ಮಿಕರ ಡಿಕೆಗಳನ್ನು ನಿರ್ಲಕ್ಷಿಸುತ್ತಾ ಬಂದಿದೆ. ಬೆಲೆಗಳು ಿನೇ ಹೆಚ್ಚುತ್ತಿದ್ದರೂ ಅವರ ವೇತನ ಚ್ಚುತ್ತಿಲ್ಲ, ಆದರಲ್ಲೂ ಸರ್ಕಾರದ ಇಲಾಖೆಗಳ ಲ್ಲಿ ಕೆಲಸ ಮಾಡುತ್ತಿರುವ ಅಂಗನವಾಡಿ, ಯೂಟ, ಗ್ರಾಮ ಪಂಚಾಯತ್ ನೌಕರರು ಗಳಿಗಟ್ಟಲೆ ವೇತನ ಪಡೆಯದೆ ಬದುಕುವ

ಸೆಪ್ಟೆಂಬರ್ 15, 2009 ರಂದು ರಾಜ್ಯವ್ಯಾಪಿ ನಡೆದ ಅಸಂಘಟಿತ ಕಾರ್ಮಿಕರ ಬೃಹತ್ ಆಂದೋಲನದ ಸಂದರ್ಭದಲ್ಲಿ ರಾಜ್ಯ ಬಿಜೆಪಿ ಸರ್ಕಾರ ಕನಿಷ್ಠ ಕೂಲಿ ಸೇರಿದಂತೆ ಬೇಡಿಕೆಗಳ ಬಗೆಗೆ ಚರ್ಚಿಸುವುದಾಗಿ ಹೇಳಿತ್ತು. ನಡುವೆ ಪ್ರವಾಹದ ನೆಪವನ್ನು ಅಡ್ಡಮಾಡಿಕೊಂಡು ಕಿತ್ತಾಟದಲ್ಲಿ ಮುಳುಗಿ ಕಾರ್ಮಿಕರ ಬೇಡಿಕೆ ಮರೆತು ಕುಳಿತಿದ್ದ ಸರ್ಕಾರಕ್ಕೆ ನವೆಂಬರ್ 27 ರ ಪ್ರತಿಭಟನೆ ಎಚ್ಚರಿಕೆ ನೀಡಿದೆ.

ದಾರುಣ ಪರಿಸ್ಥಿತಿ ಇದೆ. ಇಂತಹ ಹಿನ್ನೆಲೆಯಲ್ಲಿ ಕಾರ್ಮಿಕರ, ನೌಕರರ ಆಕ್ರೋಶ ಮುಗಿಲು ಮುಟ್ಟಿತ್ತು.

ನವೆಂಬರ್ 26 ರ ಬೆಳಿಗ್ಗೆಯಿಂದಲೇ ಕಾರ್ಮಿಕರ ದಂಡು ಫ್ರೀಡಂ ಪಾರ್ಕ್ ಬಳಿ ಸೇರಿತ್ತು. ಸುಮಾರು 11 ಗಂಟೆಗೆ ಆರಂಭವಾದ ಸಭೆಯನ್ನು ಉದ್ದೇಶಿಸಿ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಮಾತನಾಡಿದರು. ಕಾರ್ಮಿಕರ ಬೇಡಿಕೆಗಳನ್ನು ನಿರ್ಲಕ್ಷಿಸಿ ಸೆಪ್ಟೆಂಬರ್ 15 ರಂದು ನಡೆದ ಪೊಲೀಸ್ ದೌರ್ಜನ್ಯವನ್ನು ಖಂಡಿಸಿದ ವಿಜೆಕೆ ನಾಯರ್ 'ಕಾರ್ಮಿಕ ಕಲ್ಯಾಣ ಮಂಡಳಿ'ಗಳ ಹೆಸರಿನಲ್ಲಿ 2 ಕೋಟಿ ರೂ. ಖರ್ಚು ಮಾಡಿ 25 ಲಕ್ಷ ರೂ.




ಸಚಿವ ಕಾರಜೋಳರಿಗೆ ಮನವಿ ಪತ್ರ ಸಲ್ಲಿಸುತ್ತಿರುವ ಮಾನ್ವಡೆ, ವರಲಕ್ಷ್ಮಿ ಮತ್ತು ವಿಜೆಕೆ ನಾಯರ್

ಸಹಾಯ ಮಾಡುವ ಪರಿಪಾಠ ಸರ್ಕಾರ ಬೆಳೆಸಿಕೊಂಡಿದೆ ಎಂದರು.

ಅಸಂಘಟಿತ ಕಾರ್ಮಿಕರ ಬೇಡಿಕೆಗಳನ್ನು ಧಿಕ್ಕರಿಸಿ ಗಣಿ ಮಾಲಿಕರಿಗೆ ಡೊಗ್ಗು ಸಲಾಮು ಹಾಕುವ ಸರ್ಕಾರದ ನೀತಿಯನ್ನು ಖಂಡಿಸಿದರು. ಮಾತುಕತೆಗೆ ಲಿಖಿತ ಆಹ್ವಾನ ಬಾರದೇ ಹೋದಲ್ಲಿ ಜೈಲಿಗೆ ಹೋಗಲೂ ತಯಾರು ಎಂದಾಗ ಪ್ರಚಂಡ ಕರತಾಡನದ ಮೂಲಕ ಪ್ರತಿಭಟನಾಕಾರರು ಸ್ವಾಗತಿಸಿದರು.

ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಕರ್ನಾಟಕ ರಾಜ್ಯ ಗ್ರಾಮಪಂಚಾಯಿತಿ ನೌಕರರ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಯವರು 'ಕಳೆದ 18 ತಿಂಗಳಲ್ಲಿ ಗ್ರಾಮೀಣಾಭಿವೃದ್ಧಿ ಸಚಿವೆಯಾಗಿದ್ದ ಶೋಭಾ ಕರಂದ್ಲಾಜೆಯವರಿಂದಾಗಿ



ನೌಕರರ ಸಮಸ್ಯೆಗಳು ನೆನೆಗುದಿಗೆ ಬಿದ್ದಿವೆ. ಇದು ಬಿಜೆಪಿ ಸರ್ಕಾರದ ನೌಕರರ ವಿರೋಧಿ ನೀತಿಯ ಫಲ. ಇದರಿಂದ ಪಂಚಾಯಿತಿ ನೌಕರರು ಅತೃಪ್ತರಾಗಿದ್ದಾರೆ. ಆದ್ದರಿಂದ ನೌಕರರು ತಮ್ಮ ಬೇಡಿಕೆಗಳಿಗಾಗಿ ಸ್ವತಂತ್ರವಾಗಿ ಹೋರಾಡುವುದರ ಜತೆಯಲ್ಲಿ ಸರ್ಕಾರದ ನೀತಿಯ ವಿರುದ್ಧ ಸಿಐಟಿಯು ನೇತೃತ್ವದಲ್ಲಿ ಹೋರಾಟಕ್ಕೆ ಅಣಿಯಾಗಿದ್ದಾರೆ' ಎಂದು ಘೋಷಿಸಿದರು.

ಅಕ್ಷರ ದಾಸೋಹ ಸಂಘದ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತಾರವರು ತಿಂಗಳಿಗೆ 300 ರೂ.(ದಿನಕ್ಕೆ 10 ರೂ) ನಿಂದ ರೂ 650 ರವರೆಗೆ ದುಡಿಯುತ್ತಿರುವ ಬಿಸಿಯೂಟ ನೌಕರರ ದಾರುಣ ಪರಿಸ್ಥಿತಿಯನ್ನು ವಿವರಿಸಿದರು. ಬಿಜೆಪಿ ಸರ್ಕಾರವು ಖಾಸಗೀಕರಣ ನೀತಿಯ ಮೂಲಕ ಈ ಅಲ್ಪ ಆದಾಯಕ್ಕೂ ಏಟು ನೀಡುತ್ತಿದೆ ಎಂದು ಟೀಕಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ರಾಜ್ಯ ಅಧ್ಯಕ್ಷೆ ಶಾಂತಾ ಘಂಟೆ ಮಾತನಾಡಿ ದೊಡ್ಡಸಂಖ್ಯೆಯಲ್ಲಿ ಹೋರಾಟದಲ್ಲಿ ಭಾಗವಹಿಸುತ್ತಿರುವ ನೌಕರರನ್ನು ಅಭಿನಂದಿಸಿದರು.

'ಇನ್ನೂ ಕಾಯೆವು'

ಇಷ್ಟೆಲ್ಲಾ ಪ್ರತಿಭಟನೆ ನಡೆಯುತ್ತಿರುವ ಸಂದರ್ಭದಲ್ಲಿ ಸರ್ಕಾರದಿಂದ ಯಾವುದೇ ಪ್ರತಿಕ್ರಿಯೆ ಬಾರದಿದ್ದಾಗ ಪ್ರತಿಭಟನೆಯ 'ಚಲಿಸುವ ವೇದಿಕೆ' ಮುಂದಕ್ಕೆ ಚಲಿಸಿತು. 'ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ' 'ಕನಿಷ್ಠ ವೇತನ ರೂ.6000 ಸಿಗಲೇಬೇಕು' 'ಎಲ್ಲಾ ಅಸಂಘಟಿತ ಕಾರ್ಮಿಕರಿಗೆ ರೇಷನ್ ಕಾರ್ಡ್, ಮನೆ ನಿವೇಶನ ಬೇಕೇ ಬೇಕು, ಪೋಲಿಸರ ಲಾಟಿಗೆ ಬೆದರುವುದಿಲ್ಲ' ಇತ್ಯಾದಿ ಘೋಷಣೆಗಳೊಂದಿಗೆ ಉತ್ಸಾಹದಿಂದ ಕಾರ್ಮಿಕರು, ನೌಕರರು ಮುಂದಕ್ಕೆ ಸಾಗಿದರು. ಪರಿಸ್ಥಿತಿಯ ಗಂಭೀರತೆಯನ್ನು ಅರಿತ ಪೋಲಿಸ ಅಧಿಕಾರಿಗಳು ಕಾಳಿದಾಸ ಮಾರ್ಗದಲ್ಲಿ ಅಡ್ಡ ಹಾಕಲಾಗಿದ್ದ ಕಬ್ಬಿಣದ ಬೇಲಿಗಳನ್ನು ತೆಗೆದು ಮೆರವಣಿಗೆಯನ್ನು ಮುಂದಕ್ಕೆ ಸಾಗಲು ಬಿಟ್ಟರು.

ಮೆರವಣಿಗೆಯು ಪ್ಯಾಲೇಸ್ ರಸ್ತೆ (ಕಾವೇರಿ ಅತಿಥಿ ಗೃಹದ ಬಳಿ) ತಲುಪುತ್ತಿದಂತೆಯೇ ಪೋಲಿಸರು ಮುನಃ ಮೆರವಣಿಗೆ ತಡೆದರು. ಮತ್ತೆ ಘೋಷಣೆಗಳು ಮುಗಿಲೇರಿದವು. ನಂತರ ಸರ್ಕಾರದ ಪರವಾಗಿ ಸಚಿವ ಗೋವಿಂದ ಕಾರಜೋಳ ಬರುವ ಸುದ್ದಿಯ ನಂತರವಷ್ಟೆ ಪ್ರತಿಭಟನೆ ಶಾಂತವಾಯಿತು.

ಸರ್ಕಾರದ ಮತ್ತೊಂದು ಭರವಸೆ

ಸರ್ಕಾರದ ವತಿಯಿಂದ ಲಿಖಿತ ಆಹ್ವಾನ ತಂದಿದ್ದ ಸಚಿವರು 'ಅಸಂಘಟಿತ ಕಾರ್ಮಿಕರ ಬೇಡಿಕೆ ಹಾಗೂ ಸೆಪ್ಟೆಂಬರ್ 15 ರಂದು ನಡೆದ ಪೋಲಿಸ್ ದೌರ್ಜನ್ಯ ಮೊದಲಾದ ಅಂಶಗಳ ಬಗ್ಗೆ ಮಾತುಕತೆ ನಡೆಸಿ ಬಗೆಹರಿಸಲು ಡಿಸೆಂಬರ್ 3 ರಂದು ಮಧ್ಯಾಹ್ನ 12.30ಕ್ಕೆ ವಿಧಾನಸೌಧದ 313 ನೇ ಕೊಠಡಿಯಲ್ಲಿ ಮುಖ್ಯಮಂತ್ರಿಗಳು ಇತರ ಸಚಿವರು ಹಾಗೂ ಅಧಿಕಾರಿಗಳನ್ನು ಸೇರಿಸಿ ಮಾತುಕತೆ ನಡೆಸುತ್ತಾರೆ' ಎಂದು ಭರವಸೆ ಇತ್ತರು.

ಆದರೆ ಈಗಾಗಲೇ ಇಬ್ಬರು ಸಚಿವರು ನೀಡಿದ್ದ ಭರವಸೆಯಿಂದ ಬೇಸತ್ತಿದ್ದ ಕಾರ್ಮಿಕರು ಸಚಿವರ ಮಾತಿಗೆ ಸೊಪ್ಪು ಹಾಕಲಿಲ್ಲ. ಈ ಕೂಡಲೇ ಮಾತುಕತೆ ನಡೆದು. ಬೇಡಿಕೆ ಈಡೇರಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು. ಸಿಐಟಿಯು ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್, ಗ್ರಾಮಪಂಚಾಯಿತಿ ನೌಕರರ ಸಂಘದ ಅಧ್ಯಕ್ಷ ಮಾರುತಿ ಮಾನ್ಪಡೆ, ಸಿಐಟಿಯು ಕಾರ್ಯದರ್ಶಿಗಳಾದ ಎಸ್.ಪ್ರಸನ್ನಕುಮಾರ್, ಎಸ್.ವರಲಕ್ಷ್ಮಿ ಕಟ್ಟಡ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್.ವೀರಾಸ್ವಾಮಿ ಮೊದಲಾದವರು ಮಾತನಾಡಿ ಡಿಸೆಂಬರ್ 3 ರ ಮಾತುಕತೆ ಫಲಪ್ರದವಾಗದಿದ್ದಲ್ಲಿ ಹೋರಾಟವನ್ನು ಪುನಃ ತಾಲ್ಲೂಕು, ಜಿಲ್ಲಾ ಮಟ್ಟಗಳಲ್ಲಿ ಮುಂದುವರೆಸುವುದಾಗಿ ಘೋಷಿಸಿದ ನಂತರವಷ್ಟೆ ಸಚಿವರು ವಾಪಾಸು ಹೋಗಲು ಸಾಧ್ಯವಾಯಿತು.

○ ಬಾಲಕೃಷ್ಣ ಶೆಟ್ಟಿ

ಬಳ್ಳಾರಿ ಜಿಲ್ಲಾ ಸಿಐಟಿಯು ಸಮ್ಮೇಳನ

ಸಂಘಟನೆ ಬಲಪಡಿಸಿ ವಿಸ್ತರಿಸಲು ನಿರ್ಧಾರ

ಬಳ್ಳಾರಿ ಜಿಲ್ಲೆಯ ಭತ್ತದ ಖಣಜವೆಂದೇ ಹೆಸರಾಗಿರುವ ಸಿರುಗುಪ್ಪದಲ್ಲಿ ಕೆಂಬಾವುಟಗಳ ಹಾರಾಟ. ನಾವು ಬೆವರನು ಸುರಿಸಿ ದುಡಿಯುವ ಜನ ನಮ್ಮ ಬೆವರಿನ ಪಾಲನು ಕೇಳುವೆವು ಎಂಬ ಹಾಡಿನೊಂದಿಗೆ ಸಿ.ಐ.ಟಿ.ಯು. 6ನೇ ಜಿಲ್ಲಾ ಸಮ್ಮೇಳನ ಹುರುಪಿನಿಂದ ಪ್ರಾರಂಭವಾಯಿತು. ಸಂಗಾತಿ ಹೆಚ್.ತಿಪ್ಪಯ್ಯನವರು ಕೆಂಬಾವುಟ ಹಾರಿಸಿ ಧ್ವಜಾರೋಹಣ ಮಾಡಿದಾಗ ವಿಶ್ವದ ಕಾರ್ಮಿಕರೇ ಒಂದಾಗಿ, ಹೋರಾಟಕ್ಕೆ ಮುಂದಾಗಿ, ಕಾರ್ಮಿಕ ಐಕ್ಯತೆ ಚಿರಾಯುವಾಗಲಿ, ನಮ್ಮಲ್ಲಿಲ್ಲ ಹಿಂದೂ ರಕ್ತ, ನಮ್ಮಲ್ಲಿಲ್ಲ ಮುಸ್ಲಿಂ ರಕ್ತ, ನಮ್ಮಲ್ಲಿಲ್ಲ ಕ್ರೈಸ್ತ ರಕ್ತ, ನಮ್ಮಲ್ಲಿರುವುದು ಮಾನವ ರಕ್ತ ಎಂಬ ಘೋಷಣೆಗಳು ಮೊಳಗಿದವು. ಸಿ.ಐ.ಟಿ.ಯು. ರಾಜ್ಯ ಕಾರ್ಯದರ್ಶಿಗಳಾದ ಸಂಗಾತಿ ಎಸ್.ಪ್ರಸನ್ನಕುಮಾರ್‌ರವರು ಮಾಡಿದ ಉದ್ಘಾಟನಾ ಭಾಷಣ ಪ್ರತಿನಿಧಿಗಳ ಎದೆಗಳಲ್ಲಿ ಹೋರಾಟದ ಕಿಚ್ಚನ್ನು ಮೂಡಿಸಿತು. ವರ್ಗ ಸಂಘರ್ಷದ ಸ್ಫೂರ್ತಿಯನ್ನು ಇಮ್ಮಡಿಗೊಳಿಸಿತು. ಬೆಲೆಯೇರಿಕೆ, ಹಸಿವಿನ ಪರಿಸ್ಥಿತಿ, ನೆರೆಪ್ರಕೋಪದ ಭೀಕರತೆ ಬಗ್ಗೆ ಮಾತನಾಡಿದ ಸಂಗಾತಿ ಪ್ರಸನ್ನಕುಮಾರ್‌ರವರು ಜನರು ಹಸಿವಿನಿಂದ ಸಾಯುತ್ತಿರುವ ಈ ಸಂದರ್ಭ ಯಡ್ಡಿ, ರೆಡ್ಡಿಗಳು ನಡೆಸಿರುವ ಸ್ವಾರ್ಥ ರಾಜಕಾರಣವನ್ನು ಖಂಡಿಸಿದರು. ಜನರ ತೆರಿಗೆಯಿಂದ ಸಂಗ್ರಹವಾದ ನೂರಾರು ಕೋಟಿ ಹಣವನ್ನು ಮಠಗಳಿಗೆ ನೀಡುತ್ತಿರುವ ಬಿ.ಜೆ.ಪಿ ಸರ್ಕಾರ ದುಡಿಯುವ ಜನರ ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುತ್ತಿಲ್ಲ. ತಮ್ಮ ಬೇಡಿಕೆಗಾಗಿ ಹೋರಾಟ ನಡೆಸಿದ ಕಾರ್ಮಿಕರ ಮೇಲೆ ಪೊಲೀಸರನ್ನು ಛೂ ಬಿಟ್ಟು ಗೂಂಡಾಗಿರಿ ನಡೆಸುತ್ತಿದೆ ಎಂದು ಖಂಡಿಸಿದರು.

ಸಮ್ಮೇಳನಕ್ಕೆ ಶುಭ ಹಾರೈಸಿ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಕಾರ್ಯದರ್ಶಿಗಳಾದ ಯು.ಬಸವರಾಜ್ ಮಾತನಾಡಿ ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ವಿವರಿಸಿದರು. ಏಷಿಯನ್ ದೇಶಗಳ ವ್ಯಾಪಾರವನ್ನು ಮುಕ್ತಗೊಳಿಸುವ ಹುನ್ನಾರ ನಡೆಯುತ್ತಿದೆ. ಇದು ಜಾರಿಯಾದರೆ, ಭತ್ತ ಬೆಳೆಯುವ ರೈತರ ಮೇಲೆ ತೀವ್ರ ದುಷ್ಪರಿಣಾಮ ಬೀರಲಿದೆ. ಸಿರುಗುಪ್ಪದ ರೈಸ್‌ಮಿಲ್‌ಗಳೆಲ್ಲಾ ಮುಚ್ಚಿ ಹೋಗಲಿವೆ ಎಂದು ಎಚ್ಚರಿಸಿದರು. ಬಳ್ಳಾರಿಗೆ ದೊಡ್ಡ ದೊಡ್ಡ ಸುಲಿಗೆಕೋರರನ್ನು ಸರ್ಕಾರ ಆಹ್ವಾನಿಸುತ್ತಿದೆ. ಗಣಿ ಸಂಪತ್ತನ್ನು ಲೂಟಿ ಮಾಡಲು ಅವಕಾಶ ಮಾಡಿಕೊಡಲಾಗುತ್ತಿದೆ ಎಂದು ಬಸವರಾಜ್ ತಿಳಿಸಿದರು. ಸರ್ಕಾರದ ಈ ನೀತಿಯನ್ನು ಹಿಮ್ಮೆಟ್ಟಿಸಬೇಕೆಂದು ಕರೆ ನೀಡಿದರು. ಹೆಚ್.ತಿಪ್ಪಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಉದ್ಘಾಟನಾ ಸಮಾರಂಭದಲ್ಲಿ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಇ.ಆರ್.ಯಲ್ಲಪ್ಪ ಜನವಾದಿ ಮಹಿಳಾ ಸಂಘಟನೆಯ ಮುಖಂಡರಾದ ಚಂದ್ರಕುಮಾರಿ ಮತ್ತು ಸರ್ಕಾರಿ ನೌಕರರ ಒಕ್ಕೂಟದ ಸಂಚಾಲಕರಾದ ಹುಲಿಕಟ್ಟಿ ಚನ್ನಬಸಪ್ಪ ಶುಭ ಹಾರೈಸಿ ಮಾತನಾಡಿದರು. ಆರ್.ಎಸ್.ಬಸವರಾಜ್ ಸ್ವಾಗತಿಸಿದರು. ಎ.ಎಮ್. ಮಹಾದೇವಿ ವಂದಿಸಿದರು.

ನಿರ್ಣಯಗಳು

ಜಿಲ್ಲೆಯ ಆಸ್ಪತ್ರೆ ಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಕಾರ್ಮಿಕರನ್ನು ಸಿ.ಪಿ.ಐ.ಯು. ಅಡಿಯಲ್ಲಿ ಸಂಘಟಿಸಬೇಕೆಂದು ನಿರ್ಣಯಿಸಲಾಯಿತು. ಮುಖ್ಯವಾಗಿ ಹೊಸಪೇಟೆ ತಾಲ್ಲೂಕಿನ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರನ್ನು ಸಂಘಟಿಸಬೇಕೆಂಬ ನಿರ್ಣಯ ತೆಗೆದುಕೊಳ್ಳಲಾಯಿತು.

ಬಳ್ಳಾರಿ, ಹೊಸಪೇಟೆ, ಸಂಡೂರು ಗಣಿಗಳಲ್ಲಿ ದುಡಿಯುವ ಕಾರ್ಮಿಕರ ಪರಿಸ್ಥಿತಿ ಅತ್ಯಂತ ಶೋಚನೀಯವಾಗಿದೆ. ಈ ಕಾರ್ಮಿಕರ ಬೆವರು, ರಕ್ತ ಹೀರಿ ಕೊಬ್ಬಿ ಬೆಳೆದ ಗಣಿಮಾಲಿಕರು ಸ್ವಾರ್ಥ ರಾಜಕಾರಣದಲ್ಲಿ ತೊಡಗಿದ್ದಾರೆ. ಗಣಿಗಳಲ್ಲಿ ದುಡಿಯುವ ಕಾರ್ಮಿಕರನ್ನು ಹಾಗೆ ಗಾರ್ಮೆಂಟ್ ಕಾರ್ಮಿಕರನ್ನು ಸಹ ಸಿ.ಐ.ಟಿ.ಯು ಅಡಿಯಲ್ಲಿ ಸಂಘಟಿಸುವ ತೀರ್ಮಾನ ಕೈಗೊಳ್ಳಲಾಯಿತು.

ಆಶಾ ಕಾರ್ಯಕರ್ತರು ಕನಿಷ್ಟ ಉದ್ಯೋಗದ ಭದ್ರತೆಯಿಲ್ಲದ ಅತ್ಯಂತ ಶೋಷಣೆಗೆ ಒಳಗಾಗಿದ್ದಾರೆ. ತಿಂಗಳೆಲ್ಲ ದುಡಿದರೂ ಆಪರೇಷನ್ ಕೇಸ್‌ಗಳು ದೊರೆಯದೆ ಕೈಯಿಂದ ಹಣ ಖರ್ಚು ಮಾಡುವ ದುಸ್ಥಿತಿ ಆಶಾಕಾಯಕರ್ತರದಾಗಿದೆ. ಇವರನ್ನು ಸಿ.ಐ.ಟಿ.ಯು. ಅಡಿಯಲ್ಲಿ ಸಂಘಟಿಸುವ ನಿರ್ಣಯ ತೆಗೆದುಕೊಳ್ಳಲಾಯಿತು.

ಪ್ರಾವಿಡೆಂಟ್ ಫಂಡ್‌ಗಾಗಿ ಹೋರಾಟ ನಡೆಸುವುದು, ಕಟ್ಟಡ ಕಾರ್ಮಿಕರ ಕಲ್ಯಾಣ ಯೋಜನೆಯನ್ನು ಜಾರಿಗೊಳಿಸುವುದು ಹಾಗೂ ಕಟ್ಟಡ ಕಾರ್ಮಿಕರ ಕಲ್ಯಾಣ ಯೋಜನೆಯ ಅಡಿಯಲ್ಲಿ ಬಳ್ಳಾರಿಯಲ್ಲಿರುವ ಖಾಸಗಿ ಆಸ್ಪತ್ರೆಯನ್ನು ಕಟ್ಟಡ ಕಾರ್ಮಿಕರ ತಪಾಸಣೆಗೆ ನಿಗದಿ ಮಾಡಬೇಕು ಎಂಬ ನಿರ್ಣಯಗಳನ್ನು ಜೆ.ಸತ್ಯಬಾಬು ಮಂಡಿಸಿದರು, ಎ.ಕರುಣಾನಿಧಿ ಅನುಮೋದಿಸಿದರು.

ನೂತನ ಜಿಲ್ಲಾ ಸಮಿತಿ ಆಯ್ಕೆ

ಅಧ್ಯಕ್ಷರು : ಕೆ.ನಾಗರತ್ನಮ್ಮ

ಪ್ರಧಾನ ಕಾರ್ಯದರ್ಶಿ: ಆರ್.ಎಸ್.ಬಸವರಾಜ್

ಖಜಾಂಚಿ : ವಿಶ್ವನಾಥ ಸ್ವಾಮಿ

ನವೆಂಬರ್ 6 ಮತ್ತು 7 ಈ ಎರಡು ದಿನಗಳ ಕಾಲ ನಡೆದ ಸಮ್ಮೇಳನದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಸಂಘ, ಬಿಸಿಯೂಟ ನೌಕರರ ಸಂಘ, ಫಿಟ್ಟರ್ಸ್ ಅಸೋಸಿಯೇಷನ್, ಹಮಾಲಿ ಕಾರ್ಮಿಕರ ಸಂಘ, ಕಟ್ಟಡ ಕಾರ್ಮಿಕರ ಸಂಘ, ಆಶಾ ಕಾರ್ಯಕರ್ತರ ಸಂಘ, ಬೈಲು ಪತ್ತಾರ ಕಾರ್ಮಿಕರ ಸಂಘ ಮತ್ತು ಗ್ರಾಮ ಪಂಚಾಯತಿ ನೌಕರರ ಸಂಘ 80 ಜನ ಪ್ರತಿನಿಧಿಗಳು ಭಾಗವಹಿಸಿದ್ದರು. ಕರಡು ವರದಿಯ ಮೇಲೆ ಹದಿನಾರು ಜನ ಸಂಗಾತಿಗಳು ಅರ್ಥಪೂರ್ಣ ಚರ್ಚೆ ನಡೆಸಿದರು.

ಸಮಾರೋಪ ಸಮಾರಂಭದಲ್ಲಿ ಸಂಗಾತಿ ಎಸ್.ಪ್ರಸನ್ನಕುಮಾರ, ಕೆ.ನಾಗರತ್ನಮ್ಮ ಅವರ ಸ್ಫೂರ್ತಿದಾಯಕ ಭಾಷಣದಿಂದ ಹೊಸ ಹುಮ್ಮಸ್ಸು ಪಡೆದ ಪ್ರತಿನಿಧಿಗಳು ಘೋಷಣೆ ಕೂಗುತ್ತಾ ನಿರ್ಗಮಿಸಿದರು.

ವರದಿ : **ಹುಲಿಕಟ್ಟಿ ಚನ್ನಬಸ**

ಕೊಡಗು ಬಂದ್...

ಪುಟ 10 ರಿಂದ

ಕೊಡಗಿಗೆ ಬಂದಾಗಲೂ ಇದನ್ನೇ ಪುನರುಚ್ಚರಿಸುತ್ತಲೇ ಕಾಲಹರಣ ಮಾಡುತ್ತಿದ್ದಾರೆ. ಈಗಲೂ ತಾ.24 ರಂದು ವಿಶ್ವನಾಥ್‌ರವರ ನೇತೃತ್ವದಲ್ಲಿ ಒಂದು ನಿಯೋಗ ದೆಹಲಿಗೆ ಹೋಗಿದೆ ಎಂದೂ, ಮಂತ್ರಿ ಆನಂದ ಶರ್ಮರವರನ್ನೂ ಭೇಟಿಯಾಗಿದೆ ಎಂದೂ ಕರ್ನಾಟಕ ಬೆಳೆಗಾರರ ಒಕ್ಕೂಟದ ಮುಖಂಡರು ಹೇಳಿಕೆ ಕೊಟ್ಟಿದ್ದಾರೆ.

"ಸಾಲ ಬಾಧೆಯಿಂದ ಬಳಲುತ್ತಿರುವ ಸಣ್ಣ ಮತ್ತು ಮಧ್ಯಮ ವರ್ಗದ ಕಾಫಿ ಬೆಳೆಗಾರರಿಗೆ ಉತ್ತೇಜನ ಕೊಡುವ ನಿಟ್ಟಿನಲ್ಲಿ ಕೇಂದ್ರ ಸರಕಾರವು ಸದ್ಯದಲ್ಲೇ ವಿಶೇಷ ಆರ್ಥಿಕ ಪ್ಯಾಕೇಜ್ ಘೋಷಿಸಲಿದೆ" ಎಂದು ಆಗಸ್ಟ್ 31 ರಂದು ಹೇಳಿದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಆನಂದ ಶರ್ಮ" ವಿಶೇಷ ಪ್ಯಾಕೇಜ್ ಕುರಿತಂತೆ ಈಗಾಗಲೇ ರೂಪುರೇಶೆ ತಯಾರಿಸಲಾಗುತ್ತಿದ್ದು ಸದ್ಯದಲ್ಲೇ ಇದಕ್ಕೆ ಸಚಿವ ಸಂಪುಟದ ಅಂಕಿತ ಬೀಳಲಿದೆ" ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಪ್ಯಾಕೇಜ್ ತಡವಾಗಲು ನೆರೆಯೇ ಕಾರಣ ಎಂದು ಒದರಲು ವಿಶ್ವನಾಥ್‌ರಿಗೆ ನಾಚಿಗೆಯಾಗಲಿಲ್ಲ.

ನೆರೆ ಬಂದದ್ದು ಈಗ. ಪ್ಯಾಕೇಜ್ ಬಗ್ಗೆ ವಿಶ್ವನಾಥ್‌ರವರೇ ಭರವಸೆ ಕೊಟ್ಟು ಆರು ತಿಂಗಳಾಯಿತು. ಈ ತಡಕ್ಕೆ ನಿಜ ಕಾರಣವನ್ನು ಬಯಲು ಮಾಡಲು ಅವರು ಸಿದ್ದರಿಲ್ಲ.

ಬಂದ್ ನಡೆಯದಂತೆ ನೋಡಿಕೊಳ್ಳಲು ವಿಶ್ವನಾಥ್ ಮತ್ತು ಕೆ.ಜಿ.ಎಫ್.ನ ಮುಖಂಡರುಗಳು ಹತ್ತು ಹಲವು ತಂತ್ರಗಳನ್ನು ಪ್ರಯೋಗಿಸಿದ್ದರೆನ್ನುವುದು ರಹಸ್ಯವೇನೂ ಅಲ್ಲ.

ಗೋಣಿಕೊಪ್ಪಲಿನ ಬೆಳೆಗಾರರ ಸಭೆಗೆ ತನ್ನವರನ್ನು ಕಳುಹಿಸಿ ಬಂದ್‌ನ ತೀರ್ಮಾನ ತೆಗೆದುಕೊಳ್ಳದಂತೆ ಮಾಡಲು ವಿಶ್ವನಾಥ್ ಯತ್ನಿಸಿದ್ದಾರೆ. ಅಲ್ಲಿ ಕೊಡಗು ಬೆಳೆಗಾರರ ಒಕ್ಕೂಟದ ಮುಖಂಡರಲ್ಲಿ ಚಂಚಲ ಚಿತ್ತರನ್ನು ಬಂದ್ ಕರೆಯಿಂದ ಹಿಮ್ಮೆಟ್ಟಿಸುವಲ್ಲಿ ವಿಶ್ವನಾಥ್ ಯಶಸ್ವಿಯಾದರೆನ್ನುವುದು ಸತ್ಯ.

ಬಂದ್ ನಡೆದೇ ನಡೆಯುವುದೆನ್ನುವಾಗ ಒಂದೆಡೆಯಿಂದ ವಿಶ್ವನಾಥ್ ಭರವಸೆಗಳ ಮಹಾಪೂರವನ್ನೇ ಹರಿಸಲು ಮುಂದಾದರೆ ಕರ್ನಾಟಕ ಬೆಳೆಗಾರರ ಒಕ್ಕೂಟ ಬಂದ್‌ಗೆ ತನ್ನ ಅಸಮ್ಮತಿಯನ್ನು ವ್ಯಕ್ತಪಡಿಸಿತು.

ನಂದಾ ಬೆಳ್ಯಪ್ಪನವರು ಬಹಿರಂಗವಾಗಿಯೇ ಬಂದ್‌ಗೆ ತನ್ನ ವಿರೋಧ ವ್ಯಕ್ತಪಡಿಸಿದರು.

ರಾಜ್ಯ, ಕೇಂದ್ರ ಸರಕಾರಗಳ ಒತ್ತಡ, ವಿಶ್ವನಾಥ್‌ರವರ ಒತ್ತಡ, ಕೆ.ಜಿ.ಎಫ್. ಮುಖಂಡರುಗಳಿಂದ ಒತ್ತಡ ಈ ರೀತಿ ಎಲ್ಲಾ ಪ್ರಭಾವಿಗಳಿಂದ ಒತ್ತಡ ಬಂದು ಕೊಡಗು ಬೆಳೆಗಾರರ ಒಕ್ಕೂಟದ ಮುಖಂಡತ್ವದಲ್ಲಿ ಒಂದು ವಿಭಾಗ ಈ ಒತ್ತಡಗಳಿಗೆ ಮಣಿದು ಬಂದ್‌ಗೆ ಬಹಿರಂಗವಾಗಿಯೇ ವಿರೋಧ ವ್ಯಕ್ತಪಡಿಸಿದರೂ ಕೊಡಗು ಬಂದ್ ಅಭೂತಪೂರ್ವ ಯಶಸ್ಸನ್ನು ಕಂಡಿತು. ಬಂದ್‌ನ ಕಾರ್ಯಕ್ರಮದತ್ತ ಬೆಳೆಗಾರರನ್ನು ಮುಖಂಡರುಗಳಾದ ಪಾಂಡಂಡ ನರೇಶ್, ಎನ್, ಎಸ್.ಉದಯ ಶಂಕರ್, ಬಿ.ಟಿ.ದಿನೇಶ್, ರೋಜಿ ಚಿಣ್ಣಪ್ಪ, ಮಧು ಬೋಪಣ್ಣ, ಪಾಣತಲೆ ವಿಶ್ವನಾಥ್‌ರನ್ನೊಳಗೊಂಡ ಮುಖಂಡತ್ವ ದೃಢತೆಯಿಂದ ಮುನ್ನಡೆಸಿದ್ದೇ ಈ ಯಶಸ್ಸಿಗೆ ಕಾರಣ.

ಎಲ್ಲಾ ಬೆದರಿಕೆಗಳು, ಒತ್ತಡಗಳನ್ನೂ ಗಾಳಿಗೆ ತೂರಿ ಕೊಡಗಿನ ಜನತೆ ಬಂದ್ ಕರೆಗೆ ಓಗೊಟ್ಟದ್ದರಿಂದ ಬಂದ್ ಯಶಸ್ವಿಯಾಯಿತು.

ಈ ಬಂದನ್ನೊಳಗೊಂಡು ಎಲ್ಲಾ ಹೋರಾಟಗಳಿಗೆ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಡಿವೈಎಫ್‌ಐ., ಸಿಐಟಿಯು ಸಂಘಟನೆಗಳು ಸಕ್ರಿಯ ಬೆಂಬಲ ನೀಡಿವೆ.

ಯುಪಿಎ II ದರ್ಬಾರ್‌ನಲ್ಲಿ

ಕಬ್ಬು ಬೆಲೆ ನೀತಿ : ಮಿಲ್ ಮಾಲಿಕರ ಪರ ತಿದ್ದುಪಡಿಗಳಿಂದ ವಿವಾದ

ಕೇಂದ್ರ ಸರಕಾರದ ಕಬ್ಬು ಬೆಲೆ ನೀತಿ ಕುರಿತಂತೆ ಬ್ಬು ಬೆಳೆಗಾರರ ತೀವ್ರ ವಿರೋಧ ಹಾಗೂ ಗಾಲದ ಅಧಿವೇಶನದ ಆರಂಭದಲ್ಲೇ ಸಂಸತ್ತಿನಲ್ಲಿ ರೋಧ ಪಕ್ಷಗಳಿಂದ ಪ್ರತಿಭಟನೆಯಿಂದಾಗಿ ಸದ್ಯಕ್ಕೆ ಂದು ಪರಿಹಾರಕ್ಕೆ ಬರಲಾಗಿದೆ. ಕಬ್ಬು ಬೆಲೆ ರಿತಂತೆ ಕೇಂದ್ರ ಸರಕಾರ 'ನ್ಯಾಯ ಮತ್ತು ಲದಾಯಕ ಬೆಲೆ'(ಎಫ್‌ಆರ್‌ಪಿ) ಘೋಷಿಸುತ್ತದೆ. ದುವರೆಗಿನ ಕ್ರಮದಂತೆ ರಾಜ್ಯ ಸರಕಾರಗಳು ದಕ್ಕಿಂತ ಹೆಚ್ಚಿನ ಬೆಲೆ (ರಾಜ್ಯ ಸಲಹಾ ಬೆಲೆ-ಸ್‌ಎಪಿ) ಘೋಷಿಸಬಹುದು. ಆದರೆ ಕೇಂದ್ರ ರಕಾರ ತಂದ ತಿದ್ದುಪಡಿಯ ಪ್ರಕಾರ ಇದು ಕೇಂದ್ರ ರಕಾರದ ಬೆಲೆಗಿಂತ ಹೆಚ್ಚಿದ್ದರೆ ಆ ಹೆಚ್ಚುವರಿಯನ್ನು ಜ್ಯ ಸರಕಾರಗಳೇ ಭರಿಸಬೇಕು, ಹಿಂದಿನಂತೆ ಸಕ್ಕರೆ ಲ್ಲುಗಳು ತೆರಬೇಕಾಗಿಲ್ಲ. ಹೀಗಿದ್ದರೆ ರಾಜ್ಯ ರಕಾರಗಳು ಹೆಚ್ಚಿನ ಬೆಲೆಯನ್ನೇ ಘೋಷಿಸಲಾರವು, ಗ ಕಬ್ಬು ಬೆಳೆಗಾರರಿಗೆ ಭಾರೀ ನಷ್ಟವುಂಟಾಗುತ್ತದೆ. ದಾ: ಈ ವರ್ಷ ಕೇಂದ್ರ ಸರಕಾರ ಕ್ವಿಂಟಾಲಿಗೆ 0ರೂ. ನಿಗದಿ ಮಾಡಿತು. ಆದರೆ ಮಾರುಕಟ್ಟೆ ಲೆ 200ರೂ. ಗಿಂತಲೂ ಹೆಚ್ಚಿದೆ. ಆದರೆ ಕೇಂದ್ರ ರಕಾರ ತಂದ ತಿದ್ದುಪಡಿಯ ಪ್ರಕಾರ ಈ ತ್ಯಾಸವನ್ನು ಮಿಲ್ಲುಗಳು ತೆರುವಂತೆ ಮಾಡುವ ಧಿಕಾರ ರಾಜ್ಯ ಸರಕಾರಗಳಿಗೆ ಇರುವುದಿಲ್ಲ. ಭಾರೀ ತಿಭಟನೆಯ ನಂತರ ಈ ತಿದ್ದುಪಡಿಯನ್ನು ಕೈಬಿಡಲು ಂದ್ರ ಸರಕಾರ ಒಪ್ಪಿಕೊಂಡಿದೆ. ಆದರೆ ಈ ತಿದ್ದುಪಡಿ ಮು ತಂದದ್ದಾದರೂ ಏಕೆ ಎಂಬ ಪ್ರಶ್ನೆ ಎದ್ದಿದೆ.

ಇದಲ್ಲದೆ ಕೇಂದ್ರ ಸರಕಾರ ತರಬೇಕೆಂದಿದ್ದ ತಿದ್ದುಪಡಿಯಲ್ಲಿ ಮಿಲ್ಲುಗಳು ತಮ್ಮ ಲಾಭದ ಅರ್ಧದಷ್ಟನ್ನು ರೈತರೊಂದಿಗೆ ಹಂಚಿಕೊಳ್ಳಬೇಕು ಎಂದು ಇದುವರೆಗೆ ಇದ್ದ ಆದೇಶವನ್ನು ಕೂಡಾ ಕೈಬಿಟ್ಟಿದ್ದು ಇದು ಕೂಡಾ ಸರಿಯಲ್ಲ ಎಂಬ ದಕ್ಷಿಣದ ರಾಜ್ಯಗಳ ರೈತರ ಬೇಡಿಕೆಯನ್ನು ಈಡೇರಿಸಲು ಕೇಂದ್ರ ಸರಕಾರ ಈಗಲೂ ಹಿಂದೇಟು ಹಾಕುತ್ತಿದೆ.

★

ಇಸ್ರೇಲ್ ಯುದ್ಧಾಪರಾಧಗಳಿಂದ ಬಚಾವಾಗಲು ಭಾರತದ ಬೆಂಬಲ!


ಇತ್ತೀಚೆಗೆ ಪ್ಯಾಲೆಸ್ತೀನಿನ ಗಾಝಾ ಪಟ್ಟಿಯಲ್ಲಿ ನಡೆದ ಮೂರು ವಾರಗಳ ಯುದ್ಧದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಗೋಲ್ಡ್‌ಸ್ಟೋನ್ ಒಂದು ವಿವರವಾದ ವರದಿಯನ್ನು ಹಾಗೂ ಶಿಫಾರಸುಗಳನ್ನು ವಿಶ್ವ ಸಂಸ್ಥೆಗೆ ಸಲ್ಲಿಸಿದ್ದರು. ಇದು ಭದ್ರತಾ ಸಮಿತಿಯಲ್ಲಿ ಚರ್ಚೆಯ ನಂತರ ವಿಶ್ವಸಂಸ್ಥೆಯ ಸಾರ್ವತ್ರಿಕ ಸಭೆ(ಜನರಲ್ ಅಸೆಂಬ್ಲಿ)ಯ ಒಂದು ವಿಶೇಷ ಅಧಿವೇಶನದಲ್ಲಿ ಚರ್ಚೆಗೆ ಬಂದಿದ್ದು ಈ ಚರ್ಚೆಯಲ್ಲಿ ಭಾಗವಹಿಸಿದ ಭಾರತದ ನಿಯೋಗದ ಪರವಾಗಿ ಮಾತಾಡಿದ ಬಿ.ಕೆ.ಹರಿಪ್ರಸಾದ್ "ನಮಗೆ ಈ ವರದಿಯ ವಿವಿಧ ಶಿಫಾರಸುಗಳು ಹಾಗೂ ವರದಿಯಲ್ಲಿ ಅನುಸರಿಸಿದ ಕೆಲವು ವಿಧಾನಗಳ ಬಗ್ಗೆ ಭಿನ್ನಾಭಿಪ್ರಾಯವಿದೆ" ಎಂದು ಹೇಳಿರುವುದಾಗಿ ವರದಿಯಾಗಿದೆ. ಇದು ಹಲವರಲ್ಲಿ ಅಚ್ಚರಿ ಮೂಡಿಸಿದೆ.

ವಾಸ್ತವವಾಗಿ ಭಾರತದ ನಿಯೋಗದ ಭಿನ್ನಾಭಿಪ್ರಾಯಕ್ಕೆ ಆಧಾರವೇನಿಲ್ಲ. ನ್ಯಾಯಮೂರ್ತಿ ಗೋಲ್ಡ್‌ಸ್ಟೋನ್ ದಕ್ಷಿಣ ಆಫ್ರಿಕಾದ ಯೆಹೂದಿ ಸಮುದಾಯದಿಂದ ಬಂದವರಾಗಿದ್ದು ಅಂತರ್ರಾಷ್ಟ್ರೀಯ ಖ್ಯಾತಿಯ ನ್ಯಾಯವೇತ್ತರು. ಅಲ್ಲದೆ ಅವರು ಇಸ್ರೇಲ್ ಮತ್ತು ಹಮಸ್ ಎರಡೂ ಕಡೆಯಿಂದ ಮಾನವ ಹಕ್ಕುಗಳ ಉಲ್ಲಂಘನೆಯ ವಿವರಗಳನ್ನು ತಮ್ಮ ವರದಿಯಲ್ಲಿ ಕೊಟ್ಟಿದ್ದಾರೆ. ಅವರ ವಿಚಾರಣೆಯ ವೇಳೆ ಹಮಸ್ ಪೂರ್ಣ ಸಹಕಾರ ಕೊಟ್ಟಿತ್ತು. ಆದರೆ ಇಸ್ರೇಲ್ ಸರಕಾರ ಅವರೊಂದಿಗೆ ಸಹಕರಿಸಲು ನಿರಾಕರಿಸಿತ್ತು. ಅಮೆರಿಕಾ, ಇಸ್ರೇಲ್ ಹಾಗೂ ಅದರ ಕೆಲವು ಮಿತ್ರರು ಈ ವರದಿಯನ್ನು ಹೇಗಾದರೂ ಮಾಡಿ ಹೂತು ಬಿಡುವಂತೆ ಪ್ರಯತ್ನಿಸುತ್ತಿರುವ ಹಿನ್ನೆಲೆಯಲ್ಲಿ ಭಾರತದ ಈ ನಿಲುವು ನಿಜಕ್ಕೂ ನಾಚಿಕೆಗೇಡಿನದ್ದು ಎಂದು ಖಂಡನೆಗೊಳಗಾಗಿದೆ.

★

ಬಾಬ್ರಿ ಮಸೀದಿ ಧ್ವಂಸ: ಲಿಬರ್ಹಾನ್ ಶಿಫಾರಸುಗಳ ಮೇಲಿನ ಕ್ರಮಗಳು ಎಲ್ಲಿವೆ?

ಬಾಬ್ರಿ ಮಸೀದಿ ಧ್ವಂಸದ ವಿಚಾರಣೆಗೆಂದು ನೇಮಿಸಿದ ನ್ಯಾಯಮೂರ್ತಿ ಲಿಬರ್ಹಾನ್ ಆಯೋಗ 17 ವರ್ಷಗಳ ನಂತರ ತನ್ನ ವರದಿ ಸಲ್ಲಿಸಿದೆ. ಅದರ ಜತೆಗೆ ಸರಕಾರ ಎಟಿಆರ್ ಅಂದರೆ ಆಯೋಗದ ಶಿಫಾರಸುಗಳ ಮೇಲೆ ಕೈಗೊಂಡಿರುವ ಕ್ರಮಗಳ ವರದಿಯನ್ನೂ ಸಂಸತ್ತಿನಲ್ಲಿ "ಕೈಗೊಂಡಿರುವ" ಕ್ರಮಗಳ ವರದಿಯಲ್ಲ, "ಕೈಗೊಳ್ಳಬೇಕೆಂದಿರುವ" ಕ್ರಮಗಳ ವರದಿಯಷ್ಟೇ ಆಗಿದೆ. ಮುಂಬೈ ಹತ್ಯಾಕಾಂಡ



ಕುರಿತಂತೆ ಬಂದ ಶ್ರೀಕೃಷ್ಣ ಆಯೋಗದ ವರದಿಯ ಗತಿಯೇ(ನಿಷ್ಕ್ರಿಯತೆ)ಯೇ ಈ ವರದಿಗೂ ಕಾದಿದೆಯೇ ಎಂಬ ಸಂದೇಹ ಈಗಾಗಲೇ ಹಲವರಲ್ಲಿ ಮೂಡಿದೆ. ಕೋಮುವಾದವನ್ನು ಎದುರಿಸುವ ರಾಜಕೀಯ ಇಚ್ಛಾಶಕ್ತಿ ಕಾಂಗ್ರೆಸಿನಲ್ಲಿ ಈಗಲೂ ಇದ್ದಂತಿಲ್ಲ ಎಂದರೆ ಅಚ್ಚರಿ ಪಡಬೇಕಿಲ್ಲ.

★

ಕೋಡಾ ಹಗರಣವೂ ಹವಾಲಾ, ಬೋಫೋರ್ಸ್ ಹಾದಿಯಲ್ಲಿ?

ಇತ್ತೀಚೆಗೆ ಬಹಳ ಸುದ್ದಿ ಮಾಡಿರುವ ಝಾರ್ಖಂಡದ ಮಾಜಿ ಮುಖ್ಯ ಮಂತ್ರಿ ಮಧು ಕೋಡಾರವರ 2000ಕೋಟಿ ರೂ.ಗಳಷ್ಟು ಕಪ್ಪು ಹಣವನ್ನು ಬಿಳಿ ಮಾಡುವ ಹಗರಣದ ತನಿಖೆ ಮಾಡುತ್ತಿರುವ ಆದಾಯ ತೆರಿಗೆ ಇಲಾಖೆಗೆ ಮತ್ತು ಜಾರಿ ನಿರ್ದೇಶನಾಲಯಕ್ಕೆ ಮಧು ಕೋಡಾರ ತನಿಖೆ ಮಾಡಲು ಬಹಳ ಕಷ್ಟವಾಗುತ್ತಿದೆಯಂತೆ. ಅಂದರೆ ಈ ಹಗರಣ ಕೂಡಾ ಜೈನ್ ಹವಾಲಾ ಹಗರಣ ಮತ್ತು ಬೊಫೋರ್ಸ್ ಹಗರಣದಂತೆ ಮುಚ್ಚಿಹೋಗಬಹುದೇ ಎಂದು ಪರಿಣತರು ಅಭಿಪ್ರಾಯ ಪಡುವಂತಾಗಿದೆ. ಮುಖ್ಯವಾಗಿ ಕಾರ್ಪೊರೇಟ್ ವಲಯ ಇದರಲ್ಲಿ ಸಿಲುಕಿದ್ದರೂ ತನಿಖೆ ಈ ಬಗ್ಗೆ ಮೌನವಾಗಿರುವುದು ಈ ಸಂದೇಹಕ್ಕೆ ಎಡೆಮಾಡಿಕೊಟ್ಟಿದೆ.



ಬಿಜೆಪಿ ದರ್ಬಾರ್

ವಿದ್ಯುತ್ ಆಘಾತ

ನರ ಮೇಲೆ ರಾಜ್ಯ ಸರ್ಕಾರ ಮತ್ತೊಮ್ಮೆ ರಗಿದೆ. ನೂರು ಯೂನಿಟ್ ಮೀರುವ ಮಾಣದ ಗೃಹಬಳಕೆಯ ವಿದ್ಯುತ್‌ದಾರರಿಗೆ ದ್ಯುತ್ ಬೆಲೆ ಏರಿಕೆಯ ಬರೆ ಎಳೆಯಲಾಗಿದೆ. ಗೃಹ ಬಳಕೆದಾರರಿಗೆ ತಲಾ ಯೂನಿಟ್‌ಗೆ ರಾಸರಿ 35 ಪೈಸೆಯಂತೆ ಏರಿಸಲಾಗಿದೆ. ಈ ದ್ಯುತ್ ದರ ಏರಿಕೆ ಒಂದೊಂದು ವಿಭಾಗದಲ್ಲಿ ಒಂದೊಂದು ಪ್ರಮಾಣದಲ್ಲಿ ಇರಲಿದೆ. ಸರಾಸರಿ ರಿಕೆ 35 ಪೈಸೆ. ಬೆಸ್ಕಾಂ ವ್ಯಾಪ್ತಿಯಲ್ಲಿ ಏರಿಕೆ ಪೈಸೆ. ಮೆಸ್ಕಾಂನಲ್ಲಿ 24 ಪೈಸೆ. ಚೆಸ್ಕಾಂ ವ್ಯಾಪ್ತಿಯಲ್ಲಿ 25 ಪೈಸೆ. ಹೆಸ್ಕಾಂ ವ್ಯಾಪ್ತಿಯಲ್ಲಿ 25 ಪೈಸೆ. ಗೆಸ್ಕಾಂ ವ್ಯಾಪ್ತಿಯಲ್ಲಿ 25 ಪೈಸೆಯಂತೆ.

ವಾಣಿಜ್ಯ ವಲಯ ಹಾಗೂ ಕೈಗಾರಿಕೆಗಳಿಗೆ ಪೂರೈಸಲಾಗುವ ವಿದ್ಯುತ್ ದರ ಮತ್ತಷ್ಟು ತೀವ್ರ ಪ್ರಮಾಣದಲ್ಲಿ ಏರಿಕೆಯಾಗಿದೆ. ಈ ವಿಭಾಗದಲ್ಲಿ ಏರಿಕೆ ಪ್ರತಿ ಯೂನಿಟ್‌ಗೆ 75 ಪೈಸೆಯಿಂದ 80 ಪೈಸೆಯುವರೆಗೆ ಇದೆ. ಕೈಗಾರಿಕಾ ಬಂಡವಾಳಗಾರರು ಹಾಗೂ ಬೃಹತ್ ವ್ಯಾಪಾರಸ್ಥರು ಈ ದರ ಏರಿಕೆಯ ಭಾರ ಹೊರುತ್ತಾರೆ ಎಂದೇನು ಭಾವಿಸಬೇಕಾಗಿಲ್ಲ. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಈ ಏರಿಕೆಯ ಭಾರವೂ ಜನಸಾಮಾನ್ಯರ ಮೇಲೆ ಹರಿದು ಬರಲಿದೆ.

ಈ ನಡುವೆ ರಾಜ್ಯದಲ್ಲಿ ಜನರಿಗೆ ವಿದ್ಯುತ್ತನ್ನೇ ಕೊಡುತ್ತಿಲ್ಲ. ಇನ್ನು ವಿದ್ಯುತ್ ದರ ಹೇಗೆ ಏರಿಸುತ್ತೀರಿ? ಅಂತ ಗೇಲಿ ಮಾತು ಕೇಳಿಬರುತ್ತಿದೆ. ಕುರ್ಚಿಯ ಕೈಗಳನ್ನು ಭದ್ರವಾಗಿ ಹಿಡಿದು ಕುರ್ಚಿಯ ಮೇಲೆ ತುದಿಗಾಲಲ್ಲಿ ಕುಳಿತಿರುವ ಮುಖ್ಯಮಂತ್ರಿಗಳಿಗೆ ಇದೆಲ್ಲಾ ಕಳಿಸುತ್ತದೆಯೇ?

ಗಣಿ ಲೂಟಿ ಅಕ್ರಮವೇ ಅಲ್ಲ

"ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ನಡೆಸುದರ ಬಗ್ಗೆ ನನ್ನ ಗಮನಕ್ಕೆ ಬಂದಿಲ್ಲ. ಹೀಗಾಗಿ ಯಾವುದೇ ತನಿಖೆಯ ಅವಶ್ಯಕತೆ ಇಲ್ಲ." ಇದನ್ನು ಹೇಳಿದವರು ಯಾರೆಂದು ಕುತೂಹಲವೇ? ಕರ್ನಾಟಕ ರಾಜ್ಯದ ಘನ ಮುಖ್ಯಮಂತ್ರಿ ಡಾ.ಬಿ.ಎಸ್.ಯಡಿಯೂರಪ್ಪನವರು.

ಆಶ್ಚರ್ಯವೇನು? ಯಡಿಯೂರಪ್ಪನವರು ಈಗ ಹೀಗೆ ಹೇಳಲೇಬೇಕು. ಓಬಳಾಪುರಂ ಮೈನಿಂಗ್ ಕಂಪನಿಯ ಅಕ್ರಮ ಗಣಿಗಾರಿಕೆ ಕುರಿತು ನಾಡಿಗೆ ಇತ್ತೀಚೆಗೆ ಇಡೀ ದೇಶವ್ಯಾಪಿಯಾಗಿ ಜನಕ್ಕೆ ಅರಿವಿಗೆ ಬರುತ್ತಿದೆ. ಸುಪ್ರಿಂ ಕೋರ್ಟ್‌ನ ಉನ್ನತಾಧಿಕಾರ ಸಮಿತಿ ಅಕ್ರಮಗಳನ್ನು ಗುರುತಿಸಿ ಗಣಿಗಾರಿಕೆ ರದ್ದು ಮಾಡಲು ಸೂಚಿಸಿದೆ. ಆಂಧ್ರ ಸರ್ಕಾರ ಈ ಕುರಿತು ಸಿಬಿಐ ತನಿಖೆಗೆ ಕೋರಿದೆ. ಇಂತಹ ಹೊತ್ತಲ್ಲಿ ರಾಜ್ಯದ ಮುಖ್ಯಮಂತ್ರಿಯವರಿಗೆ ನಾನು ಹೀಗೆ ಹೇಳಿದರೆ ಜನ ಏನೆಂದುಕೊಂಡಾರು ಎಂಬ ಭಯವೂ ಇಲ್ಲದೇ ಹೋಯಿತು. ಕುರ್ಚಿ ಉಳಿಸಿಕೊಳ್ಳುವ ಕಸರತ್ತಿನಲ್ಲಿ ಈ ಮಟ್ಟಕ್ಕೆ ಇಳಿಯುವುದಾ?

ಹೋಗಲಿ ಯಡಿಯೂರಪ್ಪನವರೇ ಕಳೆದ ವಾರ ಸ್ವತ: ತಾವು ಅರಣ್ಯ ಇಲಾಖೆಯ ಅಧಿಕಾರಿಗಳ ಸಮ್ಮುಖದಲ್ಲಿ 'ರಾಜ್ಯದಲ್ಲಿ ಯಾವ ರೀತಿ ನೈಸರ್ಗಿಕ ಸಂಪನ್ಮೂಲ ಗಣಿ ಅದಿರು ಲೂಟಿಯಾಗುತ್ತಿದೆ ಎಂಬುದು ನಿಮಗೇ ಗೊತ್ತಿದೆ. ಈ ಬಗ್ಗೆ ನೀವೇ ಸೂಕ್ತ ಕ್ರಮ ವಹಿಸಿ. ನಾನೇನು ಹೆಚ್ಚಿಗೆ ಹೇಳುವ ಸ್ಥಿತಿಯಲ್ಲಿಲ್ಲ' ಅಂದಿದ್ದರಲ್ಲ ಅದರ ಅರ್ಥವೇನು?

ಛೇ...ಛೇ... ನಿಮ್ಮ ಅವಸ್ಥೇ ನೋಡಿ ರಾಜ್ಯ ಜನಕ್ಕೆ ನಗಬೇಕೋ, ಅಳಬೇಕೋ ಅರ್ಥವಾಗದಂತಿದೆ.

'ಇನ್ನೊಬ್ಬನ ಬದುಕಿಗೆ ಸಂಚಕಾರವನ್ನು ತಂದೊಡ್ಡುವುದು ಕೂಡಾ ಭಯೋತ್ಪಾದನೆಯೇ'

ಜಯಮೃತ್ಯುಂಜಯ ಸ್ವಾಮೀಜಿ



ಇಡೀ ಜಗತ್ತಿನಲ್ಲಿ ಭಯೋತ್ಪಾದನಾ ಕೃತ್ಯಗಳು ನಿರಾತಂಕವಾಗಿ ನಡೆಯುತ್ತಿದ್ದು ಜನತೆ ಭಯಭೀತಿಯಿಂದ ಜೀವನ ಸಾಗಿಸುವಂತಾಗಿದೆ. ಇಂತಹ ಭಯೋತ್ಪಾದನಾ ಕೃತ್ಯಗಳಿಗೆ ಮುಸ್ಲಿಂ ಸಮುದಾಯುವನ್ನು ಗುರಿಯನ್ನಾಗಿಸಿ ವ್ಯಾಪಕ ಅಪಪ್ರಚಾರವನ್ನು ನಡೆಸಲಾಗುತ್ತಿದೆ. ಭಯೋತ್ಪಾದನೆಯನ್ನು ಕೇವಲ ಒಂದು ಧರ್ಮಕ್ಕೆ ಆರೋಪಿಸುವುದು ಸರಿಯಲ್ಲ. ಜಾತಿ, ಧರ್ಮದ ಹೆಸರಿನಲ್ಲಿ ಒಂದು ಧರ್ಮದ ಜನತೆ ಇನ್ನೊಂದು ಧರ್ಮದ ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ದಾಳಿ ನಡೆಸುವ ಸಂಚಕಾರವನ್ನು ತಂದೊಡ್ಡುವುದು ಕೂಡಾ ಭಯೋತ್ಪಾದನಾ ಕೃತ್ಯವಾಗಿದೆ. ಅಂತಹ ಭಯೋತ್ಪಾದನಾ ಮನಸ್ಸುಗಳು ನಮ್ಮ ದೇಶದಲ್ಲಿ ವ್ಯಾಪಕವಾಗಿ ಪಸರಿಸಿದ್ದು, ಅವುಗಳ ನಿಗ್ರಹಕ್ಕೆ ಮಾನವೀಯ ಮನಸ್ಸುಗಳು ಒಂದಾಗಿ ಹೋರಾಡಬೇಕಾಗಿದೆ ಎಂದು ಲಿಂಗಾಯತ ಪಂಚಮಸಾಲಿ ಪೀಠದ ಶ್ರೀ ಬಸವಜಯಮೃತ್ಯುಂಜಯ ಸ್ವಾಮೀಜಿಯವರು ಕರೆ ನೀಡಿದರು. ಅವರು 15.11.2009 ರಂದು ದಕ್ಷಿಣ ಕನ್ನಡ ಜಿಲ್ಲೆಯ ಡಿವೈಎಫ್ಐ ಪಂಜಿಮೊಗರು ಘಟಕದ ದಶಮಾನೋತ್ಸವ ಕಾರ್ಯಕ್ರಮದ ಅಂಗವಾಗಿ ಜರುಗಿದ 'ಸೌಹಾರ್ದ ಸಮ್ಮಿಲನ' ಕಾರ್ಯಕ್ರಮವನ್ನು ಉದ್ಘಾಟಿಸುತ್ತಾ ಈ ಮಾತುಗಳನ್ನಾಡಿದರು.

ಮುಂದುವರಿಸುತ್ತಾ ಕಟ್ಟುವ ಹಾಗೂ ಕೆಡಹುವ ಕೆಲಸಗಳು ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿದ್ದು ಅದರಲ್ಲಿ ಕಟ್ಟುವ ಕೆಲಸ ಶಾಶ್ವತವಾಗಿದ್ದು, ಕೆಡಹುವುದು ತಾತ್ಕಾಲಿಕವಾಗಿದೆ. ದೇಶ ಕಟ್ಟಬೇಕಾದ ಯುವಜನತೆಯ ಮನಸ್ಸನ್ನು ವಿಷಮಯಗೊಳಿಸಿ ಅವರನ್ನು ದಾರಿತಪ್ಪಿಸುವಂತಹ ಸಂಘಟನೆಗಳು ನಮ್ಮ ಸಮಾಜದಲ್ಲಿ ಅನೇಕ ರೂಪದಲ್ಲಿದ್ದರೂ ನ್ಯಾಯ, ನೀತಿ ಪ್ರಾಮಾಣಿಕತೆಯಲ್ಲಿ ಮುನ್ನಡೆದು ದೇಶಪ್ರೇಮವನ್ನು ಯುವಜನತೆಯಲ್ಲಿ ಉದ್ದೀಪನಗೊಳಿಸುವ ಸಂಘಟನೆ ಡಿವೈಎಫ್ಐ ಆಗಿದೆ.

ಸಮಾಜಕ್ಕೆ ಬೆಂಕಿ ಹಚ್ಚುವ ಕೆಲಸವ
ಕೋಮುವಾದಿ ಶಕ್ತಿಗಳು ಮಾಡಿದರೆ ಅದ
ಪ್ರತಿಯಾಗಿ ಶಾಂತಿ ಸೌಹಾರ್ದತೆಯ ಮೂ
ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು ಡಿವೈಎಫ
ಕಟಿಬದ್ಧವಾಗಿದೆ. ದೇಶದಲ್ಲಿ ಆಳುವ ವರ್ಗಕ್ಕೆ ಸ್ವಾತ
ಬಂದಿದೆಯೇ ಹೊರತು ದುಡಿಯುವ ವರ
ಬಂದಿಲ್ಲ. ದುಡಿಯುವ ವರ್ಗ ಒಂದಾಗಿ ನಿರಂ
ಸ್ವಾತಂತ್ರ್ಯ, ಸೌಹಾರ್ದತೆಗಾಗಿ ಸಂಗ್ರಾ
ನಡೆಸಬೇಕಾಗಿದೆ ಎಂದು ಹೇಳಿದರು.


ಮುಖ್ಯ ಅತಿಥಿಗಳಾದ ಡಿವೈಎಫ್ಐ ರಾಜ್ಯಾ
ಎನ್.ಎಲ್.ಭರತ್‌ರಾಜ್‌ರವರು ಜಾತ್ಯಾತೀತತೆ
ಅಡಿಪಾಯದ ಮೇಲೆ ನಿಂತಿರುವ ಭಾರತ ದೇಶದ
ಸರ್ವಜನಾಂಗದ ಜನತೆ ಸೌಹಾರ್ದತೆಯಿಂ
ಬದುಕುವುದು ಆದ್ಯ ಕರ್ತವ್ಯವಾಗಿದೆಯೆಂ
ಹೇಳಿದರು. ವೇದಿಕೆಯಲ್ಲಿ ಕೂಳೂರು ಚರ್ಚ್‌ನ ರೆ.
ಜೆರಾಲ್ಡ್ ಪಿಂಟೋ, ಕೂಳೂರು ಮಸೀದಿ
ಅಬ್ದುಲ್ ಜಬ್ಬಾರ್ ಅಶ್ರಫಿ, ವಜ್ರಕುಮಾ
ಕರ್ಣಂತ್ತಾಯ ಬಳ್ಳಾಲರು, ವಾಮನ ಶೆ
ಕೆ.ಅಬ್ಬಾಸ್, ರೊನಾಲ್ಡ್ ಡಿಸೋಜ, ವ
ಪೂಜಾರಿ, ದಯಾನಂದ ಶೆಟ್ಟಿ ಉಪಸ್ಥಿತರಿದ್ದ
ಸಾರ್ವಜನಿಕರಿಗಾಗಿ ಏರ್ಪಡಿಸಿದ ಕ್ರೀಡಾಕೂ
ವಿಜೇತರಿಗೆ ಬಹುಮಾನ ವಿತರಿಸಲಾಯಿತು. ವಿ
ಕ್ಷೇತ್ರದಲ್ಲಿ ಸಾಧನೆಗೈದ ಪ್ರತಿಭಾನ್ವಿತರಿಗೆ ಸನ್ಮಾನ
ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಘಟ
ಅಧ್ಯಕ್ಷರಾದ ಅಹಮ್ಮದ್ ಬಶೀರ್ ವಹಿಸಿದ್ದ
ಆರಂಭದಲ್ಲಿ ಖಲೀಲ್‌ರವರು ಸ್ವಾಗತಿಸಿ, ಅನಿ
ಡಿಸೋಜ ವಂದಿಸಿದರು.

ಕೊಡದೆ ಬಿಡೆವು ರೇಷನ್...

ಪುಟ 9 ರಿಂದ

ಹಾಕಿಕೊಂಡು ಆರೆಸ್ಸೆಸ್ ಸಮಾವೇಶದಲ್ಲಿ ಡ್ರಿಲ್ ಮಾಡಲು ಹೋಗಿದ್ದಾರೆ. ವಿದ್ಯುತ್ ಇಲ್ಲ. ವಿದ್ಯುತ್ ಬೆಲೆ ಹೆಚ್ಚಳ ಮಾಡಿದ್ದಾರೆ. ಆಹಾರದ ಪ್ರಶ್ನೆಯ ಮೇಲೆ ಮುಂದೆ ಹೋರಾಟ ತೀವ್ರಗೊಳ್ಳಲಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರೂ, ಮಾಜಿ ಶಾಸಕರೂ ಆದ ಜಿ.ವಿ.ಶ್ರೀರಾಮರೆಡ್ಡಿ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

60 ವರ್ಷಗಳ ನಂತರವೂ....



ದೇಶ ಸ್ವಾತಂತ್ರ್ಯ ಗಳಿಸಿದ 60 ವರ್ಷಗಳ ನಂತರವೂ ಜನತೆ ಆಹಾರ ಕೊಡಿ, ಅಕ್ಕಿ ಕೊಡಿ, ಗೋಧಿ ಕೊಡಿ ಎಂದು ಕೇಳಬೇಕಾದ ಪರಿಸ್ಥಿತಿ ಇದೆ. ಈ ಸರ್ಕಾರಗಳಿಗೆ ನಾಚಿಕೆಯಾಗಬೇಕು. ಕರ್ನಾಟಕ ರಾಜ್ಯ ಗಣಿಗಳ್ಳರ ಹಿತ್ತಲಾಗಿದೆ. ಮೊಬೈಲ್ ಫೋನು, ಕಾರು ಮುಂತಾದವುಗಳ ಬೆಲೆ ಇಳಿಯುತ್ತಿದೆ. ಆಹಾರ ಧಾನ್ಯದ ಬೆಲೆಗಳು ನಿರಂತರ ಏರುತ್ತಿದೆ.

ಜನರ ಆಹಾರ ಸಮಸ್ಯೆ ಬಗೆಹರಿಸದಿದ್ದರೆ ಜನರೇ ಗೋಡೌನುಗಳಿಗೆ ನುಗ್ಗಿ ಆಹಾರ ಹಂಚಿಕೊಳ್ಳುವ ಪರಿಸ್ಥಿತಿ ಬರುತ್ತದೆ..... ಹೀಗೆಂದು ಎಚ್ಚರಿಕೆ ನೀಡಿದ್ದು ಡಾ. ಸಿದ್ದನಗೌಡ ಪಾಟೀಲರು, ಸಿಪಿಐ ಕರ್ನಾಟಕ ರಾಜ್ಯ ಮಂಡಳಿಯ ಕಾರ್ಯದರ್ಶಿಗಳು.

ಫಾರ್ವರ್ಡ್ ಬ್ಲಾಕ್ ಪಕ್ಷದ ರಾಜ್ಯ ಮುಖಂಡರಾದ ಜಿ.ಆರ್.ಶಿವಶಂಕರ್ ಮಾತನಾಡಿ ಒಬಾಮ ಬಳಿ ಭಿಕ್ಷೆಗೆ ಮನಮೋಹನ್‌ಸಿಂಗ್ ತೆರಳಿದ್ದರೆ, ಯಡಿಯೂರಪ್ಪ ರೆಡ್ಡಿಗಳ ಬಳಿ ಭಿಕ್ಷೆಗೆ ನಿಂತಿದ್ದಾರೆ. ಇವರಿಂದ ಜನರ ಹಿತ ಕಾಯಲು ಆಗುವುದಿಲ್ಲ. ಹೋರಾಟ ತೀವ್ರಗೊಳಿಸೋಣವೆಂದರು.


ಕರ್ನಾಟಕ ರಾಜ್ಯದಲ್ಲಿ ಅಂಗನವಾಡಿ ನೌಕರರಿಗೆ ನೀಡಲಾಗಿದ್ದ ಬಿ.ಪಿ.ಎಲ್ ರೇಷನ್ ಕಾರ್ಡುಗಳನ್ನು ಕಿತ್ತುಕೊಂಡು ರಾಜ್ಯ ಸರ್ಕಾರ ನೌಕರರ ವರಮಾನ 11 ಸಾವಿರ ಮೀರುತ್ತದೆ ಎಂದು ಕಾರಣ ಹೇಳುತ್ತಿದೆ. ಆಹಾರದ ಭದ್ರತೆ ಹೆಸರಿನಲ್ಲಿ ಜನರನ್ನು ಆತ್ಮಹತ್ಯೆಗೆ ತಳ್ಳುವಂತಹ ನೀತಿಗೆ ಕೇಂದ್ರ, ರಾಜ್ಯ ಸರ್ಕಾರಗಳು ಮುಂದಾಗುತ್ತಿವೆ. ಆಹಾರಭದ್ರತೆಯ ಶಾಸನದ ಮೂಲಕ ಈಗ ಕೇಂದ್ರ ಸರ್ಕಾರ ಆಹಾರಕ್ಕೆ ನೀಡುತ್ತಿರುವ ಹಣದಲ್ಲೇ 4 ಸಾವಿರ ಕೋಟಿ ರೂಪಾಯಿ ಕಡಿತವಾಗಲಿದೆ.ಊರ ಜನರ ಸೇವೆಗೆ ಗರ್ಭಿಣಿ, ಮಹಿಳೆಯರು, ಮಕ್ಕಳ ಸೇವೆಗೆ ಅಂಗನವಾಡಿ, ಬಿಸಿಯೂಟ ನೌಕರರು ಬೇಕು. ಆದರೆ ಅವರ ಸಮಸ್ಯೆಗಳ ಬಗೆಗೆ ಸರ್ಕಾರಕ್ಕೆ ಕಾಳಜಿಯಿಲ್ಲ ಎಂದು ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯೆ ಎಸ್.ವರಲಕ್ಷ್ಮಿ ಟೀಕಿಸಿದರು.

ಈ ನಾಡ ಕಟ್ಟಿದವರು.....
ನಾವೆಲ್ಲಿ ಹೋಗಬೇಕು.

ಚೂರು ಗಂಜಿಗಾಗಿ, ಸೇರು ಬೆವರು ಸುರಿಸುತ ಊರೂರು ತಿರುಗುವರ್‍ಯಾರಯ್ಯ. ಈ ನಾಡ ಕಟ್ಟಿದವರು ನಾವೆಲ್ಲಿ ಹೋಗಬೇಕು. ಕೂಲಿಯವರು ನಾವು ಕೇಳಯ್ಯ ಎಂದು ಹೋರಾಟದ ಹಾಡಿನ ಸಾಲು ಹೇಳಿದ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ನೀಲಾ.... ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು ಎಂಬುದನ್ನು ನೆನಪಿಸಿ ವಂದನೆ ಸಲ್ಲಿಸಿದರು.

ಸಹಕಾರ ಸಚಿವರ ಆಗಮನ ಮಾತುಕತೆ ನಿಗದಿ

ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ ಮನವಿ ಸ್ವೀಕರಿಸಲು ರಾಜ್ಯದ ಸಹಕಾರ ಸಚಿವ ಲಕ್ಷ್ಮಣ ಸವದಿ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದರು. ಜನರ ಸಮಸ್ಯೆಗಳ ಕುರಿತು ಚರ್ಚಿಸಲು ಡಿಸೆಂಬರ್ 28 ರಂದು



ಮುಖ್ಯಮಂತ್ರಿಗಳೊಂದಿಗೆ ಮಾತುಕತೆಗೆ ಸಮ
ನಿಗದಿಪಡಿಸಿರುವುದಾಗಿ ಸಚಿವರು ಘೋ
ಎಡಪಕ್ಷಗಳ ಮುಖಂಡರಿಂದ ಮನವಿ ಸ್ವೀಕರಿಸಿದ
ಈ ಮೊದಲು ಸಿಪಿಐ(ಎಂ) ರಾಜ್ಯ ಕಾರ್ಯದ
ಮಂಡಳಿ ಸದಸ್ಯರಾದ ಕಾಂ.ಪ್ರಸನ್ನಕುಮಾ
ಮನವಿಪತ್ರ ಬೇಡಿಕೆ ಪಟ್ಟಿಯನ್ನು ಓದಿದರು. ಇದ
ಪ್ರಸನ್ನರವರು ಸುಧಾಕರ ರೆಡ್ಡಿಯವರ ಭಾಷಣವ
ಸಿಪಿಐ(ಎಂ) ರಾಜ್ಯಸಮಿತಿ ಸದಸ್ಯರಾದ ಕೆ.ಪ್ರಕಾ
ಪ್ರಕಾಶ್ ಕಾರಟ್‌ರ ಭಾಷಣವನ್ನು ಕನ್ನಡ
ಅನುವಾದ ಮಾಡಿದರು.

ಆರಂಭದಲ್ಲಿ ಸಿಪಿಐ ಮುಖಂಡರಾದ ಶಿ
ಸ್ವಾಗತಿಸಿದರು. ಸಿಪಿಐ(ಂ) ಕಲಾತಂಡ ಹೋರಾ
ಹಾಡುಗಳನ್ನು ಹಾಡಿದರು.

...ಡುಪಿ ಜಿಲ್ಲಾ ಸಿಐಟಿಯು ಸಮ್ಮೇಳನ

ಕಾರ್ಮಿಕ ವಿರೋಧಿ ಸವಾಲು ಎದುರಿಸಲು ಕರೆ

...ಘಟಿತ ಕಾರ್ಮಿಕರ ಹಿತ ರಕ್ಷಿಸುವಲ್ಲಿ ಮತ್ತು ...ಬದ್ಧ ಸವಲತ್ತು ಒದಗಿಸುವಲ್ಲಿ ಕೇಂದ್ರ ಮತ್ತು ...ರಕಾರಗಳು ವಿಫಲವಾಗಿವೆ. ಕಾರ್ಮಿಕರ ...ಯ ಬಗ್ಗೆ ನಿರ್ಲಕ್ಷ್ಯ ತಾಳಿವೆ. ಸರಕಾರಗಳು ...ಸುತ್ತಿರುವ ಜನವಿರೋಧಿ, ಕಾರ್ಮಿಕ ... ಸವಾಲುಗಳನ್ನು ಎದುರಿಸಲು ಕಾರ್ಮಿಕರು ...ಗಬೇಕಾಗಿದೆ ಎಂದು ಸಿಐಟಿಯು ರಾಜ್ಯ ...ಕಾರ್ಯದರ್ಶಿ ಕಾಂ.ವಿ.ಜೆ.ಕೆ. ನಾಯರ್



...ದರು.

...ಯು ನ.16 ರಂದು ಉಡುಪಿ ಪದವಿಪೂರ್ವ ... ಮೈದಾನದಲ್ಲಿ ನಡೆದ ಸಿಐಟಿಯು 3ನೇ ...ಸಮ್ಮೇಳನದ ಬಹಿರಂಗ ಅಧಿವೇಶನದಲ್ಲಿ ...ಡಿದರು.

...ಗೆ ಆಧಾರದಲ್ಲಿ ಕಾರ್ಮಿಕರನ್ನು ...ಕೊಳ್ಳುವ ಪರಿಪಾಠ ಹೆಚ್ಚಾಗುತ್ತಿದೆ. ಆದರೆ ...ರ್ಮಿಕರಿಗೆ ಕೆಲಸದ ನಿಯಮಾವಳಿ ಹಾಗೂ ...ಗಳನ್ನು ಶಾಸನಬದ್ಧವಾಗಿ ನೀಡುತ್ತಿಲ್ಲ. ...ಡಿ ನೌಕರರಿಂದ ದಿನವಿಡೀ ಬೇರೆ ಬೇರೆ ...ರಿಯ ಕೆಲಸಗಳನ್ನು ಮಾಡಿಸುತ್ತಾರೆ. ಆದರೆ ಅದಕ್ಕೆ ಸರಿಯಾದ ಸವಲತ್ತು ಇಲ್ಲ. ಬಿಸಿ ಊಟ ಕಾರ್ಮಿಕರಿಗೆ ತೀರಾ ಅತ್ಯಲ್ಪ ವೇತನವನ್ನು ಗೌರವಧನದ ಹೆಸರಿನಲ್ಲಿ ಕೊಡುತ್ತಿರುವುದು ನಾಚಿಕೆಗೇಡಿನ ವಿಷಯ. 1000 ಬೀಡಿ ಮಾರಾಟದಲ್ಲಿ ಸರಕಾರಕ್ಕೆ 15 ರೂ.ನಷ್ಟು ಆದಾಯ ಸಿಗುತ್ತಿದ್ದರೂ ಅದೇ ಬೀಡಿ ಕಾರ್ಮಿಕರಿಗೆ ಸರಕಾರದಿಂದ ಸಿಗುವ ಪ್ರಯೋಜನ ಅತ್ಯಲ್ಪವಾಗಿದೆ. ಅಸಂಘಟಿತ ಕಾರ್ಮಿಕರಿಗೆ ವೇತನ ತಿಂಗಳಿಗೆ ರೂ. 6,000 ಎಂದು ಕಾನೂನು ಜಾರಿಯಾಗಬೇಕು. ಬೆಲೆ ನಿಯಂತ್ರಣಕ್ಕೆ ಬರಬೇಕು. ಬಿಸಿಯೂಟ ಯೋಜನೆಯನ್ನು ಖಾಸಗೀಕರಣಗೊಳಿಸುವುದನ್ನು ಕೈಬಿಡಬೇಕು.

ಭಾರತ ದೇಶದಲ್ಲಿ ವಾಸ್ತವವಾಗಿ ಎರಡು ಭಾರತ ಅಸ್ತಿತ್ವದಲ್ಲಿದೆ. ಮೊದಲನೆಯದು ಬೆಳಗುತ್ತಿರುವ ಭಾರತ. ಇದು ಕೆಲವು ಜನರಿಗೆ ಮಾತ್ರ. ಅವರ ಆಸ್ತಿ ಡಾಲರ್‌ಗಳಲ್ಲಿ ಮಿಲಿಯನ್‌ಗಟ್ಟಲೆ ಬೆಳೆಯುತ್ತಿದೆ. ಜಪಾನಿನಲ್ಲಿ ಇರುವುದಕ್ಕಿಂತಲೂ ದೊಡ್ಡ ಮಿಲಿಯಾಧಿಪತಿಗಳು ಭಾರತದಲ್ಲಿದ್ದಾರೆ. ಈ ಭಾರತದಲ್ಲಿ ಜನ ಹಸಿವಿನಿಂದ, ದಾರಿದ್ರ್ಯದಿಂದ ನರಳುತ್ತಿದ್ದಾರೆ. ಎಂದರು.

ಈ ಸಭೆಯ ಅಧ್ಯಕ್ಷತೆಯನ್ನು ಸಿಐಟಿಯು ಉಡುಪಿ ಜಿಲ್ಲಾಧ್ಯಕ್ಷ ಕೆ.ಶಂಕರ್ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ ರೈ ಸ್ವಾಗತಿಸಿದರು. ಉಪಾಧ್ಯಕ್ಷ ಅದಮಾರು ಶ್ರೀಪತಿ ಆಚಾರ್ಯರು ವಂದನಾರ್ಪಣೆ ಮಾಡಿದರು. ಸಭೆಯ ಮೊದಲು ಸುಮಾರು 2000 ಮಂದಿ ಕಾರ್ಮಿಕರ ಆಕರ್ಷಕ ಮೆರವಣಿಗೆ ನಡೆಯಿತು.

ಆಹಾರದ ಭದ್ರತೆಗಾಗಿ ಸಾರ್ವತ್ರಿಕ ಪಡಿತರ ವ್ಯವಸ್ಥೆ ಜ್ಯಾರಿಯಾಗಲಿ

ಬಿ. ಮಾಧವ

ದೇಶದ ಪ್ರತಿಯೊಬ್ಬ ಪ್ರಜೆಗೂ ಆಹಾರದ ಭದ್ರತೆ ಲಭಿಸಬೇಕಾದರೆ, ಸಾರ್ವತ್ರಿಕ ಪಡಿತರ ವ್ಯವಸ್ಥೆ ಜಾರಿಯಾಗಬೇಕು ಎಂದು ಸಿಐಟಿಯು ರಾಜ್ಯ ಅಧ್ಯಕ್ಷ ಬಿ.ಮಾಧವ ಅವರು ನ.15 ರಂದು ಉಡುಪಿ ಜಿಲ್ಲಾ ಸಿಐಟಿಯು 3ನೇ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು.

ಸರಕಾರದ ಪ್ರಕಾರ ದೇಶದಲ್ಲಿ ಕಡುಬಡವರ ಸಂಖ್ಯೆ ಶೇ.26 ಮಾತ್ರ. ಇದರಿಂದಾಗಿ ಕೇಂದ್ರ ಸರಕಾರ ಹೆಚ್ಚಿನ ಜನರಿಗೆ ಆಹಾರದ ಭದ್ರತೆಯನ್ನು ನಿರಾಕರಿಸುತ್ತಿದೆ ಎಂದರು.

ದೇಶದಲ್ಲಿ ಭವಿಷ್ಯನಿಧಿ ಮಸೂದೆಯನ್ನು ಅಂಗೀಕಾರ ಮಾಡಿವುದರ ಮೂಲಕ 3,000 ಕೋಟಿ ರೂ. ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಹೂಡಿಕೆ ಮಾಡಲಾಗುತ್ತಿದೆ. ಇದರಿಂದ ಖಾಸಗೀ ವಲಯದ ಕಾರ್ಮಿಕರ ಪಿಂಚಣಿ ವ್ಯವಸ್ಥೆ ಖಾಸಗಿ ಸಂಸ್ಥೆಗಳ ಪಾಲಾಗಲಿದೆ. ಕೇಂದ್ರ ಸರಕಾರ ಕಾರ್ಮಿಕರ ಕಲ್ಯಾಣ ಯೋಜನೆಗಳನ್ನು ಒಂದೊಂದಾಗಿ ಕೈಬಿಡುತ್ತಿದೆ. ಇದರ ವಿರುದ್ಧ ಕಾರ್ಮಿಕರು ಜಾತಿ ಧರ್ಮದ ಗೋಡೆಯನ್ನು ತ್ಯಜಿಸಿ ಒಂದಾಗಬೇಕು ಎಂದು ಕರೆ ನೀಡಿದರು.

ಈ ಸಮ್ಮೇಳನದಲ್ಲಿ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಕಾಂ. ಕೆ.ಶಂಕರ್ ಉಪಾಧ್ಯಕ್ಷರು ಆದಮಾರು ಶ್ರೀಪತಿ ಆಚಾರ್ಯ, ಮಹಾಬಲ ಒಡೇರಹೋಬಳಿ, ದೋಗು ಸುವರ್ಣ, ಪ್ರಧಾನ ಕಾರ್ಯದರ್ಶಿ ಪಿ.ವಿಶ್ವನಾಥ ರೈ, ಕೋಶಾಧಿಕಾರಿಯಾಗಿ ಡೆರಿಕ್ ಎ.ರೆಬೆಲ್ಲೋ, ಕಾರ್ಯದರ್ಶಿಗಳಾಗಿ ರಮೇಶ್ ಮೆಂಡನ್, ಕೆ.ಲಕ್ಷ್ಮಣ ಇವರನ್ನು ಆಯ್ಕೆ ಮಾಡಲಾಯಿತು.

■ **ರಮೇಶ್ ಮೆಂಡನ್**



ಸದ್ದಿಲ್ಲದ ಸರಳ ಮದುವೆ...

ಡಿವೈಎಫ್‌ಐ ರಾಜ್ಯ ಉಪಾಧ್ಯಕ್ಷರು, ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾಂ. ಮುನೀರ್ ಕಾಟಿಪಳ್ಳಿ ಮತ್ತು ಶಬನಾರವರ ವಿವಾಹವು 8.11.2009 ರಂದು ಸರಳವಾಗಿ ಮಂಗಳೂರಿನಲ್ಲಿ ನಡೆಯಿತು.

ದಕ್ಷಿಣ ಕನ್ನಡ ಜಿಲ್ಲೆಯ 'ಮುಸ್ಲಿಂ ಸಮುದಾಯದ ಮದುವೆಯೆಂದರೆ ಆಡಂಬರ, ವರದಕ್ಷಿಣೆ, ಕೆ.ಜಿ.ಗಟ್ಟಲೆ ಚಿನ್ನ, ಗಡದ್ದಾದ ಬಿರಿಯಾನಿ ಊಟ ಇದ್ದರೆ ಮಾತ್ರ' ಎನ್ನುವ ನಂಬಿಕೆಗೆ ವಿರುದ್ಧವಾಗಿ ಈ ಮದುವೆಯು 'ಹೀಗೂ ಆಗುತ್ತೆ' ಅನ್ನುವುದನ್ನು ತೋರಿಸಿ ಕೊಟ್ಟಂತಾಗಿದೆ.

ತನ್ನ ಮನೆಯ ಅಂಗಳದಲ್ಲಿ 30 ನಿಮಿಷಗಳ ಸರಳ ಸಮಾರಂಭದಲ್ಲಿ ಸಂಬಂಧಿಗಳು ಮತ್ತು ಸಂಗಾತಿ ಮಿತ್ರರ ಉಪಸ್ಥಿತಿಯಲ್ಲಿ ಎಳನೀರು, ಲಘು ಉಪಹಾರದ ಸರಳ ಆತಿಥ್ಯದೊಂದಿಗೆ ನಡೆದ ಈ ಮದುವೆ ಇತರರಿಗೆ ಮಾದರಿಯಾಗಿ ಕಾಣುತ್ತಿತ್ತು. ನೂತನ ದಂಪತಿಗಳನ್ನು ಬಂದವರು ಹಾರೈಸಿದರು. ■

ಜನಶಕ್ತಿಯ ಬರಹಗಾರರೂ ಆದ ಮುನೀರ್ ಕಾಟಿಪಳ್ಳ ಮತ್ತು ದಂಪತಿಗಳಿಗೆ ಶುಭಾಶಯ ಕೋರಿದೆ.

ದಯಾನಂದ ಶೆಟ್ಟಿ



■ ನಕುಲ

'ದೇವರು ಕೊಟ್ಟ ತಂಗಿ' ಪ್ರೇಕ್ಷಕರಿಗೆ ಶಾಪ

ಈ ಪುಣ್ಯಾತ್ಮನ ತಲೆಯಲ್ಲಿ ಇನ್ನೆಂಥಾ ಲದ್ದಿ ತುಂಬಿದೆಯೋ ಗೊತ್ತಿಲ್ಲ! ಈಗಾಗಲೇ ಈತನ 'ಅಣ್ಣ-ತಂಗಿ' ಸರಣಿ ಚಿತ್ರಗಳನ್ನು ಕಂಡು ಜನ ದಿಗ್ಭ್ರಾಂತರಾಗಿರುವಾಗ ಮತ್ತೆ 'ತಂಗಿ'ಯನ್ನು ಜನರತ್ತ ಒಗೆದಿದ್ದಾರೆ. ಅಣ್ಣ-ತಂಗಿ ಸೆಂಟಿಮೆಂಟ್‌ನ 'ಓವರ್‌ಡೋಸ್' ಅರಗಿಸಿಕೊಳ್ಳಲಾಗದೆ ಜನ ಥಿಯೇಟರ್‌ನತ್ತ ತಲೆ ಹಾಕದೆ ನೆಮ್ಮದಿಯಿಂದ ಇದ್ದರೆ, ಎಲ್ಲೋ ಕೆಲವು ಮಂದಿ, ಅದರಲ್ಲಿ ನಾನೂ ಸೇರಿ - ಈ ಚಿತ್ರ ನೋಡಿ ಮೂರ್ಖರಾಗುವ ಪರಿಸ್ಥಿತಿಗೆ ನೂಕಿದ ಮಹಾನುಭಾವ ಮತ್ತಾರು ಅಲ್ಲ ಓಂ ಸಾಯಿಪ್ರಕಾಶ್!

ದೈವಭಕ್ತಿ ವೈಯಕ್ತಿಕ ವಿಚಾರ. ಆದರೆ ಅದರ ನೆಪದಲ್ಲಿ ಮೂಢನಂಬಿಕೆಗಳ ಆಚರಣೆಗೆ ಮುಗ್ಧ ಜನರನ್ನು ಉದ್ದೀಪಿಸುವುದು ಅಕ್ಷಮ್ಯ. ಈಗಾಗಲೇ ಹಲವು ಟಿ.ವಿ. ವಾಹಿನಿಗಳಲ್ಲಿ ದಿನ ಬೆಳಗಾದರೆ ಜೋತಿಷ್ಯ - ಜಾತಕ ಫಲಗಳ ಹಾವಳಿ ಹೆಚ್ಚಾಗಿ ಜನರನ್ನು ಅಜ್ಞಾನದಲ್ಲಿಯೇ ಮುಳುಗಿಸಿಡುವ ಪ್ರಯತ್ನಗಳು ನಡೆದಿರುವಾಗ, ಚಲನಚಿತ್ರಗಳಲ್ಲಿ ಅಂತದ್ದೇ ಕಂದಾಚಾರಗಳ ವೈಭವೀಕರಣಕ್ಕೆ ತೊಡೆ ತಟ್ಟಿ ನಿಂತಿರುವ ಸಾಯಿಪ್ರಕಾಶ್‌ರಂತವರನ್ನು ಕಂಡರೆ ಕ್ಯಾಕರಿಸಿ ಉಗಿಯಬೇಕೆನಿಸುತ್ತದೆ. ಆದರೆ ಜ್ಞಾನ-ವಿಜ್ಞಾನ-ಅಜ್ಞಾನಗಳ ಅರಿವೇ ಇಲ್ಲದ ಮುಗ್ಧ ಜನರ ಪಾಡೇನು? ಇದೇ ಸತ್ಯ ಎಂದು ಅದರ ಅನುಕರಣೆಗೆ ಮುಂದಾದಲ್ಲಿ ಗತಿಯೇನು?

ಇದಷ್ಟೇ ಅಲ್ಲದೆ ಜೀತಗಾರಿಕೆಯನ್ನೂ ಬೆಂಬಲಿಸುವುದಲ್ಲದೆ, ಪಾಳೆಗಾರಿಕೆಯ ಅಡಿಯಾಳಾಗಿ ಬಾಳುವುದೇ ಶ್ರೇಷ್ಠ ಎಂಬ ಸಂದೇಶವೂ ಚಿತ್ರದಲ್ಲಿರುವುದು ದುರಂತ!

ಸೆನ್ಸಾರ್ ಮಂಡಳಿ ಇರುವುದು ಕೇವಲ ಹಿಂಸೆ-ಅಶ್ಲೀಲತೆಗಳ ಕಡಿವಾಣಕ್ಕೆ ಮಾತ್ರವೇ? ಮೂಢನಂಬಿಕೆಗಳ ವಿಜೃಂಭಣೆಯ ಇಂತಹ ಚಿತ್ರಗಳಿಗೆ ಹೇಗೆ ಅನುಮತಿ ನೀಡುತ್ತಾರೆ! ಅದರಲ್ಲೂ ಸರ್ಕಾರವೇ ನಿಷೇಧಿಸಿರುವ ಹಲವು ಅಂಧಾನುಚರಣೆಗಳ ವೈಭರೀಕರಣವನ್ನು ಕಂಡೂ ಜಾಣ ಕುರುಡಾಗಿದ್ದಾರೆಯೇ?

ನಾಯಕ 'ಸಿಡಿ' ಏರುತ್ತಾನೆ (ಅರಕೆ ಹೊತ್ತ ವ್ಯಕ್ತಿಯ ಬೆನ್ನಿಗೆ ಕಬ್ಬಿಣದ ಕೊಂಡಿಯನ್ನು ಚುಚ್ಚಿ ಹಗ್ಗಗಳ ಮುಖಾಂತರ ಮೇಲಕ್ಕೆ ಏರಿಸುತ್ತಾರೆ - ಈ ಆಚರಣೆಯನ್ನು ಸರ್ಕಾರ ನಿಷೇಧಿಸಿದೆ), ಕೆಂಡ ಹಾಯುತ್ತಾನೆ, ಉರುಳುಸೇವೆ..... ಒಂದೆರೆಡಲ್ಲ. ತಂಗಿಯೂ ಸಾಮಾನ್ಯಳಲ್ಲ 'ನಾಗರ ಪಂಚಮಿ' ಯಲ್ಲಿ ಹುತ್ತದ ಮಣ್ಣನ್ನು ಅಣ್ಣನ ಬೆನ್ನಿಗೆ ಮೆತ್ತುತ್ತಾಳೆ, ಅವೈಜ್ಞಾನಿಕ ಆಚರಣೆಗಳಿಗೆ ಸಮಜಾಯಿಷಿ ನೀಡುವ ಪ್ರಯತ್ನವನ್ನು ನಿರ್ದೇಶಕರು ಮಾಡುತ್ತಾರೆ. ಈ ತಂಗಿ ಕೊನೆಗೆ 'ಕೆರೆಗೆ ಹಾರ'ವಾಗಲು ಹೋಗುತ್ತಾಳೆ. ಇಡೀ ಚಿತ್ರ ಜೋತಿಷ್ಯ-ಜಾತಕ, ಮೂಢನಂಬಿಕೆ, ಜೀತ ಪದ್ಧತಿಯ ಆಚರಣೆಗಳ ಸಮರ್ಥನೆಗೆ ಉದಾಹರಣೆ ನಿಲ್ಲುತ್ತದೆ.



ಯಾರೂ ಕಂಡು ಕೇಳರಿಯದಂತಹ ಅಣ್ಣ-ತಂಗಿಯರ ಅನುಬಂಧದ ಚಿತ್ರಣ ತೀರ ಅಸಹಜವೆನಿಸುತ್ತದೆ. ಚಿತ್ರಕ್ಕೊಂದು ಕಥೆಯೇ ಇಲ್ಲದ್ದರಿಂದ ಅಣ್ಣ (ಶಿವರಾಜಕುಮಾರ್) ತಂಗಿ (ಮೀರಾ ಜಾಸ್ಮಿನ್)ಯರ ಅನುಬಂಧದ ಭಾವತೀವ್ರತೆಯನ್ನು ಮನದಟ್ಟು ಮಾಡಲು ಹಲವು ಸನ್ನಿವೇಶಗಳನ್ನು ತುರುಕಿ, ಸಾಯಿಪ್ರಕಾಶ್ ಸಾಕಷ್ಟು ತಿಣುಕಾಡಿದ್ದರೂ ಅದರಲ್ಲಿ ಸೋತಿದ್ದಾರೆ. ಈ ಸನ್ನಿವೇಶಗಳು ಶಿವಣ್ಣನವರ ಹಿಂದಿನ ಚಿತ್ರಗಳನ್ನು ನೆನಪಿಸುತ್ತವೆ. ತರ್ಕಕ್ಕೆ ನಿಲುಕದ ಆತಾರ್ಕಿಕ ಪಾತ್ರ ಪೋಷಣೆಯಿಂದ ನೋಡುಗರು ಅಸಹನೆಯಿಂದ ಚಡಪಡಿಸುತ್ತಾರೆ.

ಚಿತ್ರಕ್ಕೊಂದು ಅಂತ್ಯ ಕಾಣಿಸಲೇಬೇಕಾದ ಅನಿವಾರ್ಯತೆಯಿಂದ ಪ್ರಯಾಸದಿಂದ ಕಥೆಯೊಂದನ್ನು ಹೆಣೆದಿದ್ದಾರೆ ನಿರ್ದೇಶಕರು. ಅಣ್ಣ - ತಂಗಿಯ ಸಂಬಂಧದ ಕುರಿತು ಹೆಂಗೆಳೆಯರ ಕರುಳು ಇರಿಯುವ ಸನ್ನಿವೇಶಗಳ ನಂತರ ತಂಗಿ ಮದುವೆಯಾಗುತ್ತದೆ. ಅದೂ ಅಣ್ಣ ಜೀತ ಮಾಡುವ ಮನೆಯ ಮಗನ ಜೊತೆ(ಇದು ಇನ್ನೊಂದು ಅಸಂಬದ್ಧ ಚಿತ್ರಣ-ವಿವರಣೆ ಅನಗತ್ಯ). ಎಂದಿನಂತೆ ಭೂಮಾಲೀಕ ಯಜಮಾನರು ದೇವತಾ ಮನುಷ್ಯರು. ಆದರೆ ಮನೆ ಮಕ್ಕಳು-ಸೊಸೆಯರು ಕಿರಾತಕರು. ತಮ್ಮ ಮನೆಯ ಆಳಾಗಿರುವವನ ತಂಗಿ ಮನೆ ಸೊಸೆಯಾಗುವುದನ್ನು ಸಹಿಸದೆ ಹಲವು ಹಿಂಸೆಗಳನ್ನು ನೀಡುತ್ತಾರೆ. ಆಕೆ ಬಸುರಿಯಾದಾಗ ಹುಟ್ಟುವ ಮಗುವಿನಿಂದ ಮಾವನಿಗೆ ಸಾವಿದೆ ಎಂದು ಪುರೋಹಿತರ ಕೈಯಲ್ಲಿ ಹೇಳಿಸುತ್ತಾರೆ. ಜೊತೆಗೆ ಊರಿಗೆ ಪ್ರವಾಹ ಬಂದು ಚೊಚ್ಚಿಲ ಬಸುರಿ ಬಲಿ ಕೊಟ್ಟರೆ ಪ್ರವಾಹ ನಿಲ್ಲುತ್ತದೆಂದೂ ಹೇಳಿಸುತ್ತಾರೆ(ಇಂಥಾ ಸಿನಿಮಾ ನೋಡಬೇಕಾಗಿ ಬಂದದ್ದು ನಮ್ಮ ಕರ್ಮ). ಆಕೆ ಅಣ್ಣನಿಗೆ ಸಾವಾಗಬಾರದೆಂದು ಕೆರೆಗೆ ಹಾರವಾಗಲು ಹೊರಡುತ್ತಾಳೆ.

ಇತ್ತ ಅಣ್ಣ ತಂಗಿಗೆ ಸುಖ ಪ್ರಸವವಾಗಲೆಂದು 'ಸಿಡಿ' ಏರಲು ಹೊರಡುತ್ತಾನೆ. ಗಾಬರಿ ಬೀಳಬೇಕಾದ ಅವಶ್ಯಕತೆಯಿಲ್ಲ. ನಿರ್ದೇಶಕರು ನಂಬಿದ 'ದುತ್ತರಗಿ ಭಗವಂತಿ'ಯ ಕೃಪಾಕಟಾಕ್ಷದಿಂದ ಎಲ್ಲವೂ ಸುಖಾಂತ್ಯವಾಗುತ್ತದೆ. ಆದರೆ ಆ ಮಹಾತಾಯಿಯ 'ಕೃಪಾಕಟಾಕ್ಷ' ನಮ್ಮ ನಿರ್ದೇಶಕರ ಜೇಬಿನತ್ತ ಬೀಳದಿರುವುದು ನಿಜಕ್ಕೂ ದುರದೃಷ್ಟಕರ! ಸಾಯಿಪ್ರಕಾಶ್‌ರವರೇ ನಿರ್ಮಿಸಿರುವ ಈ ಚಿತ್ರ ಖಾಲಿ ಹೊಡೆಯುತ್ತಿದ್ದು, ಯಾವ ಪವಾಡ ನಡೆದರೂ ಅವರ ಗಲ್ಲಾ ಪೆಟ್ಟಿಗೆ ತುಂಬುವುದು ಕಷ್ಟಕರವೆನಿಸುತ್ತಿದೆ.

ಕವಿತೆ

ಸಾವು ಮತ್ತು ಲಾಭ

ಜೀವಗಳು ನಮ್ಮ ಜೀವಗಳು
ಸಾವುಗಳಾದವೋ ಸಾವುಗಳು
ಲೋಭಗಳು ನಿಮ್ಮ ಲೋಭಗಳು
ಲಾಭಗಳಾದವೋ ಲಾಭಗಳು

ಹರಗಿ ಹೊಲವ ಮಾಡಿ ಹದವ
ಬಿತ್ತಿಕೊಂಡರೋ ಬೀಜವ
ಮಳೆಯೇ ಬಾರದೆ ಇಳೆಯ ಸೇರದೆ
ಕಿತ್ತುಕೊಂಡರೋ ಜೀವವ

ತೆರೆಯ ಕರೆ ಹರೆಯ ಮಳೆ
ಬೆಚ್ಚಿಬಿದ್ದರೋ ಮನುಜರು
ಬಡಿದ ಕೆರೆ ಸಿಡಿದ ನದಿ
ಕೊಚ್ಚಿ ಹೋದವೋ ಮನೆಗಳು

ಹರಿದ ಮುಗಿಲು ಸುರಿದ ಸೋನೆ
ಅಳಿದು ಹೋದವೋ ಬೆಳೆಗಳು
ಪ್ರಳಯ ಜಲ ಬಿರಿದ ನೆಲ
ಕಳೆದು ಹೋದವೋ ದನಗಳು

ಬೆಳೆದ ಬೆಳೆ ಬಾರದ ಬೆಲೆ
ನೀಗಿಕೊಂಡರೋ ರೈತರು
ಸಾಲದ ಶೂಲ ಬಡ್ಡಿಯ ಜಾಲ
ಕೊರಳ ಕೊಟ್ಟರೋ ಕೃಷಿಕರು

ನೆರೆಗೆ ನೆರವು ಕಷ್ಟ ತೆರವು
ಮಿಡಿದು ಮೆರೆದವೋ ಮನಗಳು
ಅಲುಗಿದ ಬಾಳು ನಲುಗಿದ ತೋಳು
ಕಾಯ ಕಾಯಿಸೋ ತುಸು ಜನಗಳು

ಪ್ರೊ ಡಿ.ಬಿ. ಬಡಿಗೇರ
ಹರಪನಹಳ್ಳಿ

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R.Nagar, BANGALORE-560027 Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12, 18th Cross, S.R.Nagar, BANGALORE - 560 027 Karnataka (State) and Published at BANGALORE No 12 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 56002.. Editor : S.Y.GURUSHANTH